TIGHT BINDING BOOK

TEXT PROBLEM WITHIN THE BOOK ONLY

TEXT FLY WITHIN THE BOOK ONLY

UNIVERSAL LIBRARY
OU_198484
UNIVERSAL LIBRARY

# ಸುಧಾ ತರಂಗ

ಉಮಾ-ಶಂಕರ

ಪ್ರಕಾಶಕರು:
ಸ್ವರ್ಣ-ಕಿರಣ ಪ್ರಕಾಶನ
ತುಮಕೂರು

ಮೊದಲ ಮುದ್ರಣ:

ಡಿಸೆಂಬರ್ ೧೯೫೯

ಎಲ್ಲಾ ಹಕ್ಕುಗಳೂ ಗ್ರಂಥಕರ್ತರಿಗೇ ಮೀಸಲು.

ಬೆಲೆ: ಸಾದಾ ಪ್ರತಿ ೧-೫೦, ಉತ್ತಮ ಪ್ರತಿ ೨-೭೫

ಮುದ್ರಕರು :

ಜನರಲ್ ಏಜೆನ್ಸಿ ಮುದ್ರಣಾಲಯ

ತುಮಕೂರು

# ಕಿರುನುಡಿ

ಯಾವುದಾದರೂ ಸಹಕಾರ ಸಂಸ್ಥೆಯ ಸದಸ್ಯನಾಗಲು ಅಥವಾ ಬ್ಯಾಂಕಿನಲ್ಲಿ ದುಡ್ಡು ಇಡಲು ಬಯಸುವ ವ್ಯಕ್ತಿ ಖಾತರಿ ಕುಳವೆಂದು ಸ್ವೀಕೃತವಾದ ಖಾಯಂ ಸದಸ್ಯನೊಬ್ಬನ ಅನುಮೋದನೆಯ ಪತ್ರ ಪಡೆದಾಗ ಮಾತ್ರ ಅವನಿಗೆ ಪ್ರವೇಶಾವಕಾಶ ಲಭಿಸುತ್ತದೆ. ತುಮಕೂರಿನ ಶ್ರೀ ಟಿ. ಎಚ್.ಹೊನ್ನಗಂಗಪ್ಪ (ಉಮಾ-ಶಂಕರ)ನವರು ಸಾಹಿತ್ಯಕ್ಷೇತ್ರಕ್ಕೆ ಅಭ್ಯರ್ಥಿ ಯಾಗಿ ತಮ್ಮ ಬರೆಹಗಳ ಸಂಗ್ರಹವನ್ನು ಪ್ರಕಟಿಸುವುದರ ಮೂಲಕ ಅಭ್ಯರ್ಥನಾಪತ್ರ ಸಲ್ಲಿಸುತ್ತಿದ್ದಾರೆ. ನಾನಿನ್ನೂ ಆ ಕ್ಷೇತ್ರಕ್ಕೆ ಅಭ್ಯರ್ಥಿ. ನನ್ನ ಅಭ್ಯರ್ಥನಾಪತ್ರಕ್ಕೆ ಅಂಗೀಕಾರ ಮುದ್ರೆ ಬಿದ್ದಿದೆಯೊ ಇಲ್ಲವೊ ನನಗೇ ತಿಳಿಯದು. ಹೀಗಿರುವಾಗ ನಾನು ಯಾರಿಗೆ ತಾನೆ ಶಿಫಾರಸ್ಸು ಪತ್ರ ಕೊಡಬಲ್ಲೆ ? ಆದರೂ ತಮ್ಮ ಸಂಗ್ರಹದ ಪ್ರಾರಂಭದಲ್ಲಿ ನನ್ನ ಒಂದೆರಡು ಮಾತು ಇರಲೆಂದು ಬಯಸಿ ಅವರು ತಮ್ಮ ವಿಶ್ವಾಸವನ್ನು ಸೂಚಿಸಿದ್ದಾರೆ.

ಈ ಸಂಗ್ರಹದಲ್ಲಿ ಹತ್ತು ಲೇಖನಗಳಿವೆ ಅವುಗಳಲ್ಲಿ ಕೆಲವು ಸಣ್ಣ ಕತೆಗಳು, ಕೆಲವು ಚಿತ್ರಗಳು ಮತ್ತೆ ಕೆಲವು ಚಿತ್ರ-ಕಥೆಗಳು. 'ಮಾರ್ಗ ದರ್ಶನ', 'ಒಡೆದ ಕನ್ನಡಿ', 'ಕಲೆಯ ಕೊಂದ ಕಲಾವಿದೆ', 'ಹೃದಯಗಳು ಮಾತನಾಡಿದವು'– ಇವು ನನ್ನ ಮನಸ್ಸಿಗೊಪ್ಪಿರುವ ಕತೆ ಗಳು. ಇವುಗಳ ಮತ್ತು ಇತರ ಚಿತ್ರ ಮತ್ತು ಚಿತ್ರ-ಕಥೆಗಳ ವಸ್ತು ಮುಖ್ಯವಾಗಿ ಸಾಂಸಾರಿಕ ಅಥವಾ ಪ್ರಣಯ ಜೀವನಕ್ಕೆ ಸಂಬಂಧಿಸಿದ್ದು.

ಸಂಸಾರದ ಕಷ್ಟನಿಷ್ಠುರಗಳು ಚಿಂತೆಬೇಗುದಿಗಳು ಗರ್ಭಿಣಿಯ ಮನಸ್ಸಿನ ಮೇಲೆ ಮತ್ತು ವಿಕಾಸಗೊಳ್ಳುತ್ತಿರುವ ಗರ್ಭದ ಮೇಲೆ ಎಂಥ ಅಪಾಯಕಾರಕವಾದ ಪರಿಣಾಮವನ್ನು ಉಂಟುಮಾಡುತ್ತವೆಂಬುದನ್ನು 'ಮಾರ್ಗದರ್ಶನ'ದಲ್ಲಿ ಕಾಣಬಹುದು. ಕತೆಯೊಳಗೊಂದು ಕತೆ ಜೋಡಿಸಿ, ಒಂದು ಸಂಸಾರದಲ್ಲೊದಗಿದ ದುರಂತ ಘಟನೆ ಮತ್ತೊಂದು ಸಂಸಾರದ ಭವಿಷ್ಯವನ್ನು ಹೇಗೆ ರೂಪಿಸಿತೆಂಬುದು ಇಲ್ಲಿಯ ಮುಖ್ಯ ವಿಷಯ. ಇಲ್ಲಿ ಬಳಸಿರುವ ಪತ್ರ ಲೇಖನತಂತ್ರ ತುಂಬ ಉಚಿತವಾಗಿದೆ. ಸಣ್ಣವರಂತೆ ದೊಡ್ಡವರೂ ತಪ್ಪುಮಾಡುತ್ತಾರೆ; ಆದರೆ ಸಣ್ಣವರ ತಪ್ಪು

ಕ್ಷಮ್ಯವೆಂದು ದೊಡ್ಡವರಿಗೆ ಅರಿವಾಗುವುದು ತಾವು ತಪ್ಪುಮಾಡಿದಾಗ ಮಾತ್ರ ಎಂಬುದು 'ಒಡೆದ ಕನ್ನಡಿ' ಯಲ್ಲಿ ನಿರೂಪಣೆಗೊಂಡಿದೆ. ತೀವ್ರ ಕಲಾಭಿಮಾನ ವಿವೇಕವಿಲ್ಲದ ಸಂಸಾರದಲ್ಲಿ ಹೇಗೆ ದುರಂತಕ್ಕೆ ಕಾರಣ ವಾಗುತ್ತದೆಂಬ ಭಾವನೆ 'ಕಲೆಯು ಕೊಂದ ಕಲಾವಿದೆ'ಯಲ್ಲಿ ವ್ಯಕ್ತ ಗೊಂಡಿದೆ. ದೈಹಿಕ ಮತ್ತು ಮಾನಸಿಕ ಸಾಮರಸ್ಯವಿಲ್ಲದ ದಾಂಪತ್ಯ ಜೀವನ ಹೇಗೆ ಬಿರುಗಾಳಿಗೆ ಸಿಕ್ಕಿದ ದೋಣಿಯಂತಾಗುತ್ತದೆಂಬುದು 'ಹೃದಯುಗಳು ಮಾತನಾಡಿದವು' ಎಂಬ ಕತೆಯಲ್ಲಿ ಚಿತ್ರಿತವಾಗಿದೆ.

ಪರಸ್ಪರ ಸಂವಾದಿಯಾದ ಎರಡು ಕತೆ ಅಥವಾ ಘಟನೆಗಳ ಮೂಲಕ ಕತೆಯನ್ನು ಬೆಳೆಸುವುದು, ಕೊನೆಯ ತನಕ ಓದುಗರ ಕುತೂಹಲವನ್ನು ತಡೆಹಿಡಿಯುವುದು ಇಲ್ಲಿಯ ಕಥಾತಂತ್ರದ ವಿಶಿಷ್ಟಲಕ್ಷಣ. ಕತೆಗಾರರ ಶೈಲಿಯಲ್ಲಿ ನುರಿತ ಕೈವಾಡ ಎದ್ದು ಕಾಣುತ್ತದೆ. ಅಲ್ಲಲ್ಲಿ ನುಸುಳಿ ಬರುವ ಉಪಮಾರೂಪಕಗಳು ನವೀನವಾಗಿವೆ. ನಿದರ್ಶನಾರ್ಥವಾಗಿ ಒಂದೆರಡನ್ನು ಇಲ್ಲಿ ಉದಾಹರಿಸಬಹುದು. 'ಬೆಳಗಿನಿಂದ ಶಂಕರನ ಮಿದುಳಿನಲ್ಲಿ ಯೋಚನೆ ಗಳ ಚಾಪೆ ಸಿದ್ಧವಾಗುತ್ತಿತ್ತು' 'ಅವಳ ತಲೆ ಯೋಚನೆಗಳ ಅಂಗಡಿ ಯಾಯಿತು' 'ನೀರು ಚಿಮುಕಿಸಿ ಹಿಸುಕಿದಾಗ ಹೊರಟಿತು ಸುತ್ತ ಸಾಬೂನಿನ ನೊರೆ. ಅವಳ ಮಿದುಳಿಂದಲೂ ಚಿಮ್ಮಿದವು ನೊರೆ ನೊರೆ ಯಾಗಿ ನೂರಾರು ಭಾವನೆಗಳು !'.

ಈ ಕಥಾಸಂಕಲನ ಕತೆಗಾರರ ಭವಿಷ್ಯದ ಆಶಾಕಿರಣವಾಗಿದೆ. ಅಭ್ಯಾಸ ಸಾಧನೆಗಳಿಂದ ಅವರು ಉತ್ತಮ ಸಾಹಿತಿಯಾಗಬಲ್ಲ ಶಕ್ತಿ ಸಾಮರ್ಥ್ಯ ಅವರಲ್ಲಿವೆಯೆಂದು ಧಾರಾಳವಾಗಿ ಹೇಳಬಹುದು. ತಾವು ಕೈಗೊಂಡ ಕಾರ್ಯದಲ್ಲಿ ಅವರಿಗೆ ಆಸಕ್ತಿಯಿದೆ, ಉತ್ಸಾಹವಿದೆ, ವಿಶ್ವಾಸವಿದೆ, ಮೇಲಾಗಿ ನಿಷ್ಠೆಯಿದೆ. ಆದ್ದರಿಂದ ಅವರು ತಮ್ಮ ಪ್ರಯತ್ನದಲ್ಲಿ ಯಶಸ್ವಿ ಯಾಗುತ್ತಾರೆಂಬ ನಂಬಿಕೆ ನನಗಿದೆ. ಅವರ ಆ ಪ್ರಯತ್ನದಲ್ಲಿ ವಿದ್ಯಾಧಿ ದೇವತೆಯ ಕೃಪೆ ಹರಿಯಲೆಂದು ಹಾರೈಸುತ್ತೇನೆ.

'ಗುರುಕೃಪಾ'
ಮೈಸೂರು
೧೮-೧೨-೧೯೫೪

**ದೇ. ಜವರೇಗೌಡ**

# ಅರಿಕೆ

ಇದು ನನ್ನ ಪ್ರಥಮ ಕಥಾಸಂಕಲನ. ಇದರಲ್ಲಿ ಹತ್ತು ಕಥೆಗಳಿವೆ. ಈ ಎಲ್ಲ ಕಥೆಗಳೂ 'ಜನಪ್ರಗತಿ', 'ಚಿತ್ರಗುಪ್ತ', 'ತಾಯಿನಾಡು' ಮೊದಲಾದ ಪತ್ರಿಕೆಗಳ ಮೂಲಕ ಮೊದಲಬಾರಿಗೆ ಅಚ್ಚಾಗಿವೆ. ಕಳೆದ ಒಂದು ದಶಕದಲ್ಲಿ ಆಗಾಗ್ಗೆ ಬರೆದು ಪ್ರಕಟಣೆಗೊಂಡ ಕಥೆಗಳಲ್ಲಿ ನನ್ನ ದೃಷ್ಟಿಯಲ್ಲಿ ಉತ್ತಮವೆಂದು ಕಂಡವುಗಳನ್ನು ಇಲ್ಲಿ ಸಂಕಲಿಸಿದ್ದೇನೆ. ಸಹೃದಯರು ಮತ್ತು ವಿಮರ್ಶಕರ ದೃಷ್ಟಿಯಿಂದ ಇವು ಉತ್ತಮ ಕಥೆ ಗಳಲ್ಲದಿದ್ದರೂ ಸಾಮಾನ್ಯ ಕಥೆಗಳೆಂದು ಭಾವಿಸಿದರೂ ನಾನು ಧನ್ಯ.

ನನ್ನ ದೃಷ್ಟಿಯಲ್ಲಿ ಕಥೆ ಬರೆಯುವುದು ಒಂದು ಹುಚ್ಚು; ಅಂತೆಯೇ ಕತೆಗಾರನಾಗುವುದು ಒಂದು ಹುಚ್ಚೇ ಸರಿ. ನನ್ನ ಬಾಲ್ಯಜೀವನದಲ್ಲಿ ಎಡೆಹಾಯ್ದು ಸಂಕಷ್ಟಗಳ ನೋವನ್ನು ಮರೆಯಬೋಸುಗ ಸಾಹಿತ್ಯಾಭ್ಯಾಸಿ ಯಾದೆ. ಜೀವನದಲ್ಲಿ ಕಂಡು-ಕೇಳಿ-ಅನುಭವಿಸಿದ ನೋವು-ನಲಿವುಗಳನ್ನು ನನ್ನ ತೊದಲು ಮಾತುಗಳಲ್ಲಿ ಬರೆದನು. ಅವು ಕಥೆಗಳಾಗಿ ಪ್ರಕಟಣೆ ಗೊಂಡವು.

ಕಥೆಗಳು ಪ್ರಕಟಣೆಗೊಂಡಾಗಲೆಲ್ಲ ನನ್ನ ಸಾಹಿತ್ಯಾಭ್ಯಾಸಿ ಮಿತ್ರರು 'ನೀನೇಕೆ ಒಂದು ಕಥಾಸಂಕಲ ಕೊಡಬಾರದು ?' ಎಂದು ಪ್ರಶ್ನಿಸುತ್ತಿ ದ್ದರು. ಪುಸ್ತಕರೂಪದಲ್ಲಿ ತರುವ ಅವರ ಆಶಯ ನನ್ನ ಇಚ್ಛೆಯಾಗಿದ್ದರೂ ಕೂಡ ಕಾಲ-ಸನ್ನಿವೇಶ-ಆರ್ಥಿಕ ದೃಷ್ಟಿಯಿಂದ ಸಾಧ್ಯವಾಗದೆ ಹಿಂದೆ ಬಿದ್ದಿತ್ತು. ಇದೀಗ ಆ ಮಿತ್ರರ ಆಶಯ ಕೈಗೂಡಿದೆ.

ಇಲ್ಲಿ ಇನ್ನೊಂದು ಮಾತನ್ನು ಹೇಳದೆ ವಿಧಿ ಇಲ್ಲ. ಸ್ವಭಾವತಃ ಸೋಮಾರಿಯಾದ ನನ್ನಿಂದ ಕಥೆಗಳನ್ನು ಬರೆಸಲು ಪ್ರತ್ಯಕ್ಷ-ಅಪ್ರತ್ಯಕ್ಷವಾಗಿ ಅನೇಕ ಮಿತ್ರರು-ಹಿರಿಯರು ಕಾರಣರಾಗಿದ್ದಾರೆ. ಅವರನ್ನೆಲ್ಲಾ ಸ್ಮರಿಸಲು ಇಲ್ಲಿ ಸಾಧ್ಯವಿಲ್ಲದಿದ್ದರೂ ಇಬ್ಬರು ಹಿರಿಯರನ್ನು ನೆನಸಲೇಬೇಕಾಗಿದೆ.

ಅದೊಂದುದಿನ (೧೯೫೩ನೇ ಇಸ್ವಿ ಫೆಬ್ರುವರಿ ತಿಂಗಳು) 'ಮಾರ್ಗ ದರ್ಶನ' ಕತೆ 'ಚಿತ್ರಗುಪ್ತ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ಕಥೆ

ಪ್ರಕಟವಾದ ಮರುದಿನ ನನ್ನ ಹೆಸರಿಗೆ ಒಂದು ಉಚಿತ ಕಾಪಿ, ಕಾಗದ ಅದರ ಜೊತೆಗೆ ಸಂಭಾವನೆ ಹಣವೂ ಬಂದಿತು. ಕಾಗದವನ್ನು ಸಂಪಾದಕರಾದ ಶ್ರೀ ಎಂ. ಎಸ್. ಭಾರದ್ವಾಜರು ಬರೆದಿದ್ದರು "ಮಾರ್ಗದರ್ಶನದಂಥ ಕಥೆಗಳಿಗೆ ಸದಾ ನಮ್ಮ ಸ್ವಾಗತವಿದೆ....ನಮ್ಮ ಕಛೇರಿಗೆ ಒಮ್ಮೆ ಬನ್ನಿರಿ" ಎಂದು ಪತ್ರದ ಒಕ್ಕಣೆ ಇತ್ತು. ಆ ಪತ್ರ, ಮಲಗಿ ನಿದ್ರಿಸುತ್ತಿದ್ದ ನನ್ನ ಮುಖಕ್ಕೆ ನೀರು ಸಿಂಪಡಿಸಿದಂತಾಯಿತು. ಅಲ್ಲಿಂದಾಚೆಗೆ ಆಗೊಮ್ಮೆ ಈಗೊಮ್ಮೆ ಕಥೆ ಬರೆಯುಲಾರಂಭಿಸಿದೆನು.

ಮತ್ತೊಂದುದಿನ ಶ್ರೀ ಎಂ.ಎಸ್.ಭಾರದ್ವಾಜರ ಜತೆಯಲ್ಲಿ ಸಿಕ್ಕಿದ ಹೆಸರಾಂತ ಸಾಹಿತಿ ಶ್ರೀ ನಿರಂಜನರು ನನ್ನ ಬೆನ್ನುತಟ್ಟಿ "....ಬರೆಯುವುದನ್ನು ಬಿಡಬೇಡಿರಿ....ನೀವು ಉತ್ತಮ ಕಥೆಗಳನ್ನು ಬರೆಯುಬಲ್ಲಿರಿ" ಎಂದರು. ಆ ಮಹನೀಯರ ಹಾರೈಕೆ ಫಲಿಸಿ ಉತ್ತಮ ಕಥೆಗಳು ನನ್ನಿಂದ ಹೊರಬೀಳದಿದ್ದರೂ ನನ್ನ ಬರವಣಿಗೆಗೆ ಕಾರಣಭೂತರಾದ ಆ ಈರ್ವರನ್ನು ಸ್ಮರಿಸುವುದು ನನ್ನ ಮೊದಲ ಕರ್ತವ್ಯ.

ಹಾಗೆಯೇ ನನ್ನ ಬದುಕಿಗೆ ಒಂದು ಅರ್ಥವನ್ನು ಕೊಟ್ಟ ನನ್ನ ಅಭ್ಯುದಯವನ್ನೇ ಹಾರೈಸುತ್ತಿರುವ ನನ್ನ ಎಲ್ಲ ಮಿತ್ರರು-ಬಂಧುಗಳು, ಒಡಹುಟ್ಟಿದ ಸೋದರ ಸೋದರಿಯರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳು ಸಲ್ಲಬೇಕು.

ಈ ಪುಸ್ತಿಕೆಯಲ್ಲಿ ಅಚ್ಚಿನ ದೋಷಗಳು ಸಾಕಷ್ಟು ಇವೆ. ಪುಸ್ತಿಕೆ ಅಚ್ಚು ಕಾಣುವ ಮುನ್ನವೇ ನಾನು ತುಮಕೂರನ್ನು ಬಿಟ್ಟು ಮೈಸೂರಿಗೆ ಹೊರಟ ಕಾರಣದಿಂದಾಗಿ ಕರಡುಪ್ರತಿ ನನ್ನಿಂದ ಪರಿಶೋಧಿಸಲಾಗಲಿಲ್ಲವಾದ್ದರಿಂದ ಅನಿವಾರ್ಯವಾಗಿ ಅನೇಕ ದೋಷಗಳು ಉಳಿದಿವೆ. ಈ ಬಗ್ಗೆ ಓದುಗರು-ವಿಮರ್ಶಕರು ಮನ್ನಿಸಬೇಕು.

ಹಿರಿಯರು, ಉತ್ತಮ ಸಾಹಿತಿಗಳು, ಮೈಸೂರು ವಿಶ್ವ ವಿದ್ಯಾನಿಲಯದ ಪರೀಕ್ಷಾಧಿಕಾರಿಗಳೂ ಆದ ಶ್ರೀಮಾನ್ ದೇ. ಜವರೇಗೌಡ, ಎಂ.ಎ.ರವರು ನನ್ನ ಮೇಲೆ ಕೃಪೆಯಿಟ್ಟು ತಮ್ಮ ಅಂತಃಕರಣದೊಲವಿನಿಂದ ಆಶೀರ್ವಾದ ಮಾತುಗಳನ್ನು ಕಿರಿನುಡಿ ರೂಪದಲ್ಲಿ ಬರೆದುಕೊಟ್ಟಿದ್ದಾರೆ. ಅವರಿಗೆ ನನ್ನ ವಿನಮ್ರ ಕೃತಜ್ಞತೆಗಳು ಸಲ್ಲುತ್ತವೆ.

ಈ ಪುಸ್ತಕ ಬೆಳಕು ಕಾಣುವ ಮುನ್ನವೇ ಕಥೆಗಳನ್ನು ಓದಿ "ಮಗೂ !....ನೀನು ಕಥೆಗಳನ್ನು ಬರೆಯಬಲ್ಲೆ ಕಣೋ....ಅಲ್ಲಲ್ಲಿ ಕಥಾ ತಂತ್ರದಲ್ಲಿ ಸ್ವಲ್ಪ ಶಿಥಿಲತೆ ಕಂಡರೂ ಚೆನ್ನಾಗಿವೆ....ಇದನ್ನು ಬೆಳಸಿಕೊಂಡು ಹೋಗು....ಮುಂದೆ ನೀನು ಶ್ರೀಮಂತನಾಗೆಂದು ಹೇಳುವುದಿಲ್ಲ ಅಥವಾ ದೊಡ್ಡ ಅಧಿಕಾರಿಯಾಗೆಂದು ಹೇಳುವುದಿಲ್ಲ....ದೊಡ್ಡ ಬಾಳನ್ನು ಬಾಳು ........ ಮಣ್ಣಿನಲ್ಲಿ ಹೊರಳಾಡುವ ಜಂತುವಾಗಬೇಡ........ ಆಕಾಶದಲ್ಲಿ ಹಾರಾಡುವ ಹಕ್ಕಿಯಾಗು........ ನಿನ್ನ ಆತ್ಮಶ್ರೀಯನ್ನು ಬೆಳೆಸಿಕೊ........ ಅಭ್ಯುದಯವನ್ನು ಕಾಣು" ಎಂದು ಮುಕ್ತಕಂಠದಿಂದ ಹರಸಿದ ಪೂಜ್ಯರು, ಜ್ಞಾನಿಗಳೂ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ 'ಪ್ರಸಾರಾಂಗ' ಶಾಖೆಯ ಡೆಪ್ಯುಟಿ ಡೈರೆಕ್ಟರ್‌ರಾದ ಶ್ರೀಮಾನ್ ತ. ಸು. ಶಾಮರಾಯ, ಎಂ.ಎ.ರವರಿಗೆ ನನ್ನ ಅನಂತ ನಮಸ್ಕಾರಗಳು ಸಲ್ಲುತ್ತವೆ.

ಅಲ್ಲದೆ, ಇಲ್ಲಿಯ ಕಥೆಗಳನ್ನು ಓದಿ ಮೆಚ್ಚಿಕೊಂಡ ವಿಶ್ವವಿದ್ಯಾನಿಲಯದ ಪ್ರಸಾರಾಂಗ ಶಾಖೆಯ ಅಸಿಸ್ಟೆಂಟ್ ಡೈರೆಕ್ಟರ್‌ರವರಾದ ಶ್ರೀ ಎಚ್. ನರಸಣ್ಣ, ಎಂ.ಎ.ರವರಿಗೂ ಗೆಳೆಯರಾದ ಶ್ರೀ ಜೀ.ಶಂ.ಪ. ಮತ್ತು ಕಲಾವಿದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಈ ಪುಸ್ತಕ ಹೊರಬರಲು ಮುಖ್ಯಕಾರಣರಾದ ಶ್ರೀ ಎಸ್.ರುದ್ರೇಗೌಡರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಜನರಲ್ ಏಜೆಂಸಿ ಪ್ರೆಸ್ಸಿನ ಮಿತ್ರರು, ಹಾಗೂ 'ವಿಜಯವಾಣಿ' ವಾರಪತ್ರಿಕೆ ಸಂಪಾದಕರಾದ ಶ್ರೀ ಎಚ್. ಆರ್. ಗುಂಡೂರಾಯರು ಇವರೆಲ್ಲರಿಗೂ ನಾನು ಋಣಿ.

'ತಾಯಿನಾಡು' ಪತ್ರಿಕೆಯ ವಾರದ ವಾಙ್ಮಯ ವಿಭಾಗದ ಸಂಪಾದಕರಾದ ಶ್ರೀ ಕೃಪಾರವರು ಕಲಾವಿದ ಶ್ರೀ ಎಸ್. ಎಲ್. ನಾರಾಯಣರು ಬರೆದ ಮುಖಚಿತ್ರದ ಬ್ಲಾಕನ್ನು ಕೊಟ್ಟು ಉಪಕರಿಸಿದ್ದಾರೆ ಅವರಿಗೂ ನನ್ನ ನೆನಕೆಗಳು ಸಲ್ಲಬೇಕು.

ಟಿ. ಎಚ್. ಹೊನ್ನಗಂಗಪ್ಪ

# ಪರಿವಿಡಿ


| | ಪುಟ |
|---|---|
| ಮಾರ್ಗದರ್ಶನ | ೧ |
| ನೆರೆ-ಹೊರೆ | ೧೫ |
| ಅನಾಥ ಶಿಶು | ೨೩ |
| ಒಡೆದ ಕನ್ನಡಿ | ೩೩ |
| ಬೀದಿಯ ಮಕ್ಕಳು | ೪೯ |
| ಕಲೆಯ ಕೊಂದ ಕಲಾವಿದೆ | ೫೯ |
| ಹೃದಯಗಳು ಮಾತನಾಡಿದವು | ೭೫ |
| ಸುಖ ಸ್ವಪ್ನದ ಸುಳಿಯಲ್ಲಿ....! | ೮೭ |
| ಪಶ್ಚಾತ್ತಾಪ ಬೇಕಿಲ್ಲ....! | ೯೭ |
| ಎಣ್ಣೆ ಮುಗಿಯಿತು ದೀಪದಲ್ಲಿ ! | ೧೧೧ |

# ಅರ್ಪಣೆ

ನನ್ನ ದಿಕ್ಕೆಟ್ಟ ಬಾಳಿಗೊಂದು ಅರ್ಥವನ್ನು ಕೊಟ್ಟು,
ನನ್ನ ಅಭ್ಯುದಯವನ್ನೇ ಹಾರೈಸುತ್ತಾ ಕಣ್ಮರೆಯಾದ
**ದಿವಂಗತ ವೇದಮೂರ್ತಿ ಬಾಳಪ್ಪಶಾಸ್ತ್ರಿಗಳ**
ಸಂಸ್ಮರಣೆಗೆ

# ಮಾರ್ಗದರ್ಶನ

ಬೆಳಗಿನಿಂದ ಶಂಕರನ ಮಿದುಳಿನಲ್ಲಿ ಯೋಚನೆಗಳ ಚಾಪೆ ಸಿದ್ಧ ವಾಗುತ್ತಿತ್ತು. ಮಧ್ಯಾಹ್ನ ಆಫೀಸಿಗೆ ನೇರ ಬಂದ ವಸಂತನ ಪತ್ರ ಮನಸ್ಸಿಗೆ ಕಸಿವಿಸಿ ತಂದಿತ್ತು. ಅದೇ ಚಿಂತೆಯಲ್ಲಿ ಶಂಕರ ಹಾಸಿಗೆಯ ಮೇಲೆ ಉರುಳಿದ್ದನು. ಹಾಗೇ ನಿದ್ರೆಯ ಜೊಂಪು ಹತ್ತಿತ್ತು. ಉಮಾ ಲೋಟದಲ್ಲಿ ಹಾಲು ಹಿಡಿದು ಅಭಿಸಾರಿಕೆಯಂತೆ ಬಂದಳು. ಶಂಕರನ ನಟನೆಯ ನಿದ್ರೆ ಕಂಡು ಚಕಿತಳಾದಳು ಉಮಾ.

"ರೀ.... ರ್ರೀ.... ರ್ರೀss...."

"ಹ್ಞಾಂ...."

"ಇಷ್ಟುಬೇಗ ನಿದ್ರೆ ಬಂತೇನ್ರೀ.... ಹಾಲು ಕುಡಿಯೋದಿಲ್ವೆ ?"

"ನಿದ್ರೆ ಏನಿಲ್ಲಾ.... ಏನೋ ಯೋಚಿಸ್ತಿದ್ದೆ.... ಹಾಲು ತಂದಿರುವೆಯಾ ?"

"ಹೌದು ನೋಡಿ........ ಆ ಮೇಜಿನ್ಮೇಲಿಟ್ಟಿದ್ದೀನಿ........ ಸಕ್ರೆ ಸಾಕೇನ್ನೋಡಿ....ಏನೋ ಅಂತ ಮಹತ್ತರ ಯೋಚನೆ....ಇನ್ನೇನು ಆರ್. ಎಂ.ಡಿ.ಸಿ.ಗೋ ಅಥ್ವಾ....ಇಲಸ್ಟ್ರೇಟೆಡ್ ವೀಕ್ಲಿ ಕ್ರಾಸ್‌ವರ್ಡ್ಸ್‌ಗೆ ತಾನೆ ನಿಮ್ಮ ಯೋಚನೆಯೆಲ್ಲಾ ಮೀಸಲು"

"ನನ್ನ್ಯೋಚ್ನೆ ಏನು ಅನ್ನೋದು ತಿಳಿಸ್ತೀನಿ.... ಆ ಮಾತಿರ್ಲಿ.... ಏಕಿಷ್ಟು ತಡ ಹನ್ನೊಂದು ಹೊಡೆದರೂ ರೂಂ ಸೇರಲಿಕ್ಕೆ ಅಮ್ಮಾವರು ರಾಹುಕಾಲ-ಗುಳಿಕಾಲ ನೋಡುತ್ತಿದ್ದೀರೇನೋ...."

"ಹೌದು.... ನಿಮ್ಮ ಮನೆಗೆ ಕೂತು ತಿನ್ನಲಿಕ್ಕೆ ತಂದಿರುವಿರಿ ಅಲ್ವೇ ?....ಬೆಳಗ್ಗಿನಿಂದ ಎರಡು ಕಾಲೂರಿ ಒಂದ್ಕಡೆ ನಿಲ್ದೆ ಗಾಣದ ಎತ್ತಿ ನಂತೆ ಗೇದರೂ ಈ ಮನೆಯಲ್ಲಿ ಬಿಡವು ಎನ್ನುವ ಶಬ್ದವೇ ಇಲ್ಲ.... ಅಹರ್ನಿಶಿ ದುಡಿದರೂ ನಿಮಗೆ ಸಮ್ಮತವೇ...."

"ಉಮಾ.... ಇಂದೇ ಕೊನೆ ನಿಮ್ಮ ಮನೆ ಅನ್ನಬೇಡ.... ನಮ್ಮ ಮನೆ ಅನ್ನು.... ಆ ಬಾಂಧವ್ಯ ಬೆಳೆಸುವುದರಲ್ಲಿ ನಮ್ಮ ಬದುಕಿದೆ. ನನ್ನ ಮನೆ.... ನನ್ನ ಬದುಕು ಎಂಬ ಬಾಂಧವ್ಯ ಹೆಣ್ಣಲ್ಲಿ ಬೆಳೆಯದ ಹೊರತು ಅದು ಸಂಸಾರವಾಗದು....ಬದುಕೆನಿಸಿಕೊಳ್ಳದು"

"ಹೌದು.... ನನಗೆ ನಿಮ್ಮಲ್ಲಿ ಯಾರಲ್ಲಿಯೂ ಪ್ರೀತಿ ಇಲ್ಲ ಎಂದಲ್ಲವೆ ನಿಮ್ಮರ್ಥ. ರೇಸಿಗೆ ಕಟ್ಟಿದ ಕುದುರೆಯಂತೆ ದುಡಿದರೂ ನಿಮಗೆ ಸಮಾಧಾನವಿಲ್ಲ. ದೊಡ್ಡವರು ಹೇಳುವುದು ದಿಟ 'ಹೆಣ್ಣಿನ ಬಾಳು ಕಣ್ಣೀರು' ಎಂದು. ಅಲ್ರೀ.... ಮನೆಯಲ್ಲಿ ಬೆಳಗಿನಿಂದ ಸಂಜೆಯವರೆಗೂ ಯಾರ್ಯಾರು ಏನುಮಾಡುವರು ಎಂದು ಗಮನಿಸಿರುವಿರಾ ? ಮನೆಯವರು ಪ್ರೀತಿ ತೋರಿಸಿದರೆ ತಾನೆ.... ನಮ್ಮಲ್ಲಿ ಅದು ಬೆಳೆಯುವುದು. ಅತ್ತೆ-ನಾದಿನಿಯರು ಕುಳಿತಿದ್ದರೂ ಅವರೆದುರಿನಲ್ಲಿ ಪಶುವಿನಂತೆ ದುಡಿದರೂ ನಮ್ಮ ಸಂಕಟವರಿಯುವರಿಲ್ಲ. ಅಷ್ಟೇಕೆ ಸಹಾನುಭೂತಿ ಕೂಡ ತೋರಿಸುವವರಿಲ್ಲ. ಮುಳುಗುವವನ ಬೆನ್ನಿಗೆ ಬೆಂಡಿನಂತಿರುವ ಪತಿಯೂ ಅವರ ಬೆನ್ನುಹಿಡಿದರೆ.... ಹೇಳಿ ಕೇಳಿಕೊಳ್ಳುವುದು ಯಾರಲ್ಲಿ.... ಒಟ್ಟಿನಲ್ಲಿ ನಾನು ದುರ್ದೈವಿ...."

"ಛೇ....ಕಣ್ಣೀರು ಕರೆಯಬೇಡ್ವೇ.... ನೀನು ತಿಳಿವಳು-ಸುಶಿಕ್ಷಿತಳು ಎಂದು ಇಷ್ಟು ಹೇಳಬೇಕಾಯಿತು. ಸಿನಿಮಾ-ಕಾದಂಬರಿಗಳಲ್ಲಿ ಕಾಣುವಂಥ ಸಂಸಾರವಲ್ಲ ನಮ್ಮದು. ಸ್ವಲ್ಪ ಯೋಚಿಸಿನೋಡು.... ನಮ್ಮದು ಕನಸಿನ ಮನೆಯಲ್ಲ ಕಟ್ಟುವ ಮನೆ"

"ಸರಿ, ಈಗ ನಾನೇನು ಮಾಡಬೇಕೂಂತ.... ಕಟುಕ ತಂದ ಕುರಿಯಂತೆ ಸದಾ ಆಹುತಿಗೆ ತಲೆ ಕೊಟ್ಟು ನಿಂತಿರಬೇಕು ಅಲ್ಲವೆ ? ನಾನೂ ಒಂದು ಮಾನವಪ್ರಾಣಿ. ಕತ್ತೆ ಹೊರುವಷ್ಟು ಹೇರು ಹೊರಬಲ್ಲದು.

ಹೇರಿನ ಬದಲು ಆನೆ ಕೂರಿಸಿದರೆ...."

"ಉಮಾ....! ಅಂಥ ಹೊರಲಾರದ ಹೊರೆ ಹೊರಿಸಲಿಕ್ಕೆ ನಿನ್ನನ್ನು ಕ್ರಯಕ್ಕೆ ತಂದ ದಾಸಿ ಎಂದು ತಿಳಿದಿಲ್ಲ. ನಿನಗೆ ಮನೆಯಲ್ಲಿ ಆಗುತ್ತಿರುವ ಹಿಂಸೆಯಾದರೂ ಏನು ?"

"ಒಂದಾದರೆ ಹೇಳಲಿಕ್ಕೆ ಬರುವುದು. ಇಷ್ಟೆಲ್ಲಾ ಪಗರಣವೇಕೆ ? ದುಡಿದು ಬಂದವರಿಗೆ ನಮ್ಮಿಂದೇಕೆ ಮನೆಯಲ್ಲಿ ದುಃಖ. ಬೇರೆ ಒಂದು ಮನೆಯೇಕೆ ಮಾಡಬಾರದು.... ನಮ್ಮಿಬ್ಬರಿಗೆ ಅನ್ನ ಹುಟ್ಟಿಸಿಕೊಳ್ಳುವ ಶಕ್ತಿ ನಮ್ಮಲ್ಲಿಲ್ಲವೆ ?"

"ಉಮಾಽಽ.... ಈ ಮಾತು ನಿನ್ನಂಥವಳು ಆಡಬಾರದು. ತಂದೆ-ತಾಯಿ-ಬಂಧುಗಳನ್ನು ತೊರೆದು ಹೋಗುವುದು ನೀನಾಡುವ ಮಾತಿನಷ್ಟು ಸುಲಭವಲ್ಲ. ಮಗನ ಭವಿತವ್ಯದ ಬಗ್ಗೆ ನೂರು ಕನಸುಗಳನ್ನು ಹೆಣೆದಿರುವ ತಂದೆ-ತಾಯಿಗಳಿಂದ ದೂರಾಗುವುದು ಒಳಿತಲ್ಲ. ಸಾಮಾನ್ಯ ಹೆಣ್ಣೊಬ್ಬಳು ಯೋಚಿಸುವಂತೆ ನೀನೂ ಯೋಚಿಸಿದರೆ ಶಿಕ್ಷಿತಳಾದ್ದದ್ದಕ್ಕೆ ಪ್ರಯೋಜನವೇನು ? ಬೇರೆ ಸಂಸಾರ ಹೂಡುವುದು ಹೆಚ್ಚಲ್ಲ. ಸಂಸಾರ ನಿಭಾಯಿಸಿ ನಾಲ್ವರಂತೆ ನಾವು ಎಂದು ತಲೆ ಎತ್ತಿ ನಿಲ್ಲುವಾಗ ನಮ್ಮ ಬದುಕು.... ಈ ಧೂರ್ತತೆ ಬೇಡ... ಒಟ್ಟಾಗಿ ಕೂಡಿ-ಒಟ್ಟಾಗಿ ಬೆಳೆಯುವುದು ಯೋಚಿಸು"

"ಹೌದು ನನ್ನದು ಧೂರ್ತತೆ... ನನ್ನಿಂದಾಗಿ ನಿಮಗೆ ಇಷ್ಟೆಲ್ಲಾ ತೊಂದರೆ" ಉಮಾಳ ಕಣ್ಣಲ್ಲಿ ನೀರು ಧುಮುಕಿದವು.

"ಹಾಗಲ್ಲ ಉಮಾ.... ಐದುತಿಂಗಳ ಗರ್ಭಿಣಿ ನೀನು.... ಚೊಚ್ಚಲು ಬಸಿರು. ನೂರು ಕನಸುಗಳಾಗರದಲ್ಲಿ, ಸಹಸ್ರಕಲ್ಪನೆಗಳನ್ನು ಕಾಣುವ ಕಾಲವಿದು. ತಲೆಗೆ ಸಲ್ಲದ ಯೋಚನೆಗಳನ್ನು ಹತ್ತಿಸಿಕೊಂಡು ಬೇಯಬೇಡ. ನಿನ್ನ ಕೈಲಾದ ಕೆಲಸಮಾಡಿ ತೆಪ್ಪಗೆ ಕೂರು.... ಯಾರಾದರು ಏನಾದರು ಅಂದರೆ ಕಿವಿಗೆ ಸೀಸ ಹೊಯ್ದುಕೊಂಡವಳಂತಿರು.... ನೀನು ಹೆಂಡತಿ, ನಿನಗೆ ಹೇಳಬಲ್ಲನೇ ವಿನಾ ಬೇರೆಯವರಿಗೆ ನೀವು ತಪ್ಪುಮಾಡಿದಿರಿ ಎಂದು ಹೇಳಲು ಸಾಧ್ಯವೇ ?.... ಉಮಾ ! ನಿನ್ನ ಈ ಸ್ಥಿತಿಯಲ್ಲಿ ನೀತಾವೇಗ

ಏನು ಬಯಸಿದಳು ಗೊತ್ತೇ...."

"ಮತ್ತೇನು.... ವನವಾಸ"

"ಅಲ್ಲಾ.... ಋಷಿಪತ್ನಿಯರ, ಸಜ್ಜನರ ಸಹವಾಸ"

"ಈ ಮಾತು ನನಗೇಕೆ ಹೇಳಿದಿರಿ ?"

"ಏಕೆ ಹೇಳಿದೆ ಅಂದರೆ. ಒಳ್ಳೆಯ ವಿಷಯಗಳನ್ನು ಕುರಿತು ಯೋಚಿಸುವ ಕಾಲವಿದು. ಈಗ ನಿನ್ನ ಹೃದಯ ಆಕಾಶದಷ್ಟು ವಿಶಾಲವಾಗಿರಬೇಕು. ನೀರಿನಷ್ಟು ನಿರ್ಮಲವಾಗಿರಬೇಕು ಎಂದು. ಯಾವ ತೊಡಕು-ತೊಂದರೆಗಳು ನಿನ್ನ ತಲೆಗೆ ಸುಳಿಯಬಾರದು. ಮುಂದಿನ ಪೀಳಿಗೆಗೆ ಆದರ ಕೆಡಕು ತಪ್ಪುವುದಿಲ್ಲ. ಬೇರಿಗೆ ಹುಳು ಹಿಡಿದರೆ ಅದರಿಂದ ದೊರಕುವ ಕಾಯಿ ಎಂತಹದು ಗೊತ್ತೆ ?.... ನೋಡು ನಿನಗೊಂದು ವಿಚಾರ ಹೇಳಬೇಕಾಗಿದೆ. ನಾನು ಮೊದಲು ಯೋಚಿಸುತ್ತಿದ್ದುದು ಅದೇ.... ವಸಂತ ಗೊತ್ತಲ್ಲ ನಿನಗೆ....!"

"ಯಾರು....?"

"ಅದೇ, ಕಳೆದ ವರ್ಷ ಮಂಡ್ಯದ ಮದುವೆಗೆ ಹೋಗಿರಲಿಲ್ಲವೆ ? ವಸಂತ–ಸುಧಾ ಇವರ ವಿವಾಹಕ್ಕೆ...."

"ಓಹೋ.... ಅವರೇ.... ನನ್ನ ಹೈಸ್ಕೂಲ್ ವಿದ್ಯಾಭ್ಯಾಸ ಅವರ ಮನೆಯಲ್ಲೇ ಕಳೆಯಿತು ಅಂದರಲ್ಲ ಆ ವಸಂತ ತಾನೆ ?"

"ಹೌದು, ಅವನೇ....!"

"ಅವರ ಮಾತೇಕೆ ಈಗ"

"ಈ ದಿನ ಅವನಿಂದ ಒಂದು ಕಾಗದ ಬಂದಿದೆ. ಅವನು ಕಾಗದ ಬರೆದು ಕೆಲವು ದಿನಗಳಾಗಿತ್ತು. ಕಾಗದ ಓದಿದ ಮೇಲಂತೂ ಕರುಳು ಕಿತ್ತಂಗಾಗುತ್ತಿದೆ"

"ಅಂಥ ಮಹದ್ವಿಷಯ ಏನೋ ?"

"ಮಹದ್ವಿಷಯವೇನಿಲ್ಲ. ಎಲ್ಲರ ಮನೆಯಲ್ಲಿ ನಡೆಯುವುದೇ ಆತನೂ ಬರೆದಿದ್ದಾನೆ. ಒಂದೇ ಹೆಂಚಿನಲ್ಲಿ ಎದ್ದ ದೋಸೆ ಬೇರೆ ಬೇರೆ ರುಚಿ ನೀಡುತ್ತದೆಯೇ ? ಅವನ ಸಂಸಾರದಲ್ಲಿ ಪ್ರಯೋಗ (experi-

ment) ನಡೆದುಹೋಗಿವೆ. ನನ್ನ ಸಂಸಾರದಲ್ಲಿ ಅದೇ ಪ್ರಯೋಗಕ್ಕೆ ಸಿದ್ಧತೆ ನಡೆಯುತ್ತಿದೆ"

"ನಿಮ್ಮ ಮಾತು ಒಗಟಾಗಿದೆ.... ಅದೇನ್ವಿಷಯ ವಿವರಿಸಿ ಹೇಳ ಬಾರದೆ"

"ಹೇಳಿ ಪ್ರಯೋಜನವಿಲ್ಲ.... ತಗೋ ಈ ಕಾಗದವನ್ನೇ ಓದು.... ನೀನು ಅಗತ್ಯ ಓದಬೇಕಾಗಿದೆ"

"ನಿಮಗೆ ಬಂದ ಕಾಗದ ನಾನೇಕೆ ಓದಲಿ ?"

"ಕಾಗದ ನನ್ನ ಹೆಸರಿಗೆ ಬಂದಿರುವುದಾದರೂ ವಿಷಯ ನಿನಗೆ ಸಂಬಂಧಿಸಿದ್ದು"

"ಆಂ.... ನನಗೇ.... ?!"

"ಹೌದು.... ನಿನಗೆ ಅಂದರೆ ನಿನ್ನಂಥ ಹೆಣ್ಣುಗಳಿಗೆ.... ಅಷ್ಟೇಕೆ ಒಮ್ಮೆ ಓದಿನೋಡು.... ತಗೋ...."

"ಏನ್ರೀ.... ಇಷ್ಟೊಂದು ಪುಟಗಳು.... ಈ ಗಂಡಸರಿಗೆ ತಾಳ್ಮೆ ಹೆಚ್ಚು ರ್ರೀ"

"ಮನದಲ್ಲೇ ಓದಿಕೊಳ್ಳಬೇಡ.... ಸ್ವಲ್ಪ ಗಟ್ಟಿಯಾಗಿ ಓದು.... ನಾನೂ ಕೇಳುವೆನು"

"ಪ್ರಿಯ ಶಂಕರ್" "ಬರೆದ ತಾರೀಖು.... ಊರು.... ಅದೂ ಓದಬೇಕೆ ?"

"ಬೇಡ ಬೇಡ.... ಮುಂವೆ ಓದು"

"ನಿನ್ನ ಕಡೆಯಿಂದ ಹಲವು ಪತ್ರಗಳು ಬಂದರೂ ಮರುಪತ್ರ ಬರೆಯುಲಾಗಲಿಲ್ಲ. ಅದಕ್ಕಾಗಿ ಕ್ಷಮೆ ಯಾಚಿಸದಿರೆ. ಎಷ್ಟೋಬಾರಿ ಕಾಗದ ಬರೆಯಬೇಕೆಂದು ಕುಳಿತವನು ಮನಸ್ಸಿನ ಯಾತನೆಯಿಂದಾಗಿ ಮೌನ ತಾಳಬೇಕಾಯಿತು. ಇಂದು ಬರೆಯಲೇ ಬೇಕಾಗಿದೆ ಬರೆಯುತ್ತಿದ್ದೇನೆ. ಸುಧೆ ಗರ್ಭವತಿ ಎಂದು ಕಳೆದ ಮೂರುತಿಂಗಳ ಹಿಂದೆ ಬರೆದಿದ್ದೆ. ಪ್ರಸವವಾಯಿತು. ಎಂಥಮಗು ? ಸಿಹಿ ಯಾವಾಗ ? ಎಂದು ನಾಲಿಗೆ ಚಪ್ಪರಿಸದಿರು. ಸುಧೆ ಸತ್ತ ಗಂಡುಶಿಶುವನ್ನು ಹಡೆದಳು. ಪ್ರಸವ

ಸುಸೂತ್ರವಾಗಿ ಆಗದೆ ಆಯುಧಗಳ ಸಹಾಯದಿಂದ ಹೊಟ್ಟೆ ಬಗಿದು ಮಗುವನ್ನು ಹೊರತೆಗೆಯಬೇಕಾಯಿತು. ಸುಧೆ ಸತ್ತು ಬದುಕಿದಳು. ಆಪರೇಷನ್ ನಡೆದ ಆರುದಿನಗಳು ಆಸ್ಪತ್ರೆಯಲ್ಲೇ ಇದ್ದಳು ಮೊನ್ನೆ ಮನೆಗೆ ಬಂದು ನಿನ್ನೆ ತವರಿಗೆ ಸಾಗಿದಳು. ಮತ್ತೆ ಅವಳು ಬರುವುದು ಮೂರುತಿಂಗಳಾದೀತು.

ಇಲ್ಲಿನ ಹೈಸ್ಕೂಲ್ ವ್ಯಾಸಂಗದಲ್ಲಿ ಮೂರು ವರ್ಷಗಳು ನಾವಿಬ್ಬರೂ ಕೂಡಿ ಬೆಳೆದೆವು. ಆ ದಿನಗಳು ಅದೆಂಥ ಸುದಿನಗಳು. ನಮ್ಮ ಭವಿತವ್ಯದ ಬಗ್ಗೆ ಕಂಡ ಭವ್ಯ ಕನಸೇನು ? ಕನಸುಬಿಟ್ಟು ವಾಸ್ತವ ಪ್ರಪಂಚಕ್ಕೆ ಬಂದಾಗ ಅದೆಷ್ಟು ಅಸತ್ಯ-ಅಸಿತ್ಯವಾಗಿ ಕಾಣುತ್ತಿದೆ. ಅಂದಿನದೆಲ್ಲಾ ಹುಚ್ಚು ಮನಸ್ಸಿನ ಹತ್ತು ಕಲ್ಪನೆಗಳು ಎಂದೆನಿಸುತ್ತಿದೆ ಈ ಪ್ರಪಂಚ. ಅಂದಿನ ನಮ್ಮ ಆತ್ಮೀಯತೆಯ, ವಾತ್ಸಲ್ಯದ ಬೆಸುಗೆಗಾಗಿ ಪರಸ್ಪರ ರಕ್ತ ಕೂಡಿಸುವ ಪ್ರತಿಜ್ಞೆ ತೊಟ್ಟಿದ್ದೆವು. ನನಗೆ ಗಂಡಾದರೆ ನಿನ್ನ ಹೆಣ್ಣು.... ನಿನಗೆ ಗಂಡಾದರೆ ನನ್ನ ಹೆಣ್ಣು ಎಂದಿತ್ತು ನಮ್ಮ ಶಪಥ. ನನಗೆ ಗಂಡಾದು ದಾದರೂ ತನ್ನ ದಾರಿ ಹಿಡಿಯಿತು.

ಸತ್ತ ಶಿಶುವಿಗಾಗಿ ಚಿಂತೆಗೈಯುವನೆಂದು ತಿಳಿಯಬೇಡ. ಬಂದ ದಾರಿ ಹಿಡಿದು ಮರಳಿತು ಚಿಂತೆಯೇಕೆ ? ಶಿಶುವಿನ ಅಳಿವು ಉಳಿವು ಸುಧೆಯ ಕೈಲಿತ್ತು. ಒಂದು ಜೀವದ ಬಳಲಿಕೆಯಿಂದಾಗಿ ಮತ್ತೊಂದು ಜೀವದ ಕೊಲೆಯಾಯಿತು. ಎರಡು ಜೀವಿಗಳೂ ಈ ಪ್ರಪಂಚದಲ್ಲಿ ಇನ್ನಿಲ್ಲವಾಗಬೇಕಿತ್ತು. ದೈವವಶಾತ್ ಒಂದು ಹೋಗಿ ಮತ್ತೊಂದಕ್ಕೆ ಉಸಿರುಕೊಟ್ಟಿತು.

ನಾನು ಸುಧೆಯ ಕೈಹಿಡಿದಾಗ ನೀನು ಆಕಾಶದುದ್ದಕ್ಕೂ ಚಿಮ್ಮಿದ್ದೆ. ರೂಪು-ಗುಣಗಳಿಂದ ಎರಕಹೊಯ್ದ ಜೀವಪ್ರತಿಮೆ ನನ್ನ ಕೈಸೇರಿದೆ ಎಂದು. ನಿಜಕ್ಕೂ ಮೊದಲ ಕೆಲದಿನ ಅದು ಸುಳ್ಳಲ್ಲ ಎನಿಸಿತು. ಆದರೆ ಬಾಳ್ವೆ ಯಲ್ಲಿ, ಒಂದುಗೂಡಿದಂತೆ ಕಾಮದ ಅಮಲಳಿದು, ಪ್ರೇಮಜ್ಯೋತಿಗಳು ಬೆಳಗತೊಡಗಿದಾಗ, ಒಂದು ದೀಪ ಎಣ್ಣೆಯಿಂದ ಪ್ರಕಾಶ ಕೊಡುವೆನೆಂದರೆ, ಮತ್ತೊಂದು ಬರೀ ನೀರಿನಿಂದಲೇ ಅದಕ್ಕೂ ಮಿಗಿಲಾಗಿ ದೇದೀಪ್ಯತೆ

ನೀಡುವೆನೆನ್ನತೊಡಗಿತು. ನೀರಿನಿಂದ ಉರಿಯುವ ದೀಪ ಎಷ್ಟುಮಾತ್ರಕ್ಕೂ ನಿಜ ಎಣಿಸಿನೋಡು.

ಏಕಿದೆಲ್ಲಾ ಬರೆಯ ತೊಡಗಿದೆನೆಂದರೆ ಸುಧೆಯು ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ನಿನ್ನಲ್ಲಿ ನನಗೆ ಆತ್ಮೀಯತೆಯಿದೆ-ಸಲಿಗೆಯಿದೆ ಮಿಗಿಲಾಗಿ ನೀನು ನಮ್ಮ ಮನೆಯವರಲ್ಲಿ ಒಬ್ಬನಾಗಿರುವೆ. ಅದರಿಂದ ನಮ್ಮ ಸಂಸಾರದ ಗುಟ್ಟು ಬಯಲಾದರೂ ಚಿಂತಿಲ್ಲನೆಂದು ಧೈರ್ಯವಹಿಸಿ ಬರೆಯತೊಡಗಿರುವೆನು. ನನಗೆ ತಪ್ಪು ನನ್ನದೇ ಅಥವಾ ಸುಧೆಯದೇ ಎಂದು ವಿಚಾರ ವಿನಿಮಯ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ಲೇಖಣಿ ಹಿಡಿದು ಕುಳಿತಿರುವೆನು. ಪತ್ರ ಪೂರ್ತ ಓದಿ ನನ್ನ ಬಗ್ಗೆ ವಿಷಾದವಾಗಲಿ, ಅನುತಾಪವಾಗಲಿ ಪಡವಿರು.

ಸುಧೆ, ನಾನು ಒಟ್ಟಿಗೆ ಕೂಡಿ, ಒಟ್ಟಿಗೆ ತಿಂದು, ಒಟ್ಟಿಗೆ ಮಲಗಿ ಈದಿನಗಳಿಗೆ ಸರಿಯಾಗಿ ವರುಷ ತುಂಬುತ್ತೆ. ಮೊದಮೊದಲು ನಮ್ಮ ಸಂಸಾರ ಅಲೆಯಿಲ್ಲದ ಸಾಗರದಂತೆ ಶಾಂತವಾಗಿತ್ತು. ಮೊದಲ ಮೂರು ತಿಂಗಳು ನಮ್ಮ ಹಿಗ್ಗಿಗೆ ಕುಂದಿರಲಿಲ್ಲ. ನಮ್ಮನೆಗತಕ್ಕೆ ಅಂತ್ಯವಿರಲಿಲ್ಲ. ನನಗೆ ಅವಳು; ಅವಳಿಗೆ ನಾನು ನಮ್ಮಿಬ್ಬರಿಗಾಗಿ ಈ ಜಗತ್ತು ಎಂದರಿತು ನಡೆವವು. ಮೊದಮೊದಲು ಪ್ರಮಾದಗಳಿಲ್ಲದೆ ಎಲ್ಲವೂ ಸುಖಪ್ರದ ವಾಗಿಯೆ ಸಾಗಿತ್ತು.

ದಿನಗಳು ಉರುಳಿದವು. ಯೌವನದ ಪ್ರವಾಹ ಉಬ್ಬರವಿಳಿತವಿಳಿದು ಶಾಂತವೂ, ಗಂಭೀರವೂ ಆಗತೊಡಗಿತು. ವಾಸ್ತವ ಪ್ರಪಂಚದಲ್ಲಿ ಕಣ್ಣು ತೆರೆದಾಗ ಸಂಸಾರ ಅದೆಷ್ಟು ತೊಡಕು ಎನ್ನಿಸಿತು. ಅರಣ್ಯದಲ್ಲಿ ಅಲೆಯುತ್ತಿದ್ದ ಹಕ್ಕಿಯನ್ನು ಹಿಡಿದು ಪಂಜರದಲ್ಲಿಟ್ಟಂತಿತ್ತು ಈ ಸಂಸಾರ ಬಂಧನ. ಆದರೂ ಬಂಧನವಿಲ್ಲದ ಬದುಕಿಲ್ಲವೆಂದು ಇದರಲ್ಲೇ ಮೋಜು ಕಾಣತೊಡಗಿದೆ. ಆದರೆ ದಿನವುರುಳಿದಂತೆ ನನ್ನ ಮತ್ತು ಸುಧೆಯ ದಾರಿಗಳು ಕವಲೊಡೆಯತೊಡಗಿದವು.

ಸುಧೆ ರೂಪವಂತೆಯಾದರೂ ಗುಣವಂತೆ ಅನ್ನಲಾರೆ. ಹಾಗೆಂದು ಅವಳಿಗೆ ಗುಣವೇ ಇಲ್ಲವೆಂದಲ್ಲ....ಇದೆ. ಕತ್ತಿಗಿರುವ ಹೇರು ಹೊರುವ

ಬುದ್ಧಿ ; ಕುದುರೆಗಿರುವ ಗಾಡಿ ಎಳೆಯುವ ವಿವೇಚನೆ ಇಲ್ಲದ ಬುದ್ಧಿ ಸುಧೆಯದು.

ನನ್ನ ನಾಲ್ವರು ತಂಗಿಯರು-ಇಬ್ಬರು ತಮ್ಮಂದಿರ ಬುದ್ಧಿ ನಿನಗೆ ತಿಳಿದೇ ಇದೆ. ಅವರೆಲ್ಲಾ ಒಂದು ವಿಧದಲ್ಲಿ 'ಸುಶಿಕ್ಷಿತ'ರೇನೋ ನಿಜ. ಆದರೆ ಅಷ್ಟೂ ಗರ್ವಿಗಳು. ಮತ್ತೊಬ್ಬರನ್ನು ಮೈಮುರಿದು ದಣಿಸಿ ತಾವು ಸುಖಪಡುವ ಜೀವಿಗಳು ಅವು. ಇನ್ನು ತಾಯಿ ಎನಿಸಿದವಳು. ಅವಳು ಇದುವರೆಗೂ ದುಡಿದು ಹಣ್ಣಾಗಿದ್ದಳು. ತನ್ನ ತಲೆಗೆ ಕಟ್ಟಿದ್ದ ಗಾಣದ ನೊಗವನ್ನು ಸೊಸೆಯ ತಲೆಯ ಮೇಲಿಟ್ಟು 'ಹಾ, ರಾಮ !' ಅನ್ನತೊಡಗಿರುವರು.

ಸುಧೆ ಮನೆಗೆ ಹಿರಿಸೊಸೆಯಾಗಿ ಏನೋ ಬಂದಳು. ಆಡಳಿತ ಬೇಕಾಯಿತು ಅವಳಿಗೆ. ಆದರೆ ಜವಾಬ್ದಾರಿಯುರಿತ ದುಡಿಮೆ ಬೇಕಾಗಲಿಲ್ಲ. ಹತ್ತು ಜನರಲ್ಲಿ ನಾನೂ ಒಬ್ಬಳು, ನನ್ನ ಪಾಲಿಗೆ ಬಂದ ಕೆಲಸ ಚಾಚೂ ತಪ್ಪದೆ ಎಸಗುವೆನು ಎಂಬ ವಾದ ಸುಧೆಯದು. ಹಿರಿತನ ವಹಿಸಿದವಳೆ ಎಲ್ಲವನ್ನು ನಿರ್ವಹಿಸಲಿ ಎಂಬುದು ಮನೆಯವರ ಸಿದ್ಧಾಂತ. ಇದು ನಮ್ಮಲ್ಲಿ ಪರಂಪರಾಗತವಾಗಿ ಬೆಳೆದುಬಂದ ಬುದ್ಧಿ.

ಸುಧೆ ಎಲ್ಲವನ್ನೂ ನಿರ್ವಹಿಸಿ ಮನೆಯವರ ಪ್ರೀತ್ಯಾದರಗಳನ್ನು ಗಳಿಸುವಳೆಂಬ ನಂಬಿಕೆ ನನ್ನಲ್ಲಿತ್ತು. ನನ್ನ ಆಸೆ ಆಸೆಯಾಗಿಯೇ ಉಳಿಯಿತು. ನಿತ್ಯ ನಾದಿನಿ-ಮೈದುನರಿಂದಾಗಿ ಒಂದಲ್ಲೊಂದು ಬಗೆಯಲ್ಲಿ ಕಿತ್ತಾಟ-ಕಿಸರಾಟ ಆರಂಭವಾದವು. ಪ್ರೀತಿಯಿದ್ದಕಡೆ ಪ್ರಮಾದಗಳಿಗವ ಕಾಶವಿಲ್ಲ. ಅದು ಇಲ್ಲದ ಕಡೆ ಹೆಜ್ಜೆ ಹೆಜ್ಜೆಗೂ ತಪ್ಪು ಎದ್ದು ಕಾಣು ತ್ತಿರುತ್ತೆ. ಸುಧೆ ಪ್ರೀತಿ ಗಳಿಸುವ ಬದಲಿಗೆ ಸಮಾನತೆ ಕಲಿಸಲು ಪ್ರಾರಂಭಿಸಿದಳು. ತತ್ಪರಿಣಾಮವಾಗಿ ವೈಮನಸ್ಯ-ಔದಾಸೀನ್ಯ ಪರಸ್ಪರ ಬೆಳೆದು ಮೊಳೆತವು.

ದುಡಿದು ದಣಿದು ಮನೆ ಸೇರಿ ಪ್ರಿಯತಮೆಯ ನಲ್ಮಾತುಗಳಿಗೆ ಕಾತರಿಸಿದಾಗ ಸುಧೆಯು ಬೆಳಗಿನ ಹಗರಣಗಳ ಭಾಷಣ ನಡೆಸುತ್ತಿದ್ದಳು. ರಾತ್ರಿ ಹನ್ನೆರಡು ಬಡಿದರೂ ಅವಳ ಮಾತಿಗೆ ಕೊನೆ ಕಾಣುತ್ತಿರಲಿಲ್ಲ.

ನಿತ್ಯ ಒಂದೇ ರಾಗ.... ಒಂವೇ ಸಂಗೀತವಾದರೆ ಬದುಕುವುದೆಂತು ? ಅವಳ ಮಾತು ಬೇಸರ ತಂದರೂ ಹೆಂಡತಿಯೆಂಬ ಅಭಿಮಾನ-ದುಃಖ ಇನ್ನಾರಲ್ಲಿ ತೋಡಿಕೊಳ್ಳುವಳೆಂಬ ಔದಾರ್ಯದಿಂದ ಕಿವಿ ಕೊಡಬೇಕಿತ್ತು. ನನ್ನಲ್ಲೂ ಸಹನೆಯೆಷ್ಟು ದಿನ ಉಳಿದೀತು ? ಇನ್ನುಮೇಲೆ ಮನೆ ಸುದ್ದಿ ನನ್ನವರೆಗೂ ತರಬೇಡ ಅನುಸರಿಸಿಕೊಂಡು ನಡೆದು ಎಲ್ಲರ ಪ್ರೀತಿ ಗಳಿಸು ಎಲ್ಲವೂ ಸರಿಹೋಗುತ್ತೆ ಎಂದೆ. ಆದರಿಂದಾಗಿ ದೂರು ಕೆಲದಿನವಾದರೂ ತಪ್ಪಿತ್ತು.

ಆಗ ಸುಧೆ ಬಸಿರುಹೊತ್ತು ನಿಂತಿದ್ದಳು. ಬೆಳಗಿನಿಂದ ಸಂಜೆಯ ವರೆಗೂ ಅವಳ ದುಡಿಮೆ ಸತತ ನಡೆದಿತ್ತು. ಆದರೆ ನಾನೇನು ಮಾಡು ವಂತಿದ್ದೆ ? ತಂಗಿ-ತಮ್ಮಂದಿರಿಗೆ ಹೇಳುವ ಧೈರ್ಯ ನನ್ನಲ್ಲಿಲ್ಲ. ಹೆಂಡತಿ ಬಂದ ನಾಲ್ಕು ದಿನದಲ್ಲೇ ಪರವಶಿಸಿ ಬಂದ ಎಂಬ ನುಡಿಗೆ ನಾಚಿದೆ. ಆದರೆ ಸುಧೆಯ ರಾಗ ಒಂದೇ ಪಲ್ಲವಿ ಹಿಡಿದು ನಡೆದಿತ್ತು. ಸತ್ಯಕ್ಕೂ ಅವಳ ದುಡಿಮೆ ಜೋರಿತ್ತು. ದುಡಿಮೆಗೆ ಹೆದರುವವಳೂ ಅಲ್ಲ. ದುಡಿಸಿಕೊಳ್ಳುವವರಿಂದ ಪ್ರೀತಿಯುಳ್ಳ ನಾಲ್ಕುಮಾತು ಬಯಸುತ್ತಿದ್ದಳು. ನಾವು ಶಿಕ್ಷಿತರಾದರೂ ಹೊರಗಿನಿಂದ ಬಂದ ಹೆಣ್ಣು ದುಡಿಮೆಯ ದಾಸಿ ಎಂಬ ಮನೋಭಾವ ಇನ್ನೂ ಬಿಟ್ಟಿಲ್ಲ. ನಮ್ಮ ಮನೆ ಹೆಣ್ಣು ಪರರ ಮನೆ ಸೇರಿದಾಗ ಇದೇ ಮಂತ್ರ ಪುನರೋಚ್ಚಾರಣೆಯಾದೀತು ಎಂಬ ವಿವೇಚನೆ ಬಂದಿಲ್ಲ. ಇದು ತಿಳಿದು ನಡೆಯದ ಹೊರತು ನಾವು ಸುಧಾರಿಸಿದಂತಾಗುವುದಿಲ್ಲ.

ಒಂದು ದಿನ ರಾತ್ರಿ ತಡವಾಗಿಯೇ ಮನೆ ಸೇರಿದೆ. ಮನೆಯವ ರೆಲ್ಲಾ ಮೌನ ಧರಿಸಿದ್ದರು. ಏನೋ ಪ್ರಮಾದ ನಡೆದುಹೋಗಿದೆ ಯೆಂದು ಊಟ ತೀರಿಸಿಕೊಂಡು ರೂಂ ಸೇರಿದೆ. ಬಹಳ ಹೊತ್ತಿನ ಮೇಲೆ ಸುಧೆ ರೂಂ ಹೊಕ್ಕಳು. ಮನೆಯಲ್ಲಿ ಏನು ನಡೆದಿದೆ ಎಂದರೆ ಸುಧೆ ಬಾಯಿ ಬಿಡಲಿಲ್ಲ. ಬದಲಿಗೆ ಬಿಕ್ಕಿ ಬಿಕ್ಕಿ ಅಳಲುಪಕ್ರಮಿಸಿದಳು. ಅಂದು ನನ್ನ ಮನಸ್ಸಿಗೇನು ಮಂಕು ಬಡಿದಿತ್ತೋ ಅವಳ ಮೌನ ಬೇಸರ ತಂದು ವಿಕೋಪಕ್ಕೆಡೆಕೊಟ್ಟಿತು. ಬಲಗೆನ್ನೆಯ ಮೇಲೆ ಒಂದು ತೀಡಿದೆ.

ಆದರೂ ಅವಳ ರೋದನವಲ್ಲದೆ ಬಾಯಿ ಬಿಡಲಿಲ್ಲ. ಆ ದಿನ ಬಹಳ ವ್ಯಥೆಪಟ್ಟೆ. ಹಾಗೆ ಮಾಡಬಾರದಿತ್ತು ಎನ್ನಿಸಿತು.

ತಾಯಿಗೊಮ್ಮೆ ಹೇಳಿನೋಡಿದೆ. ಸುಧೆ ಗರ್ಭಿಣಿ ಅವಳಿಂದ ಆಗುವಷ್ಟು ಕೆಲಸ ತೆಗೆದುಕೊಳ್ಳಿ ಎಂದು. ಅದು ಪ್ರಯೋಜನಕಾರಿ ಯಾಗಲಿಲ್ಲ ಬದಲಿಗೆ ಇದೆಲ್ಲಾ ಸುಧೆಯ ಪ್ರಚೋದನೆಯ ಫಲವೆಂದು ಮಾತಿನ ಬಾಣ ಅವಳ ಕಡೆಗೇ ತಿರುಗಿತು.

ನಿಜಕ್ಕೂ ಸುಧೆ ಕಷ್ಟಪಡುತ್ತಿದ್ದಳೇನೋ ನಿಜ. ನನಗೇ ಅವಳ ಬಗ್ಗೆ ಕರುಣೆ ಮೂಡಿ ಅನುಕಂಪಕ್ಕೆಡೆ ನೀಡಿತ್ತು. ಅಂದಮಾತ್ರಕ್ಕೇ ತಂಗಿ-ತಮ್ಮಂದಿರಲ್ಲಿ ತಪ್ಪಿದೆಯೆಂದು ಹೇಗೆ ವಾದಿಸಲಿ ? ವಾಸ್ತವದಲ್ಲಿ ಅವರು ತಪ್ಪಿತಸ್ಥರಾಗಿದ್ದರೂ, ಹೆಂಡತಿಯ ಪರವಹಿಸಿ ನೀವು ತಪ್ಪುಮಾಡಿದಿರೆಂದು ಬೊಟ್ಟುಮಾಡಿ ತೋರಿಸುವುದೆಂತು ? ಪರೋಕ್ಷದಲ್ಲಿ ಅವರ ತಪ್ಪು ಕಂಡರೂ ಪ್ರತ್ಯಕ್ಷ ಮೌನ ತಾಳಿದೆ.

ಚೆಲುವು-ರೂಪು ಇಮ್ಮಡಿ, ನೂರ್ಮಡಿಯಾಗುವ ಕಾಲವದು. ಐದುತಿಂಗಳ ಗರ್ಭವತಿ. ಬಯಸಿದ್ದನ್ನು ತಿಂದು ದಷ್ಟಪುಷ್ಟವಾಗಿ ಬೆಳೆಯುವ ಕಾಲವದು. ಆದರೆ ಸುಧೆ ತನ್ನಲ್ಲಿರುವ ಮತ್ತೊಂದು ಜೀವದ ಬಗ್ಗೆ ಯೋಚಿಸದೆ ಯೋಚನೆಯಲ್ಲಿ ಹಣ್ಣಾದಳು. ಅಂದು ರಾತ್ರಿಯ ಪ್ರಕರಣ ನಡೆದಾಗಿನಿಂದ ಸುಧೆ ನನ್ನೊಂದಿಗೆ ಮಾತನ್ನೇ ಬಿಟ್ಟಳು. ಅವಶ್ಯಕವಾದ ನಾಲ್ಕು ಮಾತಾಡಿ ದೂರ ಸರಿಯುತ್ತಿದ್ದಳು. ಇದನ್ನು ನೋಡಿ ನಾಲ್ಕುದಿನ ತೌರಿಗೆ ಹೋಗು ಎಂದೆ. ಆದಕ್ಕೂ ಒಪ್ಪದಾದಳು. "ಸತ್ತರೆ ಇಲ್ಲೇ ಸಾಯಬೇಕು ; ಬದುಕಿದರೆ ಇಲ್ಲೇ ಬದುಕಬೇಕು" ಎಂದು ಮಾರ್ನುಡಿ ದಳು. ನಾವೆಲ್ಲ ಒಂದು ಅವಳೊಬ್ಬಳೇ ಒಂದು ಎಂದು ತಿಳಿದಿರಬೇಕು. ಅವಳ ಈ ವಿಷಣ್ಣಾವಸ್ಥೆ ಕಂಡು ಮರುಕ ಬಂದರೂ ತೋರ್ಪಡಿಸದಾದೆ. ದಿನ ಕಳೆಯತೊಡಗಿದವು. ಮುಂಜಾವಿಂದ ಸಂಜೆಯವರೆಗೆ ಮನೆಗೆಲಸ ಗಳಲ್ಲೇ ತೊಡಗಿದಳು. ಕಾಲಕಾಲಕ್ಕೆ ಆಹಾರ ತೆಗೆದುಕೊಳ್ಳದೆ ದೇಹ ಸೊರಗಿಸಿದಳು. ಅವಳ ಆರೋಗ್ಯದ ಬಗ್ಗೆ ಯಾರಾದರೂ ವಿಚಾರಿಸಿದರೆ 'ನನಗೆ ಎಲ್ಲಾ ತಿಳಿದಿದೆ' ಎಂದುಬಿಡುತ್ತಿದ್ದಳು. ಹೀಗೆ ತಿಂಗಳು ಎಂಟು ತುಂಬಿದವು.

ವಾರದ ಕೆಳಗೆ ಆಸ್ಪತ್ರೆಯಲ್ಲಿ ಸತ್ತ ಮಗುವನ್ನು ಹೊರತೆಗೆದರು. ಆರುದಿನಗಳು ಆಸ್ಪತ್ರೆಯಲ್ಲೇ ಇದ್ದು ದುಃಖಿಸಿ ಕಾಲ ಕಳೆದಳು. ನನ್ನ ನೋಡಿದಾಗ ತನ್ನ ದುಃಖ ಇಮ್ಮಡಿಸಿಬಿಡುತ್ತಿದ್ದಳು.

ಮನೆಗೆ ಬರುವ ಮುನ್ನಾದಿನ 'ನಾನಾಗಿ ಮಗುವನ್ನು ಕೊಂದೆ, ನಾನು ಹಮ್ಮು ಬಿಟ್ಟು ನನ್ನಮನೆ–ನನ್ನಬದುಕು ಎಂದು ತಿಳಿದು ನಡೆದಿದ್ದರೆ ಈ ಅನರ್ಥವಾಗುತ್ತಿರಲಿಲ್ಲ' ಎಂದು ಉತ್ಕಂಠೆಯಾಗಿ ನುಡಿದಳು. 'ಹೋಗಲಿ ಬಿಡು ನೀನೊಬ್ಬಳು ಇದ್ದರೆ ಅಂಥ ನೂರು ಮಕ್ಕಳನ್ನು ಪಡೆದೀಯ' ಎಂಬ ನನ್ನ ಸಮಾಧಾನೋಕ್ತಿಗೂ ಅವಳ ಅಳಲಿಳಿಯಲಿಲ್ಲ. "ನಾನಾಗಿ ಮಗುವನ್ನು ಕೊಂದೆ ಆಸ್ಪತ್ರೆಗೆ ಬರುವ ಹಿಂದಿನ ದಿನ ಭಾವಿಯಿಂದ ನೀರು ಎಳೆಯುತ್ತಿದ್ದೆ. ಬಸವಳಿದು ತುಂಬಿದ ಕೊಡ ಸೊಂಟದಿಂದ ಜಾರಿ ಬೋರಲುಬಿದ್ದೆ. ನಾನು ಹಮ್ಮಿನಿಂದ ಅತಿ ದುಡಿಮೆಗೆ ತೊಡಗದಿದ್ದರೆ, ಕಾಲಕಾಲಕ್ಕೆ ಆಹಾರ ತಿಂದು ನಿಶ್ಶಕ್ತಿ ಬಲವಾಗದಿದ್ದರೆ ನನ್ನ ಮಗು ಇಂದು ನನ್ನದಾಗುತ್ತಿತ್ತು" ಎಂದು ಚೀರತೊಡಗಿದಳು. ಸಮಾಧಾನ ಹೇಳಿ ಮನೆಗೆ ತಂದೆ. ಒಡೆದ ಹೃದಯದ ನೋವು ಮರೆಯಲೆಂದು ಸುಧೆಯನ್ನು ತವರಿಗೆ ಕಳುಹಿಸಿರುವೆನು.

ಅವಳು ಹಿಂತಿರುಗುವ ವೇಳೆಗೆ ಅವಳಿಗಾಗಿಯಾದರೂ ಬೇರೆ ಸಂಸಾರವನ್ನು ಹೂಡಬೇಕಾಗಿದೆ. ಇಲ್ಲದಿದ್ದರೆ ಅವಳ ಪರ್ಯಾವಸಾನ ಸಂತೂ ಖಂಡಿತ. ಆದರೆ ತಂದೆತಾಯಿಗಳನ್ನು ತೊರೆಯುವುದೆಂತು ? ಈ ಸಂದಿಗ್ಧ ಪರಿಸ್ಥಿತಿ ಎದುರಿಸಿ ನಿಲ್ಲುವುದೆಂತೋ ತಿಳಿಯೆನು. ಅಂತೂ ಆಫೀಸಿನಲ್ಲಿ ಬೇರೊಂದು ಸ್ಥಳಕ್ಕೆ ವರ್ಗಮಾಡಿರೆಂದು ಕೇಳಿರುವೆನು. ಪ್ರಾಯಶಃ ಮೈಸೂರಿಗೋ–ತುಮಕೂರಿಗೋ ವರ್ಗ ಮಾಡಬಹುದು. ಅಂತಾದರಂತೂ ಅನುಕೂಲವೇ ಸರಿ.

ಏಕಿಷ್ಟು ವಿಷದವಾಗಿ ಬರೆದೆನೆಂದರೆ ಸುಶಿಕ್ಷಿತ ಕನ್ಯೆಯ ಕೈಹಿಡಿದಿದ್ದರೆ ಇಷ್ಟು ಅನರ್ಥವಾಗುತ್ತಿರಲಿಲ್ಲವೇನೋ ಅನ್ನಿಸುತ್ತಿದೆ. ಸುಧೆ ಬಂಧನವಿಲ್ಲದ ಬದುಕು ಬಯಸಿದಳು. ತಾನು ತನ್ನ ಗಂಡ ಸೌಖ್ಯವಾಗಿರುವ ಒಂದು ಯೋಚನೆ ಮಾಡಿರುವಳು. ಸಮಷ್ಟಿ ಕುಟುಂಬದ ಮಾತು ಮರೆತು

ದ್ವೇಷ ತಂದುಕೊಂಡು ಸೊರಗಿದಳು. ಅವಳಿಗೆ ನಮ್ಮ ಮನೆ-ನಮ್ಮ ಬದುಕು-ನಮ್ಮ ಜನ ಎಂಬ ಭಾವನೆ ಬೆಳೆದಿದ್ದರೆ ಈ ಅನಾಹುತವಾಗುತ್ತಿರಲಿಲ್ಲ. ಇಂದೂ ಅವಳ ತಪ್ಪು ಅವಳರಿತಿರುವಳೋ ಇಲ್ಲವೋ ಹೇಳಲಾರೆ.

ಇಂದಾದ ಅನಾಹುತಕ್ಕೆ ಹೊಣೆ ನಾನೋ ಅವಳೋ ಅರಿಯೆ. ನಡೆದುದು ನಡೆದುಹೋಯಿತು. ನನ್ನ ಬಾಳಿನಂತೆ ಯಾರ ಬಾಳೂ ಆಗದಿರಲಿ. ನಿನಗಾದರೋ ಸುಧಾರಿಸಿದ ಕನ್ಯೆ ದೊರೆತ್ತಿದ್ದಾಳೆ. ಉಮಾ ಸುಶಿಕ್ಷಿತೆ-ಸದ್ಗುಣಿ. ಸಂಸಾರದಲ್ಲಿ ಎಡೆ ಹಾಯ್ದು ಬರುವ ಎಡರು ತೊಡರುಗಳನ್ನು ಸಾವರಿಸಿಕೊಂಡು ಹೋಗುವಳೆಂಬ ನಂಬಿಕೆಯಿದೆ.

ಈ ದಿನಕ್ಕೆ ಇಷ್ಟು ಸಾಕೆಂದು ಕಾಣುತ್ತೆ. ಬಿಡವು ದೊರೆತರೆ ಒಂದು ಭಾನುವಾರ ದಂಪತಿಗಳ ಸಮೇತ ಮಂಡ್ಯಕ್ಕೆ ಬನ್ನಿ. ಈ ಬಾರಿ ನಿನಗೆ ಗಂಡಾದರೆ ನನ್ನ ಮುಂದಿನ ಹೆಣ್ಣು ಅದಕ್ಕೇ.... ಉಮಾ ಮತ್ತು ಮನೆಯವರಿಗೆ ನಮಸ್ಕಾರ ಹೇಳು. ಬೇಗ ಪತ್ರ ಬರೆ

ಎಂದು, ನಿನ್ನ ಆತ್ಮೀಯ

"ವಸಂತ."

"ಉಮಾ....!"

"ಕಾಗದ ಓದಿ ಏಕೆ ಹರಳೆಣ್ಣೆ ಕುಡಿದವಳಂತೆ ಸಪ್ಪಗಾಗಿರುವೆ ?"

"ಏನಿಲ್ಲಾ, ವಸಂತನ ಬಾಳು ಮುಳುಗಿದ ದೋಣಿಯಂತಾಯಿತಲ್ಲ ಎಂದು"

"ಹೌದು.... ಅವನದು ಮುಳುಗಿದ ದೋಣಿಯಾದರೆ.... ನಮ್ಮದು ಮುಳುಗುವ ದೋಣಿ ಅಷ್ಟೇ.... ಅವನ ಕಣ್ಣಿಗೆ ನಮ್ಮದು ದೂರದ ಬೆಟ್ಟ"

"ನಮ್ಮ ದೋಣಿ ಮುಳಗದು...."

"ಭರವಸೆ ಕೊಡುವೆಯಾ.... ?"

"ಏನು ನಾನು ಅಂಥವಳೆ.... !"

"ಹಾಗಲ್ಲ, ಮಾತಿನ ಭರದಲ್ಲಿ ಹಾಗೆಂದೆ.... ಅದಿರಲಿ, ವಸಂತನಿಗೆ ನಿನ್ನ ಕೂಸಂತೆ ಕೊಡುವೆಯಾ ?"

"ನೀವುಂಟು.... ನಿಮ್ಮ ಮಕ್ಕಳುಂಟು....ನನ್ನದೇನು.... ?"

"ಹೂಂ.... ಇರಲಿ.... ಇನ್ನು ನಾಲ್ಕು ತಿಂಗಳ ಮಾತು ತಾನೆ ?.... ಹುಟ್ಟುವುದು ಗಂಡೋ.... ಹೆಣ್ಣೋ ಅಥವಾ ಎರಡೂ ಅಲ್ಲದ ಗುಂಡ ಕಲ್ಲೋ !"

"ಥೂ, ಹೋಗ್ರೀ, ಗುಂಡುಕಲ್ಲೇಕೆ ಹೆರಲಿ"

"ಹಾಗಲ್ಲ.... ಸುಧೆ ಹೆತ್ತಹಾಗೆ ಸತ್ತಮಗು ಹೆತ್ತರೆ.... ಅದು ಗುಂಡುಕಲ್ಲು ಅಲ್ಲದೆ ಮತ್ತೇನು ?"

"ಸುಧೆ ಬುದ್ಧಿಯಿಲ್ಲದೆ ಮಗು ಹಾಳುಮಾಡಿಕೊಂಡರೆ.... ನಾನು"

"ಹ್ಞಾಂ.... ಇರಲಿ.... ಈಗ ದೀಪ ಆರಿಸು.... ಇದು ಕಾಗೆ, ಇದು ಕೋಗಿಲೆ ಎಂದರಿಯುವುದು ಅವು ಸ್ವರಗೈದ ಮೇಲೆ"

ಉಮಾ ದೀಪವಾರಿಸಿ ಶಂಕರನ ಪಕ್ಕ ಸೇರಿದಳು. ಶಂಕರನಿಗೆ ನಿದ್ರೆ ಹತ್ತಿತು. ಉಮಾಳಿಗೆ ಅಂದೇಕೋ ನಿದ್ರೆ ಬಾರದಾಯಿತು. ವಸಂತ–ಸುಧೆಯರ ಬಾಳ್ವೆಯೇ ಕಣ್ಣಲ್ಲಿ ಕಟ್ಟಿದಂತಾಗಿತ್ತು. ಹೆಣ್ಣು ಗಂಡನನ್ನು ಪ್ರೀತಿಸಿದಷ್ಟು ಆತನ ಬಂಧುಗಳನ್ನೇಕೆ ಪ್ರೀತಿಸರು. ಅವರು ಹೇಳುವುದು ದಿಟ. "ನಮ್ಮದು ಕನಸಿನ ಮನೆಯಲ್ಲಿ ಕಟ್ಟುವ ಮನೆ.... ಬಾಂಧವ್ಯವಿರುವ ಬದುಕು ಬೇಕು.... ಒಟ್ಟಾಗಿ ಕೂಡಿ, ಒಟ್ಟಾಗಿ ಬೆಳೆಯುವುದು ಯೋಚಿಸು" ಎಂಬ ಶಂಕರನ ನುಡಿ ಅವಳ ಕಿವಿಯಲ್ಲಿ ಮಾರ್ದನಿಗೊಡುತ್ತಿತ್ತು. "ಪಾಪ, ವಸಂತನ ಬಾಳು ಈ ಜಂಜಾಟದಲ್ಲಿ ಸಿಲುಕಿ ಏನಾಗುವುದೋ, ನಮ್ಮ ಬಾಳು ಅಂತಾಗಬಾರದು.... ಅಂತಾಗ ಬಾರದು. ಉಮಾ ಇದೇ ಯೋಚನೆಯಲ್ಲಿದ್ದಳು. ಯಾವಾಗ ನಿದ್ರೆಯಲ್ಲಿ ಲೀನವಾಗಿ ಹೋದಳೋ ಅವಳಿಗೇ ತಿಳಿಯದಾಗಿತ್ತು.

ಬೆಳಿಗ್ಗೆ ಎಂದಿನಂತೆ ಮುಂಚಿತವಾಗಿಯೇ ಎದ್ದು ಉಮಾ ತನ್ನ ನಿತ್ಯದ ಕೆಲಸಗಳಲ್ಲಿ ನಿರತಳಾದಳು. ಆದರೆ ಎಂದಿನ ಜಿಗುಪ್ಸೆ–ನಿರುತ್ಸಾಹ ದಿಂದಲ್ಲ. ಹೊಸ ಹುರುಪು–ಹೊಸ ಚೇತನದಿಂದ ಕೂಡಿದ್ದಳು. ಉಮಾಳ ಮುಖದಲ್ಲಿ ಲವಲವಿಕೆ ಕಂಡು ಅತ್ತೆ-ನಾದಿನಿಯರು ಕ್ಷಣಕಾಲವಾದರು ವಿಸ್ಮಯಗೊಳ್ಳದಿರಲಿಲ್ಲ.

ಉಮಾ ಶಂಕರನಿಗೆ ಕಾಫಿ ತಂದಾಗ ಕೇಳಿಯೇ ಬಿಟ್ಟ

"ಏನಿಷ್ಟು ಎಂದಿಲ್ಲದ ಉತ್ಸಾಹ"

"ಥೂ ಹೋಗ್ರೀ ನಿಮ್ಮ ಹಾಸ್ಯ ಇದ್ದೇ ಇದೆ.... ಎಲ್ಲಾ ನಿಮ್ಮ ಪ್ರಭಾವನೇ...." ಉಮಾ ಒಳಕ್ಕೆ ನಡೆದಳು.

ಶಂಕರ ಕಾಫಿ ಹೀರುತ್ತಾ "ನನ್ನ ಪ್ರಭಾವವಲ್ಲ ಉಮಾ, ವಸಂತನ ದೀರ್ಘಪತ್ರ ನಿನಗೆ 'ಮಾರ್ಗದರ್ಶನ' ಎಂದು ಮನದಲ್ಲೇ ನಸುನಕ್ಕ.

# “ನೆರೆ-ಹೊರೆ ”

“ಸರಸೂ....! ....ಸರಸೂ !!”

“ಬಂದೇ !”

“ಹಾಗೇ ಕಾಫಿ ತಗೊಂಡು ಬಾ”

“ಏನ್ರಿ ಅದು ಸೈರನ್ ಕೂಗಿದ್ಹಾಗೆ ಕೂಗುತ್ತಿದ್ದೀರಲ್ಲಾ. ಆಫೀಸಿಗೆ ಹೊತ್ತಾಗಲಿಲ್ವೇ? ಇನ್ನೂ ಸರಸ ಆಡಿದ್ದು ಮುಗಿದಿಲ್ಲಾ ಅಂತ ಕಾಣುತ್ತೆ.”

“ಲೇ, ಯಾಕೆ ವಿಚಾರ ತಿಳೀದೆ ಎಮ್ಮೆ ಅರಚಿಕೊಳ್ಳೋಹಾಗೆ ಅರಚಿಕೊಳ್ಳುತ್ತೀಯ. ಎದುರು ಮನೆ ಖಾಲಿ ಆಗಿತ್ತಲ್ಲಾ ಬಾಡಿಗೆಗೆ ಸಿಗುತ್ತೇನೋ ವಿಚಾರಿಸುತೀಯ. ನನ್ನ ಸ್ನೇಹಿತರೊಬ್ಬರಿಗೆ ಮನೆ ಬೇಕಾಗಿದೆ.”

“ಅಷ್ಟೇನೆ! ಮೊನ್ನೇನೆ ಆ ಮನೆಗೆ ಯಾರೋ ಬ್ರಾಹ್ಮಣರು ಬಂದರಂತಲ್ಲಾ”

“ಆಂ! ಯಾರೋ ಬ್ರಾಹ್ಮಣರು ಬಂದರಾ. ಯಾರೇ ಅವರು ?”

“ನನಗೆ ಗೊತ್ತಿಲ್ಲ. ಎಲೆಕ್ಟ್ರಿಕ್ ಆಫೀಸಿನಲ್ಲಿ ಗುಮಾಸ್ತರಂತೆ. ಸಂಬಳ ನೂರೈವತ್ತು ಬರುತ್ತಂತೆ. ಏಳು ಜನ ಮಕ್ಕಳಿದ್ದಾರಂತೆ. ಮೂರು ಗಂಡು ನಾಲ್ಕು ಹೆಣ್ಣು. ಹಿರಿಮಗ ಇಂಟರ್ ಓದುತ್ತಿದ್ದಾನಂತೆ. ಮಿಕ್ಕವೆಲ್ಲಾ ಹೈಸ್ಕೂಲ್, ಮಾಧ್ಯಮಿಕ ಓದುತ್ತಿದ್ದಾರಂತೆ.”

“ಗುಮಾಸ್ತರಿಗೆ ಯಾರೇ ಈ ಕಾಲದಲ್ಲಿ ನೂರೈವತ್ತು ಸಂಬಳ ಕೊಡೋರು ?”

“ನನಗೇನು ಗೊತ್ತು ? ಅವರ ಹೆಂಡತಿ ಕಮಲಮ್ಮನವರೇ ಹೇಳಿ

ದರು. ತುಂಬಾ ಒಳ್ಳೇಜನ ಅಂತ ಕಾಣುತ್ತೆ. ಕೊನೇ ಎರಡು ಹೆಣ್ಣು ಮಕ್ಕಳು ಅವಳಿ-ಜವಳಿ ಅಂತೆ. ಎಷ್ಟು ಮುದ್ದಾಗಿವೆ ಅಂತೀರಾ !"

"ಸರಿ ಪ್ರಾರಂಭವಾಯಿತು ನಿನಗೆ ಮಕ್ಕಳ ಚಿಂತೆ. ಹೇಗೂ ಪರಿಚಯವಾಗಿದೆ. ಅವನ್ನೇ ದತ್ತು ತೆಗೆದುಕೊಂಡುಬಿಡು."

"ಅವರು ಕೊಡುವುದಾದರೆ ಹಾಗೂ ಸಿದ್ಧ. ಹೆತ್ತವರು ಎಷ್ಟು ಮಕ್ಕಳಿದ್ದರೂ ಬೇರೆಯವರಿಗೆ ಕೊಟ್ಟಾರೆಯೇ ? ಮಕ್ಕಳನ್ನ ಪಡೆಯೋ ಸುಖ ನಮಗಿಲ್ಲದೆ ಹೋದರೂ ಬೇರೆಯವರ ಮಕ್ಕಳನ್ನಾದರೂ ನೋಡಿ ಸಂತೋಷಪಡೋಣ."

"ಕಣ್ಣೀರು ಯಾಕೆ ಹಾಕ್ತಿ. ಇಂದಲ್ಲದಿದ್ದರೂ ನಾಳೆ ಮಕ್ಕಳಾಗುತ್ತವೆ, ಮಕ್ಕಳು ಹೆತ್ತೋರು ಸುಖ ಪಡೋದು ಅಷ್ಟರಲ್ಲೇ ಇದೆ. ಇನ್ನೂ ಮದುವೆಯಾಗಿ ಮೂರು ವರ್ಷ ಕೂಡ ಕಳೆದಿಲ್ಲ. ದೇವ್ರು ಕಣ್ಣು ಬಿಟ್ರೆ ಮಕ್ಕಳಾಗೋದು ಎಷ್ಟು ಹೊತ್ತೇ, ಹೊಲಕ್ಕೆ ರಾಗಿ ಚೆಲ್ಲಿದ್ಹಾಗೆ."

"ಸರಿ, ನಿಮ್ಮ ಉಪಮೆ ಸಾಕು. ಕಾಫಿ ಕುಡೀರಿ ಆರಿಹೋಗುತ್ತೆ."

"ಎಲ್ಲಿ ಚಿನ್ನಾ ಒಂದೇ ಒಂದು ಮು....ತ್ತು ಕೊಟ್ಟುಬಿಡು. ಆಫೀಸು ಕಡೆ ಮುಖತಿರುಗಿಸಿ ಬಿಡ್ತೇನೆ."

"ಥೂ; ಹೋಗ್ರೀ, ಯಾವಾಗಲೂ ಹಾಸ್ಯವೇ.... ಥೂ, ಬಿಡಪ್ಪಾ ಸಾಕು.... ಇನ್ನು ಹೋಗ್ರಿ, ಹೊತ್ತಾಯ್ತು ಆಫೀಸಿಗೆ."

"ಇಗೋ ಹೊರಟೆ."

* * * * *

"ರ್ರೀ....ಎದುರು ಮನೆ ಕಮಲಮ್ಮನೋರು ನನಗೆ ಈ ಬೀದಿ ಅಪರಿಚಿತ, ನಿಮ್ಮ ಮನೆಗೆ ಬರೋ ಹಾಲು-ಮೊಸರಿನವಳನ್ನು ನಮ್ಮ ಮನೆಗೂ ವರ್ತನೆ ಗೊತ್ತುಮಾಡಿ. ತಿಂಗಳಾಗುತ್ಲೂ ದುಡ್ಡು ಕೊಡ್ತೇನೆ ಅಂದ್ರು."

"ಗೊತ್ತುಮಾಡಿದೆಯಾ ?"

"ಲಕ್ಷ್ಮಮ್ಮನಿಗೆ ಹೇಳಿದ್ದೀನಿ. ದಿನಾ ಬೆಳಿಗ್ಗೆ ಅರ್ಧಸೇರು, ಸಂಜೆಗೆ ಒಂದುಪಾವು ಹಾಲು, ಮಧ್ಯಾಹ್ನ ಅರ್ಧಸೇರು ಮೊಸರು ಹಾಕು ಅಂತಾ.

ಮಕ್ಕಳು ಮರಿ ಇರೋ ಮನೆ. ಅಷ್ಟು ಬೇಡವೇನ್ರೀ ?"

"ಬಾಡಿಗೆ ಎಷ್ಟಂತೆ ಆ ಮನೆಗೆ ?"

"ಮೊದಲು ಮೂವತ್ತೈದು ಹೇಳಿದನಂತೆ. ಮೂವತ್ತು ಕೊಡ್ತಾ ಇದ್ದಾರೆ. ದೊಡ್ಡ ಸಂಸಾರ. ನನ್ನ ಕೇಳಿದರೆ ಅವರಿಗೆ ಆ ಮನೇನೂ ಸಾಲದು."

"ಏನೇ, ಈ ಕಷ್ಟಕಾಲದಲ್ಲಿ ಮೂವತ್ತು ರೂಪಾಯಿ ಬಾಡಿಗೆ ಕೊಟ್ಟು ಬರೋ ಸಂಬಳದಲ್ಲಿ ಅಷ್ಟು ಮಕ್ಕಳನ್ನು ಸುಧಾರಿಸೋದು ಸಾಮಾನ್ಯವೇ ? ನಿನಗೂ ನಾಲ್ಕು ಮಕ್ಕಳಾದರೆ ಗೊತ್ತಾಗುತ್ತೆ ಸಂಸಾರದ ತಾಪತ್ರಯ. ಅಲ್ವೇ, ಬರೋ ಇನ್ನೂರು ರೂಪಾಯಿ ಸಂಬಳಾನೂ ಇಬ್ಬರೇ ಲಪಟಾಯಿಸಿ ತಿಂಗಳ ಕೊನೇಲಿ ಒಬ್ಬರ ಮುಖ ಒಬ್ಬರು ನೋಡ್ತೀವಲ್ಲಾ, ಇನ್ನು ಅವರ ಪಾಡೇನು ?"

"ಅದು ಸರೀ ಅಂದ್ರೆ, ನಾವೇನು ಮಾಡೋಕ್ಕಾಗುತ್ತೆ ?"

"ಹೌದು, ನಾವು ತಾನೇ ಏನುಮಾಡಲಿಕ್ಕೆ ಸಾಧ್ಯ ಅನ್ನು."

* * * * *

"ರ‍್ರೀ....ಕಮಲಮ್ಮನ್ನೋರ ಮಗ ಇಂಟರ್ ಪರೀಕ್ಷೆಗೆ ಹಣ ಕಟ್ಟ ಬೇಕಂತೆ. ಮೂವತ್ತೊಂದು ರೂಪಾಯಿ ಇದ್ರೆ ಕೊಡಿ, ಅವರಿಗಿನ್ನೂ ಸಂಬಳ ಬಂದಿಲ್ಲ. ಬರತ್ಲೂ ಕೊಡ್ತೇನೆ ಅಂದ್ರು. ಸೀರೆಗಾಗಿ ಇಟ್ಟಿದ್ದ ದುಡ್ನಲ್ಲಿ ಕೊಟ್ಟೆ. ಏನ್ರಿ, ಗವರ್ನಮೆಂಟಿನಲ್ಲಿ ಮೂರು ಮೂರು ತಿಂಗಳು ಸಂಬಳ ಕೊಡೋದು ತಡಮಾಡಿದರೆ ಬಡಸಂಸಾರಗಳ ಗತಿ ಏನ್ರಿ ?"

"ಅಯ್ಯೋ ಹುಚ್ಚಿ ! ತಿಂಗಳ ಮೊದಲನೇ ತಾರೀಖೇ ಸಂಬಳ ಬಂದುಬಿಡುತ್ತೆ. ಎಲ್ಲೋ ತಾಪತ್ರಯಕ್ಕೆ ಹಾಗೆಂದು ಹೇಳಿದ್ದಾರೆ ಅಷ್ಟೇ."

* * * * *

"ಅಲ್ರೀ........ಕಮಲಮ್ಮನ್ನೋರು ಎಂಥ ಜನಾನ್ರೀ. ಮೂರು ತಿಂಗಳಾದರೂ ತೆಗೆದುಕೊಂಡ ಹಣ ಹಿಂತಿರುಗಿಸಬೇಡ್ವೇ ? ಇದರ ಮೇಲೆ ಅಕ್ಕಿ, ಬೇಳೆ, ಕಾಫಿಪುಡಿ ತೆಗೆದುಕೊಂಡು ಹೋಗಿರೋದು ಎಷ್ಟೋ. ಸಾಲ ತೆಗೆದುಕೊಂಡು ಹೋದ್ರೆ ಹಿಂತಿರುಗಿಸೋ ಬಾಬತ್ತೇ ಇಲ್ಲಾ ಅಂತ

ಕಾಣುತ್ತೆ. ಹೀಗಾದ್ರೆ ಹೇಗೆ ನೆರೆಹೊರೇಲಿ. ಎಲ್ರೂ ಹೀಗೇ ಆದ್ರೆ ನೆರೆ ಒಂದು ಹೊರೆ ಆಗುತ್ತೆ ಅಷ್ಟೆ."

"ಸ್ವಲ್ಪ ತಾಳ್ಮೆ ತಗೋ, ಇಂದಲ್ಲದಿದ್ದರೆ ನಾಳೆ ಕೊಡ್ತಾರೆ."

"ಯಾವಾಗ ಕೊಡೋದು. ಹಬ್ಬ ಹತ್ತಿರ ಬಂತು ಸೀರೆ ತರಿಸಿ ಕೊಳ್ಳಬೇಕು. ಅದೂ ಅಲ್ಲದೆ ಹಾಲು ಮೊಸರಿನ ಲಕ್ಷ್ಮಮ್ಮನಿಗೂ ಮೂರು ತಿಂಗಳಿಂದ ದುಡ್ಡು ಕೊಟ್ಟಿಲ್ಲವಂತೆ. 'ಈಗಾಗಲೇ ಎಲ್ಲಾ ನಲವತ್ತು ರೂಪಾಯಿಗೆ ಬಂತು ತಾಯಿ ನಾನು ಬಡವೆ. ಕಾಲಕ್ಕೆ ಸರಿಯಾಗಿ ದುಡ್ಡು ಕೊಡ್ದೇಇದ್ರೆ ಗತಿ ಏನು ? ಏನೋ ನಿಮ್ಮ ಮುಖ ನೋಡಿಕೊಂಡು ಸುಮ್ಮನಿದ್ದೇನೆ' ಅಂತಾಳೆ ಲಕ್ಷ್ಮಮ್ಮ."

"ಸರಿ, ನಿನ್ನದು ಹಾಲು ಪುರಾಣ ಇದ್ದೇ ಇರುತ್ತೆ. ಆಫೀಸಿಗೆ ಹೊತ್ತಾಯ್ತು ಬೇಗ ಕಾಫಿ ಕೊಡು."

* * * * *

"ಲೇ ಸರಸೂ !....ಸರಸೂ !!"

"ಆಂ ! ಬಂದೇ !!"

"ಏನೇ ಅದು ಬೀದೀಲಿ ನಿನ್ನ ರಾಮಾಯಣ. ನೋಡಿದವರು ಏನಂದಾರು ? ಹೆಣ್ಣು ಅನ್ನೋದೇ ಮರೆತ್ಹಾಗೆ ಕಾಣುತ್ತೆ ನೀನು."

"ನಾನೇನ್ರೀ ಮಾಡಿದ್ದು ? ಹಾಲಿನ ಲಕ್ಷ್ಮಮ್ಮ ಬೀದೀಲಿ ನಿಂತು ಗಲಾಟೆ ಮಾಡ್ತಾ ಇದ್ದಾಳೆ. ಮೂರು ತಿಂಗಳಿಂದ ಎದುರು ಮನೇರು ದುಡ್ಡು ಕೊಟ್ಟಿಲ್ಲವಂತೆ. ಸಾಲ ಐವತ್ತಕ್ಕೇರಿತು. ದುಡ್ಡು ಕೊಡ್ದೇ ಹೋದ್ರೆ ನಾನು ಮುಂದಕ್ಕೆ ಒಂದು ಹೆಜ್ಜೆ ಇಡುವುದಿಲ್ಲ ಅಂತಾ ಜಗಳ ಮಾಡ್ತಾ ಇದ್ದಾಳೆ. 'ನೀವು ತಾನೆ ಆ ಮನೆಗೆ ವರ್ತ್ನೆ ಗೊತ್ತುಮಾಡಿ ದವರು. ಈಗ ದುಡ್ಡು ಕೊಡ್ಸಿ ಬನ್ನಿ' ಅಂತಾ ಪ್ರಾಣ ಹಿಂಡುತಾ ಇದ್ದಾಳೆ. ಇದೊಳ್ಳೆ ನನಗೆ ಪ್ರಾರಬ್ಧ ಗಂಟುಬಿತ್ತು. ಯಾವ ಜನ್ಮದ ಕರ್ಮವೋ. ಒಳಗೆ ಬಂದರೆ ನಿಮ್ಮ ಬೈಗಳು. ಹೊರಗಡೆ ಹೋದರೆ ಲಕ್ಷ್ಮಮ್ಮನ ಕಾಟ. ಹಾಲು ಕುಡಿದ ಋಣನಾದ್ರು ಕೊಡಬೇಕು ಅನ್ನೋ ನಿಯತ್ತಿಲ್ಲದ ಜನಕ್ಕೆ ಏನು ಹೇಳೋದು ? ಇನ್ನು ನನ್ನ ದುಡ್ಡು

ಬರುತ್ತೆ ಅಂತ ಎಣ್ಣೆಗಡಿಗೆ ಮೇಲೆ ಬರಕೋಬೇಕು. ಯಾವ ಜನ್ಮಾಂತರದ ಕರ್ಮವೋ ಇದು ನನಗೆ. ಗಂಡನ ಕೈಲಿ ಬೇಯಲಿಲ್ಲ. ಮಕ್ಕಳ ಕೈಲಿ ರೋಸಲಿಲ್ಲ. ಕಂಡೋರಿಗಾಗಿ ಸಾಯೋದು ಬಂತು ನನ್ನ ಹಣೇಬರಹ."

"ಅಳಬೇಡ್ವೇ ಅಪ್ಪಕ್ಕೇ, ಏನೋ ಅವರಿಗೂ ಬಡತನ. ಇಂದಲ್ಲ ದಿದ್ದರೆ ನಾಳೆ ಸಾಲ ತೀರಿಸುತ್ತಾರೆ. ಲಕ್ಷ್ಮಮ್ಮನಿಗೆ ಸುಧಾರಿಸು ಅಂತ ಹೇಳು. ನಿನಗೆ ಬರಬೇಕಾದ ಸಾಲದ ಹಣ ಪುನಃ ಅವರನ್ನು ಕೇಳಬೇಡ. ಹಬ್ಬಕ್ಕೆ ಸೀರೆ ತಂದುಕೊಡ್ತೇನೆ, ಅವರಿಗೆ ಅನುಕೂಲವಾದಾಗ ಕೊಡ್ಲಿ. ಆ ಚಿನ್ನದಂಥ ಮಕ್ಕಳನ್ನ ನೋಡಿದರೆ ಹೊಟ್ಟೆ ಚುರುಗುಟ್ಟುವುದಿಲ್ಲವೇನೇ ನಿನಗೆ?"

"ನೀವೇನೇ ಈ ಯುಗದ ಧರ್ಮರಾಯರು. ಲಕ್ಷ್ಮಮ್ಮನ ಕೈಲಿ ಸಹಸ್ರನಾಮ ಕೇಳೋವಾಗ್ಗೆ ಗೊತ್ತಾಗುತ್ತೆ ನಿಮ್ಮ ಪುರಾಣಕ್ಕೆ ಬೆಲೆ ಎಷ್ಟು ಅಂತಾ. ಅಲ್ರೀ ನನಗೆ ಇದಾವ ಶನಿ ಅಂತಾ ನನ್ನ ಬಂಧುವೋ ....ಬಳಗವೋ, ಅಣ್ಣನೋ....ತಮ್ಮನೋ?"

"ಇರಲೀ ಕಣೇ, ಗೋಳಾಡಬೇಡ. ಬಡತನ ಕೆಟ್ಟದ್ದು. ಪ್ರಪಂಚದಲ್ಲಿ ನೊರೆಹೊರೆ ಅಂದಮೇಲೆ ಅನುಸರಿಸಬೇಕು. ನೆರೆ-ಹೊರೆಯಾಗಬಾರದು. ಅದೇ ಕಷ್ಟದಲ್ಲಿ ನಾವಿದ್ದೀವಿ ಅಂತ ಯೋಚ್ಸಿ ನೋಡು. ಅರ್ಥವಾಗುತ್ತೆ ಅವರ ಕಷ್ಟ."

* * * * *

"ಅಲ್ರೀ-ಬೆಳಗ್ಗೆ ಎದ್ದು ಎಲ್ಲಿಗೋ ಪಂಚಾಯಿತಿಗೆ ಹೋದ್ಹಾಗಿತ್ತು"

"ಅದೇ, ಎದುರು ಮನೆಯವರು ಬಾಡಿಗೆಗೆ ಬಂದು ಐದು ತಿಂಗಳು ಆಯಿತಂತೆ. ಅಂದಿನಿಂದ ಬಾಡಿಗೆ ಕೊಟ್ಟಿಲ್ಲವಂತೆ. ಮನೆಯವನು ಬಂದು ಐದು ತಿಂಗಳ ಬಾಡಿಗೆಕೊಟ್ಟು ಈ ತಕ್ಷಣ ಮನೆ ಖಾಲಿಮಾಡಿ ಅಂತ ಹಟ ಹಿಡಿದು ಕುಳಿತಿದ್ದಾನೆ."

"ಧರ್ಮರಾಯರು ಏನು ಧರ್ಮ ಬೋಧಿಸಿ ಬಂದ್ರೀ."

"ಪಾಪ! ಆ ಕಮಲಮ್ಮನ ಯಜಮಾನನ್ನ ನೋಡಿದರೆ ಅಯ್ಯೋ ಅನ್ನಿಸುತ್ತೆ. ಆತನಿಗೆ ತೊಂಬತ್ತು ರೂಪಾಯಿ ಸಂಬಳ ಬರುತ್ತಂತೆ,

ಅವರಲ್ಲೇ ಸಂಸಾರ ಸಾಗಿಸಬೇಕಂತೆ. ಮನೆಯಲ್ಲೋ ವಿಪರೀತ ಥುಂದು. ಇವಕ್ಕೆ ಸರಿಯಾಗಿ ತಿಪ್ಪೇಲಿ ಹುಳು ಹೆಚ್ಚಿದಾಗೆ ಮನೆ ತುಂಬಾ ಮಕ್ಕಳು. ಏನು ಮಾಡಲಿ ಅಂತ ಗೋಳೋ ಅನ್ನುತ್ತಾನೆ."

"ಅಲ್ರೀ, ಆ ಹೊತ್ತು ಕಮಲಮ್ಮ ಗಂಡನಿಗೆ ನೂರೈವತ್ತು ಸಂಬಳ ಅಂದರಲ್ರೀ ಅವರು."

"ಎಲ್ಲೋ ಮರ್ಯಾದೆಗಾಗಿ ಸಂಬಳ ಸ್ವಲ್ಪ ಹೆಚ್ಚು ಹೇಳಿಕೊಂಡಿದ್ದಾರೆ ಅಷ್ಟೇ."

"ಮರ್ಯಾದೆಗೆ ಅಂತ ಸುಳ್ಳು ಹೇಳಿಕೊಳ್ಳುವುದೇ ? ಸರಿ. ಬಾಡಿಗೆಯವನಿಗೆ ಏನು ಹೇಳಿದಿರಿ ?"

"ನಾಳೆ ಐದು ತಿಂಗಳ ದುಡ್ಡು ಪೂರ್ಣ ಕೊಡುತ್ತೇನೆ ಅಂತ ಕಮಲಮ್ಮನ ಯಜಮಾನ್ರೇ ಹೇಳಿದ್ದಾರೆ. ನಾಳೆ ದುಡ್ಡು ಕೊಡದಿದ್ದರೆ ಪೋಲೀಸಿಗೆ ಕಂಪ್ಲೇಟ್ ಕೊಡುತ್ತೇನೆ ಅಂತ ಹೋಗಿದ್ದಾನೆ. ಬಾಡಿಗೆ ಹಣ ಕೊಡ್ದೆ ಇದ್ರೆ ನಾವು ತಾನೇ ಏನು ಹೇಳೋದು. ಬಾಡಿಗೆಯವನು ಹಣ ಕೇಳುವುದು ನ್ಯಾಯ. ಈ ಪ್ರಾಣಿ ನಾಳೆ ಎಲ್ಲಿಂದ ಹಣ ತರುತ್ತೋ ದೇವ್ರೇ ಬಲ್ಲ."

"ಅಲ್ರೀ, ಬಡತನಕ್ಕೆ ತಕ್ಕ ಹಾಗೆ ಸಂಸಾರ ಸಾಗಿಸಬೇಕು ಅನ್ನೋ ಬುದ್ಧೀನೇ ಇಲ್ಲಾ ಕಮಲಮ್ಮನವರಿಗೆ ಕಣ್ರೀ."

"ದೊಡ್ಡ ಸಂಸಾರ ಕಣೇ ಅದು. ಖರ್ಚು ಎಷ್ಟು ಕಮ್ಮಿ ಮಾಡಿದರೂ ಮಕ್ಕಳ ಮನೆ, ಜಾಸ್ತಿಯಾಗಿಬಿಡುತ್ತೆ."

* * * * *

"ರ್‍ರೀ....ಕೇಳಿದ್ರಾ ಸುದ್ದೀನಾ ?"

"ಏನೇ ಅದು ಬೆಳಗಾಗ ನಿನ್ನ ನ್ಯೂಸು ?"

"ಏನೂ ಇಲ್ಲ, ಕಮಲಮ್ಮನೋರ ಯಜಮಾನರನ್ನ ಅರೆಸ್ಟ್ ಮಾಡಿಕೊಂಡು ಹೋದರಂತೆ. ಆಫೀಸಿನ ಕ್ಯಾಷ್‌ನಲ್ಲಿ ವ್ಯತ್ಯಾಸ ಬಂದಿದೆಯಂತೆ. ಆಫೀಸಿನಲ್ಲಿ ಅಕೌಂಟೆಂಟ್ ಇವರೇ ಅಂತೆ. ಕಮಲಮ್ಮ, ಮಕ್ಕಳೆಲ್ಲಾ ಅಳುತ್ತಾ ಇದ್ದಾರೆ. ಇದೇ ಸಮಯದಲ್ಲಿ ಬಾಡಿಗೆಯವನು ಬೇರೆ ಬಂದು

ಕುಳಿತಿದ್ದಾನೆ. ಹೋಗ್ರೀ, ನೀವಾದ್ರು ಸ್ವಲ್ಪ ಅವನಿಗೆ ಹೇಳಿ ಈ ಹೊತ್ತು ಕಳೆದು ನಾಳೆ ಬಾ ಅಂತ."

* * * * *

"ಅಬ್ಬಾ! ಬಾಡಿಗೆಯವನನ್ನ ಒಪ್ಪಿಸಿ ಕಳಿಸಿದ್ದಾಯಿತು. ನಾಳೆ ಮನೆ ಖಾಲಿ ಮಾಡಿಸಿಕೊಡ್ತೀನೆಂದು ಹೇಳಿ ಬಾಡಿಗೆ ಹಣ ಕೇಳಬೇಡವೆಂದು ಹೇಳಿ ಕಳುಹಿಸಿದ್ದೇನೆ. ಕಮಲಮ್ಮನಿಗೂ ಮಕ್ಕಳಿಗೂ ಈ ದಿನ ಅಡಿಗೇಗೆ ಆಗೋ ಸಾಮಾನು ಕೊಡು. ನಾಳೆ ಎಲ್ಲೋ ಅವರ ನೆಂಟರಿದ್ದಾರಂತೆ ಅಲ್ಲಿಗೆ ಹೋಗ್ತಾರಂತೆ."

"ಅಡಿಗೆಗೆ ಆಗ್ಲೇ ಸಾಮಾನು ಕೊಟ್ಟಿದ್ದೇನೆ."

"ಹೆಂಗಸು ಅಂದ್ರೇ ನೀನೇ ಕಣೇ, ಎಷ್ಟು ಬೇಗ ಕೋಪ, ಎಷ್ಟು ಬೇಗ ಶಾಂತಿ! ಸೀತಾಮಾತೆಯ ಸುಗುಣಗಳಿದ್ದರೂ ಸಮಯದಲ್ಲಿ ಮಾತ್ರ ಚಂಡಿಯಾಗಿ ಬಿಡುತ್ತೀಯಲ್ಲ ಅದೇಕೆ?"

"ಸಾಕು ಸುಮ್ಮನಿರಿ. ಅಲ್ರೀ ಅವರೇನು ನನ್ನ ಹಾಗೆ ಹೆಂಗಸಲ್ವೇ. ಗಂಡ ವಾಪಸ್ಸು ಬರೋದು ಎಂದಿಗೋ. ಅಲ್ಲಿನವರೆಗೂ ಏನೂ ಮಾಡುತ್ತಾರೋ. ಏಳು ಮಕ್ಕಳು ಈಗ ಸಪ್ತಗ್ರಹಗಳಾಗಿವೆ ಅವರಿಗೆ."

"ಅಲ್ವೇ, ನಾವು ತಾನೇ ಏನು ಮಾಡಲಿಕ್ಕೆ ಸಾಧ್ಯ? ದೇವರು ನಮಗೆ ಕೈತುಂಬಾ ಕೊಟ್ಟಿದ್ದಾನೆಯೇ ಅವರ ಕಷ್ಟ ನೀಗಿಸಲಿಕ್ಕೆ? ಅಯ್ಯೋ ಪಾಪ ಅಂತ ಅವರ ಅಳಲಿಗೆ ನಮ್ಮ ಮರುಕ ತೋರಿಸಬಹುದು. ಅದಕ್ಕೆ ಹೆಚ್ಚೇನು ಮಾಡಲು ಸಾಧ್ಯ? ನೆರೆ-ಹೊರೆ ಅಂದಮೇಲೆ ನಮ್ಮ ಕೈಲಾದ ಮಟ್ಟಿಗೆ ಸಹಾಯ ನೀಡಿದ್ದೇವೆ. ನೆರೆ-ಹೊರೆಯಾಯಿತು ಅನ್ನೋಹಾಗೆ ಮಾಡಿಲ್ಲ."

"ಇನ್ನು ನನ್ನ ದುಡ್ಡು ಹೋದಹಾಗೆ."

"ಇನ್ನೂ ಅದರ ಆಸೆ ಇಟ್ಟುಕೊಂಡಿದ್ದೀಯಾ ಒಂದುವೇಳೆ ಅವರು ಕೊಟ್ರೂ ಮುಟ್ಟಬೇಡ. ಆ ಹುಡುಗ ಇಂಟರ್ ಪಾಸುಮಾಡಲಿ. ನಮಗೆ ಅದೇ ಸಂತೋಷ. ಅಂದು ನಮ್ಮ ದುಡ್ಡು ಬಂದಹಾಗೆ. ನಾಳೆ ನಿನ್ನ ಹೊಟ್ಟೇಲಿ ಹುಟ್ಟಿದ ಮಕ್ಕಳಿಗೆ ಈ ಪುಣ್ಯ ಕಾಯುತ್ತೇ ಕಣೇ.

ಈ ದಿನ ಕಮಲಮ್ಮನೋರ ಯಜಮಾನರ ಆಫೀಸಿನಲ್ಲಿ ವಿಚಾರವೇನು ಅಂತ ವಿಷಯ ತಿಳಿತೀನಿ. ನನ್ನ ಕೈಲಾದ ಮಟ್ಟಿಗೆ ಸಹಾಯನೀಡಿ ಅವರ ಯಜಮಾನರನ್ನು ವಿಪತ್ತಿನಿಂದ ಪಾರುಮಾಡುತ್ತೇನೆ. ಅದಕ್ಕೂ ಮೀರಿದರೆ ದೈವೇಚ್ಛೆ."

"ಅಷ್ಟುಮಾಡಿ ನಿಮ್ಮ ದಮ್ಮಯ್ಯ."

"ನಿನಗೂ ಕರುಣೆ ಉಕ್ಕಿತೇ? ಭೂಮಿತಾಯಿ ಕಣೇ. ಎಲ್ಲಿ ನೀನೊಂದು ಮು....ಕೊಟ್ಟರೆ ಅವೆಲ್ಲಾ ಮಾಡ್ತೀನಿ."

"ಥೂ, ಹೋಗ್ರಿ, ಯಾವಾಗಲೂ ತಮಾಷೇನೇ ನಿಮ್ಮದು."

"ಅಲ್ವೇ ಕೆಲ್ಸ ಮಾಡಿದ್ದಕ್ಕೆ ಕೂಲಿ ಬೇಡ್ವೇನೆ?"

"ಕೆಲಸ ಪೂರ್ತಿ ಮಾಡಿಕೊಂಡು ಬನ್ನಿ, ಆಮೇಲೆ"

"ಅಡ್ವಾನ್ಸ್ ಬರದೆ ಕೆಲಸಕ್ಕೆ ಕೈ ಹಚ್ಚಲ್ಲ."

"ನೀವೆಲ್ಲಿ ಬಿಡ್ತೀರಾ ಹಿಡಿದ ಹಟ. ಬರಬರುತ್ತಾ ಯಾಕೋ ಹಸುಮಗು ಆಗ್ತಿದ್ದೀರಾ."

....................

"ಅಂ ಅಡ್ವಾನ್ಸ್ ಬಂತು. ಇಗೋ ಹೊರಟೆ. ಆ ಮಕ್ಕಳು ಅತ್ತರೆ ಏನಾದರೂ ತರಿಸಿಕೊಡು. ಬೇಗ ಬಂದುಬಿಡ್ತೇನೆ ಮನೆಗೆ."



# ಅನಾಥ ಶಿಶು

## ೧

ನಮ್ಮೂರಿನಲ್ಲೂ ಒಂದು ಅನಾಥ ಆಶ್ರಮವಿದೆ. ಅನಾಥಾಶ್ರಮ ತೆರೆದು ಬಹು ವರ್ಷಗಳಾಗಿಲ್ಲ. ಕೆಲವೇ ವರ್ಷಗಳಾಗಿವೆ. ನಮ್ಮೂರಿನಲ್ಲಿ ಧರ್ಮಪ್ರವರ್ತಕರು ಹೆಚ್ಚಿದಾಗ ಅನಾಥಾಶ್ರಮವೂ ಒಂದು ಧರ್ಮದ ಗುರುತಾಗಿ ತೆರೆಯಲ್ಪಟ್ಟಿತು. ಇತ್ತೀಚಿಗೆ ನಮ್ಮೂರಿನ ಪೌರಸಭೆಯವರು ಅನಾಥ ಆಶ್ರಮದ ಕಟ್ಟಡಕ್ಕೆ ಉಚಿತ ಜಾಗವನ್ನೂ ಕೊಟ್ಟಿದ್ದಾರೆ. ಮುಂಬರುವ ಧರ್ಮಾತ್ಮರಿಂದ ಇದಾರತು ಏಳಬೇಕಾಗಿದೆ.

*   *   *   *   *

"ಮಿಸ್ ಲೀಲಾ ! ಮಿಸ್ ಲೀಲಾ !"

"ಮಿಸ್ ಲೀಲಾ !"

"ಯಾರದು ?"........ಅನಾಥಾಶ್ರಮದ ಮೇಲ್ವಿಚಾರಿಕೆ ಮೂಗಿನ ಮೇಲಿದ್ದ ಕನ್ನಡಕವನ್ನು ಸರಿಪಡಿಸುತ್ತ ಹೊರಗಡೆ ಬಂದಳು.

"ಓ ! ಹಲೋ ಮಿಸ್ಟರ್ ಶಂಕರ್ !........ಒಳಗಡೆ ಬನ್ನಿ."

"ನಮಸ್ತೇ........ಲಿಲ್ಲಿದೇವಿ !........ಲೀಲಳನ್ನು ಮೂರು ದಿನದಿಂದ ನೋಡಲಾಗಲಿಲ್ಲ. ಹಾಗೇ ನೋಡೋಣ ಎಂದು ಬಂದೆ."

"ಅಗೋ ಮೂರನೇ ಕೊಟಡಿಯಲ್ಲಿ ಆಡುತ್ತಿದ್ದಾಳೆ. ಕರೆ ಕಳುಹಿಸುತ್ತೇನೆ, ಒಳಗಡೆ ಬನ್ನಿ". ಲಿಲ್ಲಿದೇವಿಯ ಅತ್ಯಂತ ವಿನಯಪೂರ್ವಕ ಕರೆ ಮೇರೆಗೆ ಶಂಕರ ಒಳಗಡೆ ನಡೆದು ಪಕ್ಕದ ಕುರ್ಚಿಯೊಂದರಲ್ಲಿ

ಮುಂಡಿಸಿದ.

ನಿಮಿಷಾರ್ಧದಲ್ಲೇ ಎಂಟು ವರ್ಷದ ಲೀಲ ಶಂಕರನ ಮುಂದೆ ಪ್ರತ್ಯಕ್ಷವಾದಳು. ಶೈಶವಾವಸ್ಥೆಯಲ್ಲಿ ಎಂತಹ ಚೆಲುವು! ನಿಜವಾಗಿಯೂ ವಿಧಾತನ ಕೈವಾಡ ವಿಚಿತ್ರವಾದುದು. ಲೀಲಳ ಕಿಶೋರ ಚೆಲುವು ಅಷ್ಟು ಮನಮೋಹಕವಾಗಿತ್ತು. ತೆರೆದ ಬಾಯಿ, ಬಿಟ್ಟ ಕಣ್ಣುಗಳಿಂದ "ಅಣ್ಣಾ! ಅಣ್ಣಾ!!" ಎಂದು ಅಬ್ಬರಿಸುತ್ತ ಶಂಕರನ ಕೊರಳ ಸುತ್ತಿದಳು ಲೀಲ.

"ಯಾಕಣ್ಣ ಮೂರು ದಿನದಿಂದ ಇತ್ತ ಬರಲೇ ಇಲ್ಲ?" ಲೀಲ ಪ್ರಶ್ನಿಸಿದಳು.

"ಕೆಲ್ಸವಿತ್ತು ಮಗು, ಬರಲಾಗಲಿಲ್ಲ."

"ಅಣ್ಣಾ, ಕೊಂಚ ಬಾಯಿ ತೆರೆಯಣ್ಣ" ಲೀಲ ಶಂಕರನ ಕೊರಳಿಗೆ ಬಿದ್ದು ಗದ್ದವಿಡಿದು ಕೇಳಿದಳು.

"ಏನು ಕೊಡ್ತೀ ಮಗು" ನೆಟ್ಟ ದೃಷ್ಟಿಯಿಟ್ಟು ಅವಳ ವಂಕಿಯಂತಿದ್ದ ಕೇಶವನ್ನು ನೀವುತ್ತ ತುಟಿಯಿಡಿದು ಪ್ರೇಮ ಸೂಸುವ ಮುಗುಳ್ನಗೆಯಿಂದ ಪ್ರಶ್ನಿಸಿದ.

"ತಿಂಡಿ ಕೊಡ್ತೀನಿ."

"ಏನು ತಿಂಡಿ? ಮೊದಲು ತಿಳಿಸಿದರೆ ಬಾಯಿ ತೆರೆಯುವುದು" ಶಂಕರ ಹುಸಿಕೋಪ ನಟಿಸಿದ.

"ಬಾಯಿ ತೆರೆಯಣ್ಣಾ ಅಂದರೆ" ಲೀಲ ದುಃಖ ನಿರಾಶೆಯಿಂದ ಅಂಜಲಿಬದ್ಧಳಾದಳು.

ಲೀಲಳ ಮುದ್ದುಮಾತಿಗೆ ಮೆಚ್ಚಿಕೊಂಡ ಶಂಕರ, ಬಾಯಿ ತೆರೆದ. ಲೀಲ ತನ್ನ ಕತ್ತನ್ನು ಬಗ್ಗಿಸಿಕೊಂಡು ಬಹಳ ಹೊತ್ತಿನಿಂದ ಕೈಲಿ ಇಟ್ಟುಕೊಂಡಿದ್ದ ಬೆವರಿನಿಂದ ತೊಯ್ದ 'ಪೆಪ್ಪರ್ಮೆಂಟ್'ಗಳನ್ನು ಶಂಕರನ ಬಾಯಿಗೆ ತುರುಕಿದಳು.

ಲೀಲಳ ಈ ಮುಗ್ಧತನಕ್ಕೆ ಬಾಚಿ ಅವುಚಿಕೊಂಡ. ಒಮ್ಮೆ ಪ್ರೇಮ ಪೂರಿತ ಕರುಣೆಯಿಂದ ಲೀಲಳ ಲಲಾಟಕ್ಕೆ ಮುತ್ತಿಟ್ಟು ಜೋಬಿನಲ್ಲಿದ್ದ ಬಿಸ್ಕತ್ತು ಪೊಟ್ಟಣಗಳನ್ನು ಕೈಗಿತ್ತು ಮತ್ತೊಂದುಸಾರಿ ಲೀಲಳ ವೈಸವರಿ

ಆಟದ ಹುಡುಗರೊಡನೆ ಸೇರಿಕೊಳ್ಳಲು ಕಳುಹಿಸಿದ.

"ಮೇಡಂ ಲಿಲ್ಲಿದೇವಿ, ಈ ರೂಪಾಯಿಗಳನ್ನು ತೆಗೆದುಕೊಳ್ಳಿ ಲೀಲಳಿಗೆ ಚಂದವಾದ ಬಟ್ಟೆಗಳನ್ನು ಹೊಲಿಸಿರಿ." ಲೀಲಳು ಹೊರಟುಹೋದ ಮೇಲೆ ಶಂಕರ ಜೋಬಿನಿಂದ ಹತ್ತು ರೂಪಾಯಿಗಳು ಹೊರತೆಗೆದ.

"ಬೇಡ, ಬೇಡ, ಕಳೆದವಾರ ಕೊಟ್ಟ ಹಣ ಹಾಗೆ ಇದೆ. ಅದರಲ್ಲಿ ಹೊಲಿಸುತ್ತೇನೆ'

"ಇಲ್ಲಾ ಮೇಡಂ ಹಣ ತೆಗೆದುಕೊಳ್ಳಬೇಕು" ಹಾಗೆನ್ನುತ್ತ ಮೇಜಿನ ಮೇಲೆ ದುಡ್ಡಿಟ್ಟು ಹೊರಡಲು ಸಿದ್ಧನಾದ.

"ಮಿ|| ಶಂಕರ್, ಒಂದು ವಿಚಾರ, ನಿಮ್ಮ ಲೀಲಳಿಗೆ ಸಂಗೀತ ಕಲಿಸಿದರೆ ಚೆನ್ನಾಗಿ ಹಾಡಬಲ್ಲಳು. ಬಲು ಬುದ್ಧಿವಂತೆ."

"ಆಗಲಿ ಮೇಡಂ ನಿಮ್ಮ ಇಚ್ಛೆ. ಲೀಲಳ ಭವಿತವ್ಯಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧನಾಗಿದ್ದೇನೆ."

"ಯಾರನ್ನಾದರೂ ಸಂಗೀತ ಪಾಠಕ್ಕೆ ಗೊತ್ತುಮಾಡಿ, ಹಣ ಕೊಡುತ್ತೇನೆ."

"ನನಗೂ ಗೊತ್ತಿರಲಿಲ್ಲ ಮೊನ್ನೆ ಹುಡುಗರ ಮುಂದೆ 'ಚಲ್ ಚಲ್‌ರೇ ನೌಜವಾನ್' ಹಾಡುತ್ತಿದ್ದಳು. ಬಹು ಇಂಪಾಗಿತ್ತು. ಅದರಿಂದ ಸಂಗೀತ ಕಲಿಸಿ ಎನ್ನುವ ಸಾಹಸ ತೋರಿತು."

"ಹೌದು ಮೇಡಂ ನನಗೂ ಗೊತ್ತಿದೆ. ನೀವು ಇಲ್ಲಿ ಇಲ್ಲದಾಗ ಎಷ್ಟೋಸಾರಿ ನನ್ನ ಮುಂದೆ 'ಚಂದಕ್ಕಿಮಾಮ' ಹಾಡಿದ್ದಾಳೆ.

"ಹಾಗಾದರೆ ಸಂಗೀತಕ್ಕೆ ನಾಳೆಯೇ ಗೊತ್ತುಮಾಡುವೆನು."

"ಬೇಗನೆ ಗೊತ್ತುಮಾಡಿ ಶಾಸ್ತ್ರೋಕ್ತ ಪಾಠ ಹೇಳಿಸಿ. ನಾನು ಇನ್ನು ಹೊರಡುತ್ತೇವೆ. ನಮಸ್ತೇ !"

ಶಂಕರ ಅನಾಥಾಶ್ರಮದಿಂದ ಹೊರಬಂದಾಗ ಗಡಿಯಾರದ ಮುಳ್ಳು ಸಂಜೆ ೭ ರ ಗಡಿಯನ್ನು ದಾಟಿತ್ತು. ಶಂಕರ ಆಫೀಸಿನಿಂದ ನೇರವಾಗಿ ಅನಾಥಾಶ್ರಮಕ್ಕೆ ಬಂದಿದ್ದ. ಅವಿಶ್ರಾಂತವಾದ ಎರಡು ತಾಸು ಲೀಲಳಿಗೋಸ್ಕರ ಕಳೆದಿದ್ದ. ಅವನ ಮನಸ್ಸು ಯಾವುದೋ ಕಣ್ಣಿಗೆ ಕಾಣದ

ಭಾವನಾಹಕ್ಕಿಯು ಬಾಲವಿಡಿದು ಗಗನಬಿಟ್ಟು ದೂರ ಹೋಗಿದ್ದಿತು. ಅಂದಿನ ತಿಮ್ಮಿಯೆಲ್ಲಿ? ಇಂದಿನ ಲೀಲಳೆಲ್ಲಿ? ಅಜಗಜ ಅಂತರವಲ್ಲವೆ? ತಿಮ್ಮಿ ಎಂಬ ಹೆಸರಿನಿಂದ ಪರಿವರ್ತನೆಹೊಂದಿ ಲೀಲಳಾದ ಬಗೆ, ಈ ಮಧ್ಯೆ ಸರಿದ ದಿನಗಳನ್ನು ಶಂಕರ ಕುರಿತು ಯೋಚಿಸತೊಡಗಿದ. ಯೋಚಿಸುತ್ತಲೇ ಮನೆ ಸೇರಿದ. ಮನೆ ತಲುಪಿದರೂ ಲೀಲಳ ಮುಂದಿನ ಭವಿತವ್ಯ ಕುರಿತು ಯೋಚಿಸುವುದು ಬಿಡಲಿಲ್ಲ.

೨

ಇಕ್ಕೆಲಗಳಲ್ಲಿಯೂ ಸೊಂಪಾಗಿ ಬೆಳೆದ ಮಾವಿನ ತೋಪು. ಮಧ್ಯೆ ವಿಶಾಲವಾದ ಭೂಪ್ರದೇಶ. ನೆತ್ತಿಯ ಮೇಲೆ ಭಾನು ಬಂದರೂ ಒಂದಿಸಿತೂ ರಶ್ಮಿ ಬೀಳದು. ಅಷ್ಟು ಒತ್ತಾಗಿ ಬೆಳೆದ ತೋಪು ದಿಕ್ಕುಕಾಣದ ದರಿದ್ರರಿಗೆ ಒಂದು ಚೊಕ್ಕಟವಾದ ಆಶ್ರಮ. ನೂರೆಂಟು ದೀನದುಃಖಿ, ಕುರುಡ, ಕುಂಟ ಅನಾಥರಿಗೆ ಜಹಗೀರಾದ ಮನೆಯಂತಿತ್ತು.

ಶಂಕರನ ಆಫೀಸು ಅತ್ತಕಡೆಯೇ ಇತ್ತು. ಆಫೀಸಿಗೆ ಹೋಗಲು ನಾಲ್ಕಾರು ದಾರಿಗಳಿದ್ದುವು. ಆದರೂ ಆ ತೋಪಿನಲ್ಲಿ ನುಗ್ಗಿ ಹೋಗುವುದೇ ಅವನ ಅಭ್ಯಾಸ. ತೋಪಿನಲ್ಲಿ ಹೊರಟು ಹೊರಬರಬೇಕಾದರೆ ಹತ್ತು ನಿಮಿಷವಾದರೂ ಬೇಕಿತ್ತು. ಎಷ್ಟೋಬಾರಿ ಬೇರೆ ಹಾದಿ ಹಿಡಿಯಬೇಕೆಂದು ಹೊರಟು ಅದೇ ತೋಪಿನಲ್ಲಿ ಬಂದಿದ್ದ.

ಒಂದು ದಿನ ಆಫೀಸಿನಿಂದ ಶಂಕರ ಮನೆಕಡೆ ಹೊರಟ. ಯಾವುದೋ ಗಾಢವಾದ ಯೋಚನೆಯಲ್ಲಿ ಮುಳುಗಿದ ಶಂಕರನಿಗೆ ತಾನು ಎಲ್ಲಿ ನಡೆಯುತ್ತಿದ್ದೇನೆಂಬ ಪರಿಜ್ಞಾನವಿರಲಿಲ್ಲ. ದಿನದ ರೂಢಿಯಂತೆ ತೋಪನ್ನು ಹೊಕ್ಕ. ಅದೇ ಹಾದಿ. ಅದೇ ಮಾವಿನಮರಗಳು. ಶಂಕರನ ಮನಸ್ಸಿನಲ್ಲಿ ಯಾವುದೋ ಹಳೆಯ ನೆನಪು ಬಂದುಹೋಯ್ತು.

ಒಮ್ಮೆ ಹಿಂತಿರುಗಿ ನೋಡಿದ. ಒಂದು ವೃಕ್ಷದ ನೆರಳಿನಲ್ಲಿ ತುಂಬು ಗರ್ಭಿಣಿ ಅನಾಥೆ ತನ್ನ ಪತಿಯ ಇದಿರಿನಲ್ಲಿ ಕುಳಿತು ದುಃಖಿಸುತ್ತಿದ್ದಾಳೆ. ಶಂಕರನಿಗೆ ಎದೆ ಝಲ್ಲೆಂದಿತು. ಆ ಅನಾಥೆ ಶಂಕರನಿಗೆ ಹೊಸಬಳಲ್ಲ. ಪ್ರತಿದಿನವೂ ಅವಳನ್ನು ನೋಡುತ್ತಿದ್ದ. ಎಷ್ಟೋಬಾರಿ ಅವರ ಸುಖ

ದಾಂಪತ್ಯ ಕುರಿತು ಯೋಚಿಸಿದ್ದ. ಅನಾಥರಾದರೂ ಎಷ್ಟು ಸುಖಿಗಳು! ಪತಿ ಅಂಧನಾದರೂ ಸತಿಗೆ ಅವನಲ್ಲಿ ಎಂತಹ ಮಮತೆ! ಆ ನೈಜ ಒಲವಿನಲ್ಲಿ ಎಂತಹ ಅನುರಪ್ರೇಮ ಅಡಗಿದೆ. ಸುಖವಿಲ್ಲದ ಶ್ರೀಮಂತಿಕೆಯ ಲೋಲುಪ್ತತೆಯಲ್ಲಿ ತೊಳಲಾಡುವುದಕ್ಕಿಂತ ಸುಖಪಡುವ ದಾರಿದ್ರ್ಯವೇ ಲೇಸಲ್ಲವೇ? ಆ ಅನಾಥರನ್ನು ಕಂಡು ಶಂಕರನು ಈ ವಿಚಾರವನ್ನು ಮನಸ್ಸಿನಲ್ಲಿಯೇ ತರ್ಕಮಾಡಿದ್ದ.

ಆದರೆ ಈ ದಿನ ಅನಾಥೆ ಸುಖದಲ್ಲಿದ್ದಂತೆ ಕಾಣಲಿಲ್ಲ. ಯಾವುದೋ ಎದುರಿಸಲಾರದ ಕಷ್ಟ ಎದುರಾಗಿದೆಯೆಂದು ಭಾಸವಾಯ್ತು. ಆದರೇನು ನೆರೆಯುವರ ದುಃಖಕ್ಕೆ ಅಳುಕಲಾದೀತೆ? ಶಂಕರ ತನ್ನ ದಾರಿ ಹಿಡಿದು ಮನೆಕಡೆ ಹೊರಟ. ಅನಾಥೆಯ ಪಕ್ಕದಲ್ಲಿ ಕುಳಿತು ರೋಧಿಸುತ್ತಿದ್ದ ಚಿಕ್ಕಮಗುವಿನ ಕಣ್ಣೀರು ಆಗಾಗ್ಗೆ ಎಚ್ಚರಿಸಿ ಶಂಕರನನ್ನು ಚಿಂತೆಗೀಡು ಮಾಡುತ್ತಿತ್ತು.

ಒಲವು ತುಂಬಿದ ಹಾಲುಸಕ್ಕರೆಯಂಥ ಸಂಸಾರದಲ್ಲಿ ವಿಷ ಬೆರತಿದೆಯೋ? ಆಕೆಗೆ ಏನು ಕಷ್ಟವಿರಬಹುದು. ಆಕೆಯ ಪತಿ ಹಾಸಿಗೆ ಹಿಡಿದಿರಲು ಕಾರಣವೇನು? ಆಕೆ ಪತಿಗಾಗಿಯೇ ದುಃಖಿಸುತ್ತಿರುವಳೆ? ಆಕೆಯ ಮುಗ್ಧ ಹೃದಯದಲ್ಲಿ ಎಂತಹ ಪ್ರೇಮ ಸಸಿ ನಾಟಿದೆ? ಆಲೋಚಿಸಿದಂತೆಲ್ಲ ಶಂಕರನ ಇದಿರು ಅನಾಥೆಯ ದೀನಚಿತ್ರ ಬೆಟ್ಟದಂತೆ ಎದ್ದು ನಿಂತಿತು.

ಅವಳೊಬ್ಬಳು ಅನಾಥೆ. ಅವಳ ತಂದೆ ಯಾರೋ, ತಾಯಿ ಯಾರೋ ತಿಳಿಯದು. ಅವಳ ತಾತ ಒಬ್ಬ ಕುರುಡ. ಅವನ ಜೊತೆಯಲ್ಲಿ ಭಿಕ್ಷೆ ಬೇಡುವುದು; ಮನೆ ಮನೆಯ ಮುಂದೆ ದೇವರನಾಮ ಹಾಡುವುದು, ಅವಳ ದಿನಚರಿಯಾಗಿತ್ತು. ದೇವರನಾಮ ಕಿವಿಗೆ ಸೊಗಸಲ್ಲದಿದ್ದರೂ ಕೇಳಲಿಕ್ಕೆ ಮಧುರವಾಗಿರುತ್ತಿತ್ತು. ಅನಾಥೆ ಕೇವಲ ಭಿಕ್ಷೆ ಬೇಡುವುದರಿಂದಲೇ ತನ್ನ ಕಿಶೋರಾವಸ್ಥೆ ಕಳೆದಳು.

ಅನಾಥೆ ಯೌವನದ ಹಂತ ಹತ್ತುತ್ತಿರುವಲ್ಲಿ ಸಹಪಾಠಿಯೊಬ್ಬ

ದೊರೆತ. ಆತ ಚೆನ್ನಾಗಿ ಹಾಡಬಲ್ಲ. ಅವನಿಗೂ ತಂದೆ ತಾಯಿಗಳಿದ್ದ ಹಾಗೆ ಕಾಣಲಿಲ್ಲ. ಎಲ್ಲಿಯೋ ಹುಟ್ಟಿದ ನದಿಗಳು ಅಂತ್ಯದಲ್ಲಿ ಒಂದಾಗಿ ಸಮುದ್ರ ಸೇರುವಂತೆ ಆ ಸಹಪಾಠಿಗಳು ಎಲ್ಲಿಯೋ ಹುಟ್ಟಿ, ಬೆಳೆದು ಪ್ರೇಮ ಸಮುದ್ರದಲ್ಲಿ ಒಂದಾದರು.

ಅನಾಥೆಗೆ ಪತಿಯೆಂದರೆ ಬಹುಪ್ರೇಮ. ಆತನ ಇಂಪಾದ ಮಧುರ ಗಾನ ಕೇಳಿದರಂತೂ ನಾದಪ್ರಿಯ ಇದಿರಾದ ಹಾಗೆ. ಇವರ ಹಾಡು ಕೇಳಲು ಎಲ್ಲರಿಗೂ ಎಂದು ಬಗೆಯ ಆನಂದ, ಪ್ರೀತಿ. ಪತಿ ಹಾಡುವಾಗ ಸತಿ ಅವನ ಧ್ವನಿಗೆ ಶ್ರುತಿ ನುಡಿಸಬೇಕು. ಸತಿ, ಹಾಡುವಾಗ ಪತಿ ಶ್ರುತಿ ಬಾರಿಸಬೇಕು. ಅಹರ್ನಿಶಿ ಗಾನ ಹಾಡಿಕೊಂಡು ಬೀದಿ ಬೀದಿ ಅಲೆದು ತಿರಿದು ಆ ದಿನದ ಕೂಳು ಸಂಪಾದಿಸಬೇಕು.

ಹೀಗೆಯೇ ಕೆಲವು ದಿನಗಳು ಸಾಗಿದವು. ವಸಂತ ಕಳೆದು, ಐದು ಋತುಗಳೂ ಕಳೆದು ಮತ್ತೆ ವಸಂತ ಇಣಿಕಿದ. ಅಷ್ಟರಲ್ಲಿ ಅನಾಥೆಯ ತಾತ ಸತ್ತುಹೋಗಿದ್ದ. ಈಗ ಅವರಿಬ್ಬರದೇ ದಾಂಪತ್ಯ ಜೀವನ. ಸಂಸಾರ ಬೆಳೆದಹಾಗೆ ಪ್ರೇಮ ವೃಕ್ಷದಲ್ಲಿ 'ಹೂ' ಮೂಡಿತು. ಮಗು ಜಗತ್ತಿನ ದೃಷ್ಟಿಗೆ ಬೀಳುತ್ತಿರುವಲ್ಲಿ ಅನಾಥನಿಗೆ ದೇವಿ (ಸಿಡುಬು) ಎದ್ದಿತು. ಇದರ ಪರಿಣಾಮ ಅನಾಥನಿಗೆ ಕಣ್ಣುಗಳು ಕುರುಡಾದವು.

ಅನಾಥ, ಕುರುಡು ಜೀವನದಲ್ಲೆ ಒಂದೆರಡು ವರ್ಷ ತಳ್ಳಿದ. ಅವರ ದಾಂಪತ್ಯ ವೃಕ್ಷವಲ್ಲಿ ಮಗವೊಂದು 'ಹೂ' ಫಲಿಸುವ ಚಿಹ್ನೆ ಮೂಡಿತು.

ಆದರೆ, ಅನಾಥ ಯಾವುದೋ ಪ್ರಬಲ ವ್ಯಾಧಿಯುಲ್ಲಿ ನರಳುತ್ತಿದ್ದಾನೆ. ವ್ಯಾಧಿ ಪ್ರಾರಂಭವಾಗಿ ಸಪ್ತಾಹಗಳೆರಡು ಹಾದುಹೋಗಿವೆ. ಈಗ ಅನಾಥ ಪಟ್ಟಾಗಿ ಹಾಸಿಗೆ ಹಿಡಿದ್ದಾನೆ. ಅನಾಥೆ ದಿಕ್ಕು ತೋಚದವಳಾಗಿದ್ದಾಳೆ. ಇದಿಷ್ಟು ಅನಾಥ ಅನಾಥೆಯರ ಹಿನ್ನೆಲೆಯಾಯ್ತು.

೪

ಆ ದಿನ ರಾತ್ರಿ ಶಂಕರನ ಹೃದಯದಲ್ಲಿ ಶಾಂತಿ ನೆಲಸಲಿಲ್ಲ. ಮಾರನೆ ಬೆಳಿಗ್ಗೆ ಎಂದಿಗಿಂತ ಒಂದು ಘಂಟೆ ಮುಂಚಿತವಾಗಿಯೇ ಆಫೀಸ್ ಕಡೆಗೆ ಹೊರಟು, ಅಂದು ಅನಾಥೆಯ ದುಃಖದ ಕಾರಣ ಕೇಳಿ ಪರಿಹಾರ ಸೂಚಿಸ

ಬೇಕೆಂದು ನಿರ್ಧರಿಸಿ ಮನೆ ಬಿಟ್ಟ.

ಕೆಲಹೊತ್ತಿನಲ್ಲಿಯೇ ಎಂದಿನ ತೋಪು ಹೊಕ್ಕ. ಅದೇ ಮಾವಿನ ಮರ. ಅದರ ಕೆಳಗಡೆಯೇ ಅನಾಥೆ ಪದ್ಮಾಸನ ಊರಿ ಕುಳಿತಿದ್ದಾಳೆ. ನಿನ್ನೆಯ ಕಾಂತಿಯೂ ಅವಳ ಮುಖದಲ್ಲಿಲ್ಲ. ಮಾಸಿ ತುಳಿದ ಹೂವಿನಂತಾಗಿತ್ತು ಅವಳ ಸುಂದರ ವದನ. ಚಿಕ್ಕ ಮಗುವೊಂದು ಅನಾಥೆಯ ಮಡಲು ಸೇರಿ ಕೊರಳ ಬಿಗಿದು ಆಕೆಯ ಕಣ್ಣೀರಿನ ಜೊತೆಯಲ್ಲಿ ತನ್ನ ಬಿಸಿ ಕಣ್ಣೀರು ಬೆರಸುತ್ತಿದ್ದಿತು.

ಶಂಕರನ ತಲೆ ಸುತ್ತಿದಂತಾಯ್ತು. ಎಂತಹ ವಿಚಿತ್ರ ವಿಶ್ವವೆನಿಸಿತು. ಅನಾಥೆಯ ಪಕ್ಕದಲ್ಲಿ ನಿಂತು "ತಾಯಿ, ಈತ ನಿನಗೇನಾಗಬೇಕು ?" ಶಂಕರ ಕೇಳಿದ.

ಉತ್ತರವಿಲ್ಲ.

"ತಾಯಿ ಈತ ನಿನಗೇನಾಗಬೇಕು ? ನಿಜಕ್ಕೂ ಹಾಸ್ಯಕ್ಕೆ ಕೇಳುತ್ತಿಲ್ಲ. ನನ್ನನ್ನು ನಂಬಿ, ದುಃಖದ ಅಳಲೇನು ತಿಳಿಸು ತಾಯಿ" ಶಂಕರ ವಿನಯದಿಂದ ಪ್ರಶ್ನಿಸಿದ.

"ಅವರು ನನ್ನ ಪತಿ. ಅದು ತಿಳಿಯುವುದರಿಂದ ನಿಮಗೇನು ಪ್ರಯೋಜನ ?"

"ಪ್ರಯೋಜನವೇನಿಲ್ಲ ತಾಯಿ. ಪರಿಹಾರವಿದ್ದರೆ ತಿಳಿಸಬಹುದಲ್ಲವೇ ? ಈಗ ಈತನಿಗೇನಾಗಿದೆ ?"

ಆಕೆಯ ಮುಖ ವಿವರ್ಣವಾಯ್ತು.... "ಅಂತ್ಯ !....ಅಂತ್ಯ !!...." ಎಂದು ಕಣ್ಣುಮುಚ್ಚಿ ತುಟಿ ಕಡುಗಚ್ಚಿದಳು.

ಶಂಕರನಿಗೆ ಅರಿವಾಯ್ತು. ಕೂಡಲೆ ಅಪ್ರತಿಭನಾದನು.

"ತಾಯಿ, ಯೋಚಿಸಿದರೆ ಫಲವೇನು ? ಆತನ ಅಂತಿಮಕ್ರಿಯೆ ನೆರವೇರಿಸು. ಅಳುತ್ತಿರುವ ಶಿಶುವನ್ನು ಸುಧಾರಿಸು. ನಿನ್ನ ಪತಿಯನ್ನು ಅಷ್ಟು ಪ್ರೀತಿಸುವೆಯಾ ?"

"ಪ್ರಾಣಕ್ಕಿನ್ನ ಹಿರಿದಾಗಿ ಪ್ರೀತಿಸುವೆನು."

"ಆ ವೃಕ್ಷದಲ್ಲಿ ಫಲಿಸಿದ ಈ 'ಹೂ' ಇನ್ನೂ ಹೆಚ್ಚು ಪ್ರಿಯ

ವಲ್ಲವೇ ? ಮಗುವಿನ ಮುಂದಿನ ಭವಿಷ್ಯ ನೋಡಿ ನೀನು ಜೀವಿಸಬೇಕು. ದುಃಖ ಶಮನಮಾಡಿಕೋ ತಾಯಿ. ಮುಂದಿನ ಮಾರ್ಗ ನೋಡು.'

"ವೃಕ್ಷವೇ ಕಳಚಿ ಬೀಳುವಾಗ ವೃಕ್ಷದಲ್ಲಿರುವ ಹೂ ನಾಶವಾಗುವುದೆಂದು ಯೋಚಿಸುವರೆ ?"

"ತಾಯಿ ನಿನ್ನ ಪ್ರೇಮ ಅಮರವಾದುದು. ಹೀಗೆ ದುಃಖದಲ್ಲಿ ಕುಳಿತರೆ ಹೇಗಾದೀತು ? ಮಗುವಿನ ಏಳಿಗೆ ನೋಡು ತಾಯಿ." ಶಂಕರ ಇಷ್ಟು ಸಂಭಾಷಿಸುವ ಹೊತ್ತಿಗೆ ಗಂಟೆ ಹನ್ನೆರಡು ಹೊಡೆದಿತ್ತು. ಕಿಸೆಯಲ್ಲಿದ್ದ ಒಂದೆರಡು ರೂಪಾಯಿಗಳನ್ನು ಅನಾಥೆಯ ಮುಂದಿಟ್ಟು ಶಂಕರ ಆಫೀಸು ಕಡೆಗೆ ಹೊರಟ. ಮನಸ್ಸಿನಲ್ಲಿದ್ದ ಈ ಯೋಚನೆಯ ಅಲ್ಲೋಲ ಕಲ್ಲೋಲಗಳು ಆ ದಿನ ಆಫೀಸಿನಲ್ಲಿ ಕೆಲಸಮಾಡಲು ಬಿಡಲಿಲ್ಲ.

೫

ಸಂಜೆ ಪಶ್ಚಿಮ ದಿಗಂತದಲ್ಲಿ ಅರುಣ ತನ್ನ ಚೆಲುವು ಬೀರಿದ್ದ. ಅನಾಥನ ಶವಸಂಸ್ಕಾರ ಮುಗಿದಿತ್ತು. ಶಂಕರನು ಅದೇ ತೋಪಿನಲ್ಲಿ ನಡೆದುಬಂದ. ಅನಾಥೆ ಮುಗಿಲಿನ ಕಡೆ ಮುಖ ನೀಡಿದ್ದಳು. ತುಂಬು ಬಸುರಿ ಮುಖದಲ್ಲಿ ಪ್ರಸವವೇದನೆ ತುಂಬಿತ್ತು. ಅವಳ ಕಷ್ಟದ ಇಂಗಿತವರಿತು ಶಂಕರ ಗಾಡಿಯೊಂದರಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಸೇರಿಸಿ ಬಂದ.

ಒಂದೆರಡು ದಿನಗಳುರುಳಿ ಅನಾಥೆಯು ಹೆರಿಗೆ ಆಗಿತ್ತು. ಮಗು ಹುಟ್ಟುವ ಮುಂಚೆಯೇ ಪ್ರಾಣ ಬಿಟ್ಟಿತ್ತು. ಅನಾಥೆಯ ಮುಖದಲ್ಲಿ ಬದುಕುವ ಚಿಹ್ನೆಯಿರಲಿಲ್ಲ. ತುಂಬ ನಿಶ್ಶಕ್ತಿ. ಜೊತೆಗೆ ಗಂಡನ ಸಾವು ನಿಶ್ಶಕ್ತಿ ಇಮ್ಮಡಿಸಿತ್ತು. ಶಂಕರ ಅನಾಥೆ ಉಳಿಯುವಳೆಂಬ ಭರವಸೆ ಬಿಟ್ಟ.

ಮತ್ತೆ ಒಂದೆರಡು ದಿನಗಳು ಕಳೆದವು. ಅನಾಥೆ ಈ ಲೋಕ ತ್ಯಜಿಸಿದಳು. ಇನ್ನು ದಿಕ್ಕಿಲ್ಲದ ಮಗುವಿದೆ. ಶಂಕರ ಮಗುವನ್ನು ಕೈಗೆ ತೆಗೆದುಕೊಂಡ. ನೋಡಲು ತುಂಬಾ ಮುದ್ದಾಗಿತ್ತು. ಚಂದ್ರನ ಪ್ರತಿಬಿಂಬ ಆ ಬಾಲಕಿಯಲ್ಲಿ ಎದ್ದು ಕಾಣುತ್ತಿತ್ತು. ಮಗುವನ್ನು ಎತ್ತಿಕೊಂಡು ಅನಾಥಾಶ್ರಮದ ಕಡೆ ಹೊರಟ. ಮಗುವನ್ನು ಅಲ್ಲಿ ಸೇರಿಸಿ ಆದರ ಉಸ್ತುವಾರಿಗೆ ತಾನೇ ನಿಂತ. ಮಗು ಆ ಸಹೃದಯನ ಸನ್ನಿಧಿಯಲ್ಲಿ ಮಾತಾ

ಪಿತೃಗಳನ್ನು ಮರೆಯಲೆತ್ನಿಸುತ್ತಿತ್ತು.

*　　*　　*　　*　　*

ಮಗು ಅನಾಥಾಶ್ರಮ ಸೇರಿ ಎಂಟು ವರ್ಷಗಳಾಗಿದೆ. ತಿಮ್ಮಿ ಎಂಬ ಹೆಸರಿನಿಂದ ಪರಿವರ್ತನೆ ಹೊಂದಿ "ಲೀಲ"ಳಾಗಿ ಈಗ ಜವ್ವನೆ ಲೀಲ ಳಾಗಿದ್ದಾಳೆ. ಕೋಗಿಲೆಯ ಕಂಠವನ್ನು ಕಿತ್ತು ತಂದಿರುವಂತೆ ಹಾಡು ಹಾಡುತ್ತಾಳೆ. ಆ ಕಲಕಂಠಿಯ ಸಂಗೀತ ಚಲನಚಿತ್ರದ ಸೊಬಗನ್ನು ಮೀರಿಸುತ್ತದೆ. ಲೀಲ ಇಷ್ಟಪಟ್ಟರೆ ಒಬ್ಬ ಚಲನಚಿತ್ರ ತಾರೆಯಾಗಿ ಮೆರೆಯಬಹುದು. ಅವಳ ಭವಿಷ್ಯ ಬಲ್ಲವರಾರು ? ಸ್ಪರ್ಶಮಣಿಯ ಸ್ಪರ್ಶ ದಿಂದ ಕಬ್ಬಿಣವೂ ಚಿನ್ನವಾಗುವುದಂತೆ. ಅಂತೆಯೇ ಶಂಕರನ ಸಹವಾಸ ದಿಂದ 'ಲೀಲ' ಮನುಷ್ಯವರ್ಗದವಳಾದಳು. ಲೀಲಳ ಹಿತಕ್ಕೋಸ್ಕರ ಶಂಕರ ಏನು ಬೇಕಾದರೂ ಮಾಡಲು ಸಿದ್ಧನಾಗಿದ್ದಾನೆ. ಶಂಕರ-ಲೀಲಳಲ್ಲಿ ತಂದೆ ಮಗಳ ಅಮರ ಪ್ರೇಮ ಮೂಡಿದೆ.

ನಿಜಾಂಶವನ್ನರಿಯದ ನಮ್ಮೂರಿನ ಹತ್ತು ಸಮಸ್ತರು ಶಂಕರನಿಗೂ, ಅನಾಥಾಶ್ರಮಕ್ಕೂ, ಲೀಲಳಿಗೂ ಇರುವ ಸಂಬಂಧ ನೋಡಿ ವಿಪರೀತ ಅರ್ಥ ಕಲ್ಪಿಸಿದ್ದಾರೆ. ಆದರೆ ನಿಜಾಂಶದ ಒಳಗುಟ್ಟು ಬೇರೆಯಿದೆ. 'ಲೋಕೋಭಿನ್ನರುಚಿಃ'.



# ಒಡೆದ ಕನ್ನಡಿ

೧

ಅಂದು ರಾತ್ರಿಯ ಊಟದಲ್ಲಿ ಚಂದ್ರು ಅನ್ಯಮನಸ್ಕನಾಗಿಯೇ ಇದ್ದ. ಚಂದ್ರು ಅಂದು ಊಟದಲ್ಲಿ ತೋರುತ್ತಿರುವ ಅನಾಸಕ್ತಿಯನ್ನು ಕಂಡು ವಿಶಾಲ ಯೋಚನೆಗೀಡಾದಳು. ಪ್ರತಿನಿತ್ಯ ವಿಶಾಲ ಮಾಡಿದ ಅಡಿಗೆಯ ವಿಷಯದಲ್ಲಿ ಕೊಂಕು ನುಡಿದು ವಿರಸ ಮೂಡಿಸಿ ಸರಸವಾಡುತ್ತಿದ್ದ ಚಂದ್ರು ಇಂದು ಮೌನ ತಾಳಿರುವುದನ್ನು ಕಂಡು

"ಸ್ವಲ್ಪ ಹುಳಿ ಹಾಕ್ಲೇನ್ರೀ....?"

"ಹ್ಞಾಂ....ಬೇಡಾ—ಸ್ವಲ್ಪ ಹಾಕು"

"..........."

"ಲೇ,....ಅನ್ನ ಹಾಕು ಅಂದ್ರೆ....ಹುಳಿ ಬಡಿಸಿದೆಲ್ಲೇ ?"

"ಏನ್ರೀ, ನೀವು ಈ ದಿನ ಹೀಗೆ.... ಹುಳಿ ಹಾಕ್ಲೆ ಅಂದಿದ್ದಕ್ಕೆ.... ಬೇಡ ಅಂದು....ಆಮೇಲೆ ಸ್ವಲ್ಪ ಹಾಕು ಅಂದ್ರಿ....ಈಗ ನೋಡಿದರೆ ಅನ್ನ ಹಾಕು ಅಂದೆ ಅಂತೀರಾ...ಯಾವಾಗ್ಲೂ ಇಷ್ಟು ಯೋಚ್ನೆ ಮಾಡ್ತಇದ್ರೆ ಆಯ್ತು....ನಮ್ಮಪ್ಪ ಹೇಳ್ತಿದ್ದುದು ನಿಜ....ಯಾರನ್ನ ಮದುವೆಯಾದ್ರೂ ಈ ಅಕೌಂಟೆಂಟ್ಸ್.... ಆಡಿಟರ್ಸ್.... ಮ್ಯಾಥಮ್ಯಾಟಿಕ್ಸ್ ಟೀಚರ್ಸ್‌ನ ಮಾತ್ರ ಕೈಹಿಡಿಬೇಡಮ್ಮ ಅಂತಿದ್ರು....".

"ಯಾಕಂತೆ ?" ಚಂದ್ರು ತಟ್ಟೆಯಲ್ಲಿದ್ದ ಅನ್ನ ಕಲಸುತ್ತಾ ಮುಗುಳ್ನಗೆಯಿಂದ ಪ್ರಶ್ನಿಸಿದ.

"ಯಾಕೆ.... ಈ ಅಕೌಂಟೆಂಟ್ಸ್.... ಆಡಿಟರ್ಸ್ ಸಂಕಲನ ಮಾಡುವಾಗ ....ತಾವು ಅಂಕೆಗಳನ್ನ ಕೂಡ್ತಾ ಇದ್ದೀವಿ ಅನ್ನೋದು ಮರೆತು ಮೂರು ಎರಡು ಆರು.... ಅಂತಾ ಗುಣಿಸ್ತಾ ಇರ್ತಾರಂತೆ.... ಹೀಗೆ ಮಾಡ್ತಾ ಇದ್ರೆ ಅವರಿಗೆ ಕರೆಕ್ಟ್ ಅಂಕೆ ಎಲ್ಲಿ ಬರ್ಬೇಕು.... ಇನ್ನು ಈ ಲೆಖ್ಖದ ಮೇಸ್ಟ್ರೋ ಅಲ್ಫಾ.... ತೀಟಾ.... ಗಾಮಾ ಅಂತಾ ನಿದ್ದೆಗಣ್ಣಲ್ಲೂ ಹೇಳ್ತಾ ಇರ್ತಾರಂತೆ ....ಇಂಥವರಿಗೆ ಮನೆ ಮಡದಿ ಮೇಲೆ ಎಷ್ಟು ನಿಗಾ ಇರ್ತದೆ ಅಂತಾ ಅಪರ್ಹೇಳ್ತಾ ಇದ್ದುದು."

"ಅದು ಸರಿ !.... ಈಗ ಆಡಿಟರ್ನೇ ಮದುವೆಯಾಗಿಬಿಟ್ಟಿದ್ದೀಯಲ್ಲಾ"

"ನಮ್ಮ ತಂದೆ ಬದುಕಿದ್ರೆ.... ನಿಮಗ್ಕೈಗಿಡುತ್ತಿದ್ರಾ ?"

"ಇಲ್ಲ ಇಲ್ಲಾ.... ಯಾವುದಾದ್ರು ಕಮಂಗಿನ ಹಿಡ್ದು.... ಅವನ್ನಿಂದೆ ಅಟ್ತಾ ಇದ್ರು.... ಹೋಗ್ಲಿ.... ಯಾವ ಅಕೌಂಟ್ಸನ್ನು ಕೂಡ್ತಾ ಇರಲಿಲ್ಲ.... ಸರೋಜ ಕಾಗದ ಬರೆದಿದ್ಲು ಯೋಚಿಸುತ್ತಿದ್ದೆ ಅಷ್ಟೇ ?"

"ಏನು ಬರೆದಿದ್ದಾಳೆ....?"

"ಅವಳಿಗೆ ಗಂಡನ ಮನೆ ಬೇಸರವಾಗಿದೆಯಂತೆ. ಊರಿಗೆ ನಾಲ್ಕು ದಿನ ಬರ್ಬೇಕು ಅಂತಿದ್ದೀನಿ.... ಈಗ ಐದು ತಿಂಗಳು ತುಂಬಿದೆ.... ಆಮೇಲೆ ಏಳನೇ ತಿಂಗಳಲ್ಲಿ ದಿನ ಚೆನ್ನಾಗಿಲ್ಲದ ಪ್ರಯುಕ್ತ ಕಳುಹಿಸುವುದಿಲ್ಲವಂತೆ.... ಈಗ ತಪ್ಪಿದರೆ ಒಂದೇಸಾರಿ ಹೆರಿಗೆಗೆ ಕಳುಹಿಸುತ್ತಾರಂತೆ.... ನಾನು ಈಗ್ಲೆ ಬರ್ತೀನಿ ಕರ್ಕೊಂಡ್ಹೋಗು ಅಂತ ಬರೆದಿದ್ದಾಳೆ... ಈಗ ಕರೆತರೋಣವೋ ....ಒಂದೇಬಾರಿ ಹೆರಿಗೆಗೆ ಕರೆತರೋಣ್ವೋ ಅಂತ ಯೋಚಿಸ್ತಿದ್ದೆ...."

"ಅಷ್ಟೇನೇ....?" "ಈಗ್ಲೆ ಕರ್ಕೊಂಬನ್ನಿ, ಹೇಗೂ ಐದು ತಿಂಗಳು ತುಂಬಿತು ಅಂತೀರಿ"

"ಸರಿಕಣೇ.... ಸರೋಜ ಶ್ರೀಮಂತ ಮನೆ ಸೇರಿದ ಹೆಣ್ಣು.... ಅವಳ ಜೊತೇಲಿ ಅವಳೆರಡು ಮಕ್ಕಳು ಬರುತ್ವೆ.... ಮನೇಲಿ ಖರ್ಚು ಎಷ್ಟಾಗುತ್ತೆ ಯೋಚಿಸಿದೆಯಾ ?........ ಮೊನ್ನೆ ರೇಡಿಯೋ ಬೇರೆ ಕಂತಿನ ಪ್ರಕಾರ ತಂದಿರೋದಾಗಿದೆ.... ಇದೇ ಸಮಯದಲ್ಲಿ ನಿನಗೂ ಇನ್ಷೂರೆನ್ಸ್ ಮಾಡಿ ಸಿದ್ದೀನಿ.... ಇವಕ್ಕೆಲ್ಲಾ ದುಡ್ಡು ಕಟ್ಟಿ ನನ್ನಲ್ಲಿ ಉಳಿಯುವ ಹಣವಾದರೂ

ಎಷ್ಟು ಗೊತ್ತೆ ?"

"ಅದು ಸರೀನ್ರಿ....ಸರೋಜನ್ನ ಈಗಲ್ಲದಿದ್ದರೂ ಹೆರಿಗೆಗೆ ಕರತರ್ಲೇಬೇಕೂಂತೀರಾ....ಹೆರಿಗೆಯಾಗಿ ಮೂರುತಿಂಗಳು ಬಾಣಂತನ ಮಾಡೋದು ಹೇಗಿದೆ ?....ಈಗ್ಲೆ ಕರೆತಂದು ಒಂದು ಹದಿನೈದು ದಿನ ಇಟ್ಕೊಂಡು ನಮ್ಮ ಮನೇಲಿರೋದನ್ನ ಇಟ್ಟು ಕಳಿಸೋದು ಹೇಗಿದೆ ?....ಸ್ವಲ್ಪ ಸಾಲವಾಗುತ್ತೆ ಏನ್ಮಾಡೋದು !"

"ನಿನ್ನ ಮಾತು ನಿಜ ಅನ್ನು....ಈಗಲ್ಲದಿದ್ದರೂ ಹೆರಿಗೆಗಂತೂ ಇಲ್ಲಿಗೆ ಕರೆತರ್ಲೇಬೇಕು....ಅಮ್ಮಾ ಸತ್ತ ಮೇಲೆ ಸರೋಜ ತವರು ಮನೆಗೇ ಬಂದಿಲ್ಲ....ಅಲ್ಲದೆ ಮೊದಲನೆ ಎರಡು ಹೆರಿಗೇನ ಅವರೇ ಮಾಡಿದ್ದಾರೆ ....ನ್ಯಾಯವಾಗಿ ನೋಡಿದರ ಈ ಮೂರನೇ ಹೆರಿಗೆ ನಾವೇ ಮಾಡ್ಬೇಕು.... ಸರಿ, ನಾಳೆ ಕಾಗ್ದ ಬರೀತೀನಿ ಈ ಭಾನುವಾರ ಬರ್ತೀನಿ ಕಳುಹಿಸಿಕೊಡಿ ಅಂತಾ."

"ಸರಿ,....ಸರೋಜಳ ಜೊತೇಲಿ ಬರೋ ಆ ಎರಡು ಮಕ್ಕಳನ್ನ ಸುಧಾರಿಸುವಾಗ ಇರೋದು....ಅಬ್ಬ ! ಆ ಉಮೇಶ ಏನು ಘಟಿಂಗ ಅಂತೀರಿ....ನಮ್ಮ ಮದುವೇಲಿ ನೋಡಿದೆನಲ್ಲ ಅವನ ಗಲಾಟೇನ.... ಅವನನ್ನ ಸುಧಾರಿಸೋದೆ ಇರೋದು...."

"ತಾಯಿ ಇದ್ದಕಡೆ ಮಕ್ಕಳು........ಸಾಮಾನ್ಯವಾಗಿ ಮಕ್ಕಳೇ ಘಟಿಂಗರು....ಘಟಿಂಗರು ಅಂತಾ ಮಕ್ಕಳೇ ಬೇಡ ಅನ್ನಲಿಕ್ಕೆ ಸಾಧ್ಯವೇ ? ....ನೋಡೋಣ, ನೀನು ಇನ್ನೆಂಥ ಮಾರ್ಜಾಲ ಮುನಿಗಳನ್ನು ಹೆರ್‍ತಿಯೋ ?"

"ನಾನೇ?....ನೋಡಿವಿರಂತೆ....ಅವಕ್ಕೆ ಏನ್ಬುದ್ಧಿ ಕಲಿಸ್ತಿನೀಂತಾ..."

"ಹೊಂ....ಸರಿ....ಒಂದೇ ಕನಸಿನಲ್ಲಿ ಬೆಳಕು ಹರಿಯಲಿಲ್ಲ....ನಾನೂ ನೋಡ್ತೀನೆ....ನನಗೆ ಗೊತ್ತಿಲ್ಲದೆ ನೀನು ಮಕ್ಕಳನ್ನ ಹಡೆಯೋದಿಲ್ಲವಲ್ಲಾ ....ಈಗ ಬೇಗ ಊಟ ಮಾಡೇಳು....ನಿದ್ದೆ ಬರ್ತಾ ಇದೆ ಮಲಗ್ಬೇಕು...."

"ಹಾಗಾದರೆ ನಾಳೆ ಕಾಗದ ಬರೀತೀರಾ...."

"ಹ್ಞೂಂ....ತಡ ಏಕೆ ?....ನಾಳೆ ಬರ್‍ದು ಭಾನುವಾರ ಕರೆತರ್‍ತೀನೆ"

ಚಂದ್ರು ಊಟ ಮುಗಿಸಿ ಕೈ ತೊಳೆದುಕೊಂಡು ಮೇಲೆದ್ದ.

"ರ್‍ರೀ....ಹಾಗೆ ಸ್ವಲ್ಪ ಹಾಲಿನ ಪಾತ್ರೆ ಈ ಕಡೆ ಕೊಟ್ಟುಬಿಟ್ಟು ಹೋಗ್ರೀ....ಮಲಗಲಿಕ್ಕೆ"

ಚಂದ್ರು ರೂಂ ಸೇರಿದ. ಹೊಸ ಸಂಸಾರ ಹೂಡಿ ಇನ್ನು ನಾಲ್ಕೇ ತಿಂಗಳಾಗಿದ್ದ ಚಂದ್ರು ತಂಗಿಯನ್ನು ಕರೆತರಲು ಹೆಂಡತಿ ಏನನ್ನುವಳೋ ಎಂದು ಸೂಕ್ಷ್ಮವಾಗಿ ಅವಳ ಮನಸ್ಸಿನ ಮರ್ಜಿ ತಿಳಿಯಲು ಯತ್ನಿಸಿದ. ಹೆಂಡತಿ ನಾದಿನಿಯ ಸ್ವಾಗತಕ್ಕೆ ನಕಾರ ಸೂಚಿಸದೆ ಬೆಂಬಲ ನೀಡಿದ್ದನ್ನು ನೋಡಿ ಚಂದ್ರು ಆನಂದ ತುಂದಿಲನಾದ....ಸ್ವಲ್ಪ ಹೊತ್ತಿನಲ್ಲಿ ವಿಶಾಲ ಕೂಡ ಮನೆಗೆಲಸ ಪೂರೈಸಿ ಬಂದು ಚಂದ್ರುವನ್ನು ಕೂಡಿಕೊಂಡಳು.... ಹೊರಗಡೆ ತಂಗಾಳಿ ಸುಯ್ಯೆನ್ನುತ್ತಿತ್ತು....ಬೇಸಿಗೆಯಾದ್ದರಿಂದ ಗಾಳಿ ಬರಲೆಂದು ತೆರೆದಿದ್ದ ಕಿಟಕಿಯಿಂದ ಪೂರ್ಣಿಮೆಯ ಚಂದ್ರನ ಕಿರಣಗಳು ತೂರಿ ಬಂದು ಅವರ ಪ್ರಣಯ ಚೇಷ್ಟೆಗಳಿಗೆ ಆತಂಕವೊಡ್ಡುತ್ತಿದ್ದವು....ಚಂದ್ರು ಕಿಟಕಿಯ ಕದವನ್ನಿಕ್ಕಿದನು....ಆಕಾಶದಲ್ಲೂ ಚಂದ್ರನಿಗೆ ಅಡ್ಡಲಾಗಿ ಮೋಡವೊಂದು ಬಂದಿತು.

೨

ಚಂದ್ರು ಭಾನುವಾರ ಸಂಜೆಯೇ ಸರೋಜ ಮತ್ತು ಆಕೆಯ ಎರಡು ಮಕ್ಕಳನ್ನು ಕರೆತಂದನು. ಸರೋಜ ಅಣ್ಣನ ಸುಂದರ ಗೃಹ ನೋಡಿ ಆಶ್ಚರ್ಯಭರಿತಳಾದಳು. ಮನೆ ಚೊಕ್ಕಟವಾಗಿದ್ದು, ಶಾಂತವಾಗಿದ್ದು ತುಂಬಿದ ಸರೋವರದಂತೆ ಕಾಣುತ್ತಿದ್ದ ಅಣ್ಣನ ಗೃಹ ನೋಡಿ ಸಂತೋಷ ಗೊಂಡಳು. ಅತ್ತಿಗೆ ಶಿಕ್ಷಿತೆ-ಜಾಣೆ ಅವಳಿಂದಲೇ ಇದೊಂದು ಆದರ್ಶ ಗೃಹವಾಗಿರುವುದೆಂದು ತಿಳಿದು ಅತ್ತಿಗೆಯ ಬಗ್ಗೆ ವಾತ್ಸಲ್ಯ ತುಂಬಿಕೊಂಡಳು. ತಾಯಿ ತೀರಿಕೊಂಡ ಮೇಲೆ ಅಣ್ಣ ನೆಲೆಯೂಗಿ ನಿಂತು, ತನ್ನದು ಅನ್ನುವ ಒಂದು ಮನೆ ಮಾಡಿಕೊಂಡುದು ಇದೇ ಮೊದಲು. ಸರೋಜ ತಾಯಿ ಸತ್ತ ಮೂರು ವರುಷಗಳಿಗೆ ಇದೇ ಮೊದಲು ತವರುಮನೆ-ಅಣ್ಣನ ಮನೆಯೆಂದು ಬರುತ್ತಿರುವುದು.

ಚಂದ್ರು ಹಿಡಿದ ಮನೆ ಚಿಕ್ಕದಾದರೂ ಚೊಕ್ಕಟವಾಗಿ, ಅಚ್ಚು

ಕಟ್ಟಾಗಿತ್ತು. ಶ್ರೀಮಂತರ ಆಡಂಬರವಿಲ್ಲದಿದ್ದರೂ ಮಧ್ಯಮವರ್ಗದವರಿಗೆ ಬೇಕಾಗುವುದೆಲ್ಲ ಮನೆಯಲ್ಲಿತ್ತು. ಮನೆಗೆ ಹೊಂದಿಕೊಂಡಿದ್ದ ಕಾಂಪೌಂಡಿನಲ್ಲಿ ನಾಲ್ಕಾರು ಹೂವಿನಗಿಡ-ರೋಜಾ ಗಿಡಗಳನ್ನು ಬೆಳೆಸಿದ್ದಳು ವಿಶಾಲ. ಮನೆಯ ಒಳಗಡೆಯೂ ಅಷ್ಟೇ. ಹಾಲಿನಲ್ಲಿ ಮೇಜು ಕುರ್ಚಿಗಳು. ಮೂಲೆಯೊಂದರಲ್ಲಿ ಚಿಕ್ಕ ರೇಡಿಯೋ. ಗೋಡೆಯಲ್ಲಿ ನಾಲ್ಕಾರು ಸುಂದರ ಫೋಟೋಗಳು ಮಲಗುವ ಕೋಣೆಯಲ್ಲಿ ಮಂಚ....ಹಾಸಿಗೆ....ಅಡಿಗೆಮನೆ ....ಬಚ್ಚಲುಮನೆ ಎಲ್ಲವನ್ನು ಚೊಕ್ಕಟವಾಗಿಟ್ಟುಕೊಂಡಿದ್ದಳು. ಮನೆಯಲ್ಲಿ ಸಾಮಾನುಗಳು ಇರುವುದೇ ಕಾಣುತ್ತಿರಲಿಲ್ಲ ಆದರೂ ಸಮಯದಲ್ಲಿ ಎಲ್ಲ ಸಾಮಾನುಗಳು ದೊರಕುತ್ತಿದ್ದವು. ಸರೋಜಳಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ. ವಿಶಾಲ ಕಾಲೇಜು ಹತ್ತಿದವಳು. ಬರೀ ಪುಸ್ತಕಗಳ ಜೊತೆಯಲ್ಲಿ ಓಡಾಡಿದವಳು. ಸುಲಲಿತ ಸಂಸಾರ ಸಾಗಿಸಲಾರಳು ಎಂದು ತಿಳಿದಿದ್ದಳು. ಆದರೆ ವಿಶಾಲಳ ಅಡಿಗೆ-ಹುಳಿ ಮುಂತಾದುವುಗಳ ಅಂದ ನೋಡಿ ಅಣ್ಣ ದೀರ್ಘಕಾಲ ಮದುವೆಯಾಗದೆ ಇದ್ದರೂ ಒಳ್ಳೆಯ ಸುಶಿಕ್ಷಿತ-ನಯ-ನಾಜೋಕು ಅರಿತ ಹೆಣ್ಣನ್ನು ಪಡೆದದ್ದಕ್ಕೆ ಸರೋಜ ಮನದಲ್ಲೇ ಸಂತೋಷಗೊಂಡಳು.

ಆ ರಾತ್ರಿ ಎಲ್ಲರೂ ಜೊತೆಗೂಡಿ ಊಟ ಮುಗಿಸಿದರು. ಚಂದ್ರುವಿಗೆ ಪಕ್ಷಿಗಳಂತಿದ್ದ ತಂಗಿಯ ಎರಡು ಮಕ್ಕಳನ್ನು ಕಂಡು ಮನಸ್ಸಿಗೊಂದು ನೆಮ್ಮದಿ-ಆಹ್ಲಾದ ಬಂದಿತ್ತು. ಯಾವಾಗಲೂ ಶಾಂತವಾಗಿದ್ದ ಮನೆ ಈಗ ಮಕ್ಕಳ ಮನೆಯಾಗಿ ಗಲಿಬಿಲಿಯಿಂದ ಕೂಡಿರುವುದು ಮನಸ್ಸಿಗೊಂದು ಹಿತತಂದಿತ್ತು.

೩

ಉಮೇಶ-ವನಜ ಸರೋಜಳ ಎರಡು ಕಣ್ಣುಗಳು. ಎರಡೂ ಮುದ್ದಾದ ಮಕ್ಕಳು. ವನಜ ಹೆಣ್ಣು ಮಗು ಸ್ವಾಭಾವಿಕವಾಗಿ ಅವಳ ವೆಲ್ಲಾ ಮಾರ್ದವ ಗುಣಗಳು. ಉಮೇಶ ಎಷ್ಟು ಸಂದರನೋ ಅಷ್ಟೇ ತುಂಟ. ಅವನನ್ನೊಮ್ಮೆ ನೋಡಿದರೆ ಹಿಡಿದು ಮುತ್ತಿಡಬೇಕೆನ್ನಿಸದೆ ಇರದು. ಹಾಗೆ ಸಲಿಗೆ ಕೊಟ್ಟರೆ ಅವನ ತುಂಟತನ ತಡೆಯಲೂ ಸಿದ್ಧ

ರಿರಬೇಕು. ಮಕ್ಕಳೇ ಅಷ್ಟು ನಮ್ಮ ಮುದ್ದು ಅವರ ಮೊಂಡುತನಕ್ಕೆ ಹಾದಿ.

ವಿಶಾಲಳಿಗೆ ಮಕ್ಕಳ ತುಂಟತನ-ರಚ್ಚೆ ಹಿಡಿದು ಅಳುವುದು ಎಂದರೆ ಆಗದು. ಅವಳು ಯಾವಾಗಲೂ ಗಂಭೀರ-ಶಾಂತ ವಾತಾವರಣದಲ್ಲಿ ಬೆಳೆದವಳು. ಮಕ್ಕಳೆಂದರೆ ಹೊಟ್ಟೆ ತುಂಬ ತಿಂದು-ತೇಗಿ ಆಟವಾಡುತ್ತಿರಬೇಕು ಎಂದೆ ಅವಳ ಭಾವನೆ. ಅಂಥ ಸುಂದರವಾದ ಮಕ್ಕಳನ್ನು ನಾಲ್ಕು ನಿಮಿಷ ಕಂಕುಳಲ್ಲಿಟ್ಟುಕೊಂಡು ಮುತ್ತಿನ ಮಳೆಗೆರೆದು ಮೆರೆಸಿ ಬಿಡುತ್ತಿದ್ದಳು. ಕೊಳಕು ಮಕ್ಕಳು; ತಂಟೆಮಾಡುವ ಮಕ್ಕಳು ಎಂದರೆ ಅವುಗಳ ನೆರಳೂ ಸಹಿಸಳು.

ಆದರೆ ಉಮೇಶ-ವನಜ ಹಾಗಲ್ಲ. ಸಿರಿವಂತರ ಮನೆಯಲ್ಲಿ ಸ್ವಚ್ಛಂದವಾಗಿ ಬೆಳೆದ ಮಕ್ಕಳು ಅವು. ತಮಗೆ ತೋರಿದ್ದು ಮಾಡಬೇಕು, ಬಯಸಿದ್ದು ತಿನ್ನಬೇಕು. ಯಾರ ಗದರಿಕೆ-ಬೆದರಿಕೆ ಅಡ್ಡಿ-ಆತಂಕಗಳಿಗೆ ಸಗ್ಗದ ಮಕ್ಕಳು. ವನಜ ಹೆಣ್ಣು ಹುಡುಗಿ ತಾನು ಬಯಸಿದ ಹಣ್ಣೋ-ತಿಂಡಿಯೋ ಸರಿಯಾದ ಪ್ರಮಾಣದಲ್ಲಿ ದೊರಕದೆ ಹೋದರೆ ತಾಸರ್ಧ ತಾಸು ರಚ್ಚೆ ಹಿಡಿದು ಅಳತೊಡಗುವಳು. ಹೀಗೆ ಒಂದಲ್ಲೊಂದು ಬಗೆಯಲ್ಲಿ ಅವಳ ಅಳು ದಿನವಿಡೀ ಇದ್ದೇ ಇರುತ್ತಿತ್ತು.

ಉಮೇಶ ಹಾಗಲ್ಲ. ಗಂಡು ಮಗ. ಮಾತಿಗೆ ಸಗ್ಗದ ಕೆಲಸ ಕಾರ್ಯಗಳನ್ನು ಶಕ್ತಿಯಿಂದ ಸಾಧಿಸುತ್ತೇನೆಂದು ಹೊರಡುವ ಶೂರತ್ವ ಅವನದು. ಅವನು ಮಾಡುವ ಕೆಲಸಗಳಿಗೆ ಯಾರೂ ಅಡ್ಡಿಪಡಿಸಬಾರದು, ಸ್ವತಂತ್ರ ಜೀವಿಯಾಗಿ ತಾನೊಬ್ಬನೇ ಕಷ್ಟಸಾಧ್ಯ ಕೆಲಸಗಳನ್ನು ಮಾಡಬೇಕು. ಹಿಡಿದ ಕೆಲಸ ಕೈಲಾಗದೆ ಅದರಿಂದ ನೋವುಂಟಾದರೆ ತಾನೊಬ್ಬನೇ ಕುಳಿತು ಅಳಬೇಕು.

ನಾಲ್ಕು ದಿನದಲ್ಲೇ ವಿಶಾಲಳಿಗೆ ಈ ಎರಡು ಮಕ್ಕಳನ್ನು ಸುಧಾರಿಸುವುದು ಸಾಕು ಬೇಕಾಗಿಹೋಯಿತು. ವನಜಳಿಗೆ ಅಹರ್ನಿಶಿ ಅಳುವುದೇ ಬದುಕು. ಆದರಲ್ಲೂ ರೋಜಾ ಹೂವುಗಳನ್ನು ಕಿತ್ತರಂತೂ ತನ್ನ ಕರುಳೇ ಕೀಳುತ್ತಿರುವಂತಾಗುತ್ತಿತ್ತು ವಿಶಾಲಳಿಗೆ. ಪೆನಿಸಿಲ್ಲೋ-ಸೀಮೆಸುಣ್ಣವೋ

ಪೊರಕೆತರಕೆ ಮನೆಯ ಗೋಡೆಯ ಮೇಲೆಲ್ಲಾ ಗೀಚಿಕೊಂಡು ಬರುವುದು. ತಂತಿ ಮೊಳೆಗಳು ಸಿಕ್ಕಿದರೆ ಕಲ್ಲಿನಿಂದ ಹೊಡೆದು ಗೋಡೆಯನ್ನು ತೂತು ಮಾಡುವುದು. ಮೇಜು ಕುರ್ಚಿಗಳ ಮೇಲೆ ಹತ್ತಿ ಕಸರತ್ತು ಮಾಡುವುದು. ಬಾಗಿಲು-ಕಿಟಕಿಗಳ ಕದಗಳನ್ನು ಹಿಂದಕ್ಕೂ ಮುಂದಕ್ಕೂ ಆಡಿಸಿ ....ರಫ್....ರಫ್....ಎಂದು ಶಬ್ದ ಮಾಡುವುದು....ಇಂತವೇ ದಿನನಿತ್ಯ ನೂರೆಂಟು ಕಾರುಗಾರಿಗಳು ಉಮೇಶನವು. ವಿಶಾಲ ಉಮೇಶನ ಕಸುಬನ್ನು ಕಂಡರೂ ತುಟಿ ಎರಡು ಮಾಡದೆ "ಸರೋಜ ಏನೆಂದುಕೊಳ್ಳುವಳೋ" ಎಂದು ಮೌನ ತಾಳುತ್ತಿದ್ದಳು.

ವಿಶಾಲ ತಾನು ಸುವ್ಯವಸ್ಥಿತವಾಗಿಟ್ಟ ಸಾಮಾನುಗಳು ಚೆಲ್ಲಾಪಿಲ್ಲಿ ಆದಾಗಲಂತೂ ಸಿಡಿಮಿಡಿಗೊಂಡು ಬಿಡುತ್ತಿದ್ದಳು. ಅವಳ ಒಂದು ಕಣ್ಣು ಮನೆಗೆಲಸಗಳಲ್ಲಿದ್ದರೆ ಮತ್ತೊಂದು ಹದ್ದಿನ ಕಣ್ಣಿನಂತೆ ಉಮೇಶನ ಕಾರ್ಯರಂಗಗಳನ್ನು ಪರೀಕ್ಷಿಸುತ್ತಿತ್ತು. ನಾಲ್ಕೇ ದಿನಗಳಲ್ಲಿ ಮಕ್ಕಳು ಅಂದರೆ ಸಾಕ್ಷಾತ್ ಚಂಡಿಗಳ ಅವತಾರವೇ ಇವು ಎಂದು ತಿಳಿದುಬಿಟ್ಟಳು.

ವಿಶಾಲ ಮಕ್ಕಳ ಕಾರುಬಾರುಗಳನ್ನು ಎಷ್ಟು ಅದ್ಭುತ ಎಂದು ತಿಳಿದಿದ್ದಳೋ ಸರೋಜ ಅವುಗಳನ್ನು ಅಷ್ಟೂ ಸೌಮ್ಯಭಾವದಿಂದ ನೋಡುತ್ತಿದ್ದಳು. ಅವಳಿಗೆ ಮಕ್ಕಳು ಎಲ್ಲೋ, ಹೇಗೋ ಗದ್ದಲವಿಲ್ಲದೆ ಆಡಿಕೊಂಡಿದ್ದರೆ ಸಾಕೆನ್ನುತ್ತಿದ್ದಳು. ಎಳೆ ಪ್ರಾಯದಲ್ಲೇ ಮಕ್ಕಳು ಹಡೆದು ನಿಶ್ಶಕ್ತಳಾದ ಸರೋಜ ಈಗ ಮೂರನೇ ಜೀವನವನ್ನು ಹೊತ್ತಿರುವುದೇ ಅವಳಿಗೆ ಭಾರವಾಗಿತ್ತು. ಅದರಿಂದಲೇ ಮಕ್ಕಳ ವಿಚಾರದಲ್ಲಿ ಹೆಚ್ಚು ಆದರಣೆ-ಅನಾದರಣೆಗಳಿಲ್ಲದೆ ಇದ್ದು ಬಿಡುತ್ತಿದ್ದಳು ವಿಶಾಲಳಿಗೆ ಸರೋಜಳನ್ನು ಕಂಡರೆ ಈ ಒಂದು ವಿಷಯದಲ್ಲಿ ಕೋಪ. ಮಕ್ಕಳು ಏನೇ ಮಾಡಿದರೂ ಸುಮ್ಮನಿರುತ್ತಾಳಲ್ಲ. ಸ್ವಲ್ಪ ಗದರಿಸಿ ಬುದ್ಧಿ ಹೇಳಬಾರದೇ ....ತಾನಾಗಿ ಮಕ್ಕಳ ಕೊಲೆಗೈಯ್ಯುತ್ತಿದ್ದಾಳಲ್ಲ ಎಂದು ವಿಶಾಲಳ ಚಿಂತೆ.

ವಿಶಾಲಳಿಗೆ ಮಕ್ಕಳ ಬಯಕೆ ಇಲ್ಲವೆಂದಲ್ಲ. ಇತ್ತು. ಆದರೆ ಅವುಗಳಿಂದೊದಗುವ ತೊಂದರೆ....ಅವುಗಳ ತುಂಟತನ....ಮೊಂಡುತನ ಒಂದೂ ಅವಳ ಅರಿತ ಬುದ್ಧಿಗೆ ಬಂದಿರಲಿಲ್ಲ....ಮಕ್ಕಳೆಷ್ಟು ಮುದ್ದೋ

ಅಷ್ಟೋ ಕೊಳಕು ಎಂಬ ಅನುಭವ ಸಾಲದ ವಿಶಾಲಳಿಗೆ ನಾದಿನಿಯ ಮಕ್ಕಳು ಮಾನವ ಸಂತತಿಯೇ ಅನ್ನುವಂತಾದಳು.

ಚಂದ್ರುವಿಗೆ ಇವೊಂದೂ ತಿಳಿಯದು. ಕಛೇರಿಯಿಂದ ಸಂಜೆ ಬಂದಾಗ್ಗೆ ಮಕ್ಕಳ ಜೊತೆಯಲ್ಲಿ ಆಡಿ ನಲಿಯುತ್ತಿದ್ದನು. ಅವುಗಳೂ ಅಷ್ಟೇ....ಮಾಮಿ....ಮಾಮಿ....ಎನ್ನುತ್ತ ಬೆನ್ನುಮೇಲೆ ಏರಿ ಭುಜ ಹತ್ತಿ ಕುಳಿತುಬಿಡುತ್ತಿದ್ದವು....ಮಕ್ಕಳ ಚರ್ಚೆ ಅವನಿಗೆ ಹಿತ ತರುತ್ತಿದ್ದವೇ ಏನಾ ಕೋಪಕ್ಕೆಡೆಕೊಡುತ್ತಿರಲಿಲ್ಲ.

೪

ಒಂದು ದಿನ ಸಂಜೆ ಚಂದ್ರು ಕಛೇರಿಯಿಂದ ನೇರ ಮನೆಗೆ ಬಂದನು. ಹಾಲಿನಲ್ಲಿ ವಿಶಾಲ ಗೋಡೆಗೊರಗಿ ಕುಳಿತಿರುವುದನ್ನು ಕಂಡು ಕಾಲಲ್ಲಿನ ಷೂಸ್ ಕಳಚುತ್ತಾ ಸರೋಜ ಮತ್ತು ಆಕೆಯ ಮಕ್ಕಳನ್ನೂ ಕಾಣದೆ.

"ಸರೋಜ....ಮಕ್ಕಳು ಎಲ್ಲಿ" ವಿಶಾಲಳನ್ನು ಪ್ರಶ್ನಿಸಿದ.

"ಎದುರು ಮನೆಯ ಕಮಲಾಬಾಯಿ ಅರಿಸಿನ-ಕುಂಕುಮಕ್ಕೆ ಹೇಳಿ ಹೋಗಿದ್ದರು....ಮಕ್ಕಳ ಜೊತೆಯಲ್ಲಿ ಹೋಗಿದ್ದಾಳೆ."

"ಸರಿ, ನೀನೇಕೆ ಹೋಗಲಿಲ್ಲ ?"

"ತಲೆ ಹೆಣೆದುಕೊಂಡಿರಲಿಲ್ಲ ...ಅವಳನ್ನೇ ಹೋಗು ಎಂದು ಕಳುಹಿಸಿದೆ....ಈಗ ಸರೋಜಳಿಂದ ಏನಾಗಬೇಕಿತ್ತು ?"

"ಏನೂ ಇಲ್ಲ !....ನೀನೇಕೆ ಹೀಗೆ ದುರ್ಗಿ ಕುಳಿತ್ಹಾಗೆ ಕುಳ್ತಿದ್ದೀಯಲ್ಲ" ಚಂದ್ರು ವಿಶಾಲಳು ಬಲಗೈ ಬೆರಳಿಗೆ ಸುತ್ತಿಕೊಂಡಿದ್ದ ಬಟ್ಟೆ ನೋಡಿ "ಏನೇ ಇದು ಬೆರಳಿಗೆ ಬಟ್ಟೆ....?"

"ಏನಾ....ಎಲ್ಲಾ, ನಿಮ್ಮಳಿಯನ ಕಾರುಬಾರು....ಅವನ ಕಣ್ಣಿಗೆ ಎಲ್ಲಾ ಪೂರೈಸಿ ಕನ್ನಡಿಯೊಂದು ಉಳಿದಿತ್ತು....ಈ ದಿನ ಅದನ್ನೂ ತೀರಿಸಿಕೊಂಡುಬಿಟ್ಟ."

"ಯಾವುದೇ ? ಮೇಜಿನ ಮೇಲಿತ್ತಲ್ಲ....ನಿನ್ನ ಸ್ನೇಹಿತೆ ಪಾರ್ವತಿ ಅನ್ನೋ ಹುಡುಗಿ ನಮ್ಮ ಮದುವೆಯಲ್ಲಿ ಪ್ರೆಜಂಟ್ ಮಾಡಿದ್ದಳಲ್ಲ ಅದೇ ....ಹೋಗಲಿ ಬಿಡು ಹುಡುಗ ಏನ್ಮಾಡಲಿಕ್ಕಾಗುತ್ತೆ !"

"ಹುಡುಗ....ಇನ್ನೂ ಹಸುಳೆ....ಸಾಲದೇನೋ ನಾಲ್ಕು ವರುಷ.... ಎಲ್ಲಾ ಸರೋಜಂದೇರೀ ತಪ್ಪು....ಆ ಮಕ್ಕಳನ್ನು ಸರಿಯಾದ ದಾರೀಲಿ ತೆಗೆದುಕೊಂಡು ಹೋಗದೆ ಉಬ್ಬಿಸಿ ಅಟ್ಟಕ್ಕೇರಿಸಿದ್ದಾಳೆ........ಮೊದಲಿನಿಂದಲೂ ಅಡ್ಡಿ-ಆತಂಕದಲ್ಲಿ ಬೆಳೆಸಿದ್ದರೆ ತಾನೆ?....ಸಾಲದ್ದಕ್ಕೆ ನೀವು ಬೇರೆ ಅವುಗಳನ್ನ ಮುದ್ದಿಸಲಿಕ್ಕೆ....ಅಲ್ರೀ ತುಂಬಿದ ಮನೇಲಿ ಕನ್ನಡಿ ಒಡೆದವರುಂಟೆ? ಹಾಗಾಗುವುದು ಅಶುಭಕ್ಕೆ ಸೂಚನೆ! ಇನ್ನೂ ಏನೇನು ಕಾದಿದೆಯೋ ಗ್ರಹಚಾರ ನಮಗೆ!"

"ಲೇ....ಬಿಡೇ....ಹೋಗ್ಲಿ....ಅಶುಭವಂತೆ!....ಕೈತಪ್ಪಿ ಮಕ್ಕಳು ಒಡೆದರೆ ಯಾರೇನು ಮಾಡಲಿಕ್ಕೆ ಸಾಧ್ಯವೇ?....ಕನ್ನಡೀನೇ ಒಡಿಯಬಾರದ್ದು ಅಂತಾಂದ್ರೆ....ಹೊಸ ಹೊಸದಾಗಿ ತೆರೆಯೋ ಗ್ಲಾಸ್ ಫ್ಯಾಕ್ಟರಿಗಳೆಲ್ಹೋಗ್ಬೇಕೆ?....ಏನೋ ಮಗು ಒಡೆದ್ಬಿಟ್ಟಿದೆ....ಏನಂಥ ರನ್ನಗನ್ನಡಿಯಲ್ಲವಲ್ಲ ... ನಾಳೆ ಮತ್ತೊಂದು ತರೋಣ ಬಿಡು"

"ಅಲ್ರೀ....ಕನ್ನಡಿ ಹೋಯ್ತು ಎಂದು ಯೋಚನೆಯಲ್ಲ....ಮನೇಲಿ ಕನ್ನಡಿ ಒಡಿಬಾರದ್ದರ್ರೀ....ನಾನು ಚಿಕ್ಕ ವಯಸ್ಸಿನಲ್ಲಿ ಒಂದು ಸಣ್ಣ ಕನ್ನಡಿ ಒಡೆದದ್ದಕ್ಕೆ....ಅಮ್ಮ....ನಾಲ್ಕು....ತೀಡಿ....ಮೂದೇವಿ,....ತುಂಬಿದ್ಮನೇಲಿ ಕನ್ನಡಿ ಒಡೆದುಬಿಟ್ಟಲ್ಲೇ....ಕನ್ನಡಿಯಂಥ ಬಾಳು....ಛಿದ್ರವಾಗಲಿಕ್ಕೆ ಇದು ಅಶುಭ ಕಣೇ ಅಂದು ಮೂರುದಿನ ಊಟಕ್ಹಾಕಲಿಲ್ಲ....ಕನ್ನಡಿ ಒಡೆದ ಎಂಟು ದಿನದಲ್ಲೇ ಕಾಮಧೇನುವಂತಿದ್ದ ನಮ್ಮ ಹಸು ಪರಲೋಕಯಾತ್ರೆ ಮಾಡಿತು........ನಿಮಗೇನು ಗೊತ್ತು ಇದೆಲ್ಲ........ಅಶುಭ ಅಂದ್ರೆ ಹಾಸ್ಯ ಮಾಡ್ತೀರ........ಅಲ್ಲದೆ ಪಾರ್ವತಿ ಬೊಂಬಾಯಿನಿಂದ ಕಳುಹಿಸಿದ್ದು........ಬೆಲ್ಜಿಯಂ ಗ್ಲಾಸ್....ಎಷ್ಟು ಚೆನ್ನಾಗಿತ್ತು....ಈಗ ಐದಾರು ರೂಪಾಯಿ ಕೊಟ್ರೂ ಸಿಗದು....ಅಲ್ಲದೆ ಬಹುಮಾನವಾಗಿ ಬಂದ ವಸ್ತು ಕಳೆದಾರುಂಟೇನ್ರೀ....?"

"ಹೋಗ್ಲಿ ಬಿಡೆ ಅಷ್ಟಕ್ಕೇನೆ....ಇನ್ನು ಅದನ್ನೇ ಬೆಳೆಸಿ ರಾಮಾಯಣ ಮಾಡಿಡಬೇಡ....ನಾಳೆ ಇನ್ನೊಂದು ಚೆನ್ನಾಗಿರೋ ಕನ್ನಡೀನೇ ತರೋಣ....ಸರೋಜಳ ಮುಂದೆ ಕೂಗಾಡಬೇಡ....ನೊಂದುಕೊಂಡಾಳು

....ಅದಿಲ್ಲೀ, ಬೆರಳಿಗೆ ಬಟ್ಟೆಯೇಕೆ ?"

"ಆಗ್ಲೀ ಕೂಗಾಡಿದ್ದೂ ಆಯ್ತು ಎಲ್ಲಾ ಆಯ್ತು....ಸರೋಜ ಕೋಪಗೊಂಡು ಉಮೇಶನಿಗೆ ನಾಲ್ಕು ಏಟು ತೀಡಿಯೂ ಬಿಟ್ಟಳು.... ಮೊದಲಿನಿಂದಲೂ ಹಾಗೇ ನಾಲ್ಕು ಕೊಟ್ಟು ಬುದ್ಧಿ ಕಲಿಸಿದ್ರೆ ತಾನೆ ? ....ಬೆಳೆದ ಮೇಲೆ ಬಡಿದರೆ ಬಗ್ಗುತ್ತಾನೆಯೇ ?!....ಈ ಬಟ್ಟೇನಾ !.... ಒಡೆದು ಬಿದ್ದಿದ್ದ ಗಾಜಿನ ಚೂರುಗಳನ್ನು ಎತ್ತುವಾಗ ಬೆರಳಿಗೆ ಚೂರು ಸೇರಿ ರಕ್ತಬಂತು....ಸ್ವಲ್ಪ ಸುಣ್ಣ ಇಟ್ಟು ಬಟ್ಟೆ ಕಟ್ಟಿದ್ದೇನೆ...."

"ಲೇ....ಸುಣ್ಣ ಏಕೆ ಇಟ್ಟೆ....ಗಾಜು ಹೊರಕ್ಕೆ ತೆಗೆದೆಯಾ ?.... ಆ ಗೂಡಿನಲ್ಲಿ ಟಿಂಚರ್ ಐಯೋಡಿನ್ ಇಟ್ಟಿದ್ದೀನಿ ತಗೋ ಏಳು.... ಹಾಕಿ ಕಟ್ತೀನಿ....ಕತ್ತೆಯಂತೆ ಚಾಕ್ರಿ ಬಡಿತಾಳೆ....ಸ್ವಲ್ಪದರಲ್ಲೇ ಕೂಗಾಡಿ ಕೋಣ ಅನ್ನಿಸಿಕೊಂಡುಬಿಡ್ತಾಳೆ"

ಚಂದ್ರು ಟಿಂಚರ್ ಐಯೋಡಿನ್ ಹಾಕಿ ವಿಶಾಲಳ ಬೆರಳಿಗೆ ಬ್ಯಾಂಡೇಜು ಕಟ್ಟಿದ. ಚಂದ್ರುವಿನ ಮನದಲ್ಲಿ ಒಂದು ಕನ್ನಡಿ ಒಡೆದದ್ದಕ್ಕಾಗಿ ಹೆಂಡತಿ ಕೂಗಾಟ ಆರಂಭಿಸಿದುದು ವ್ಯಥೆ ತಂದಿತ್ತು. ವಿಶಾಲಳೂ ಕನ್ನಡಿ ಒಡೆದದ್ದಕ್ಕೆ ಕೂಗಾಡುತ್ತಿರಲಿಲ್ಲ....ತುಂಬಿದ ಮನೆಯಲ್ಲಿ ಕನ್ನಡಿ ಒಡೆಯಬಾರದು.... ಅದು ಮುಂದೆ ಬರುವ ಅಶುಭಕ್ಕೆ ಸೂಚನೆ ಎಂಬ ನಂಬಿಕೆ ಒಂದುಕಡೆ.... ಪ್ರಿಯ ಸ್ನೇಹಿತೆ ಪ್ರೇಮಪೂರ್ವಕವಾಗಿ ಇತ್ತ ಒಲವಿನ ಕಾಣಿಕೆ ಕಳೆದು ಹೋದದ್ದು ತಮ್ಮ ಸ್ನೇಹಕ್ಕೇ ಭಂಗ ತಂದೀತೆಂಬ ವ್ಯಥೆ ಇನ್ನೊಂದುಕಡೆ ....ಆದರಿಂದಲೇ ಮುಂಬರುವ ಅಪಘಾತಗಳಿಗಾಗಿ ತತ್ತರಿಸಿ ಮನಸ್ಸು ವ್ಯಾಕುಲಗೊಂಡಿತ್ತು........ಮನೆಯಲ್ಲೂ ಒಂದಿಷ್ಟು ಕೂಗಾಡಿದ್ದಳು........ ಸರೋಜ ಅತ್ತಿಗೆಯ ಕೂಗಾಟ ಸಹಿಸದೆ ಕೋಪಶಮನಕ್ಕಾಗಿ ಉಮೇಶ ನಿಗೆ ನಾಲ್ಕು ತಳಿಸಿದ್ದಳು. ಚಂದ್ರು ವಿಶಾಲಳಿಗೆ ಬ್ಯಾಂಡೇಜು ಪೂರ್ತಿ ಕಟ್ಟಿ

"ಅಲ್ವೇ....ಮೇಜಿನ ಮೇಲಿದ್ದ ಕನ್ನಡಿ ಹೇಗೆ ಒಡೆಯಿತು....ಅವನಿಗೆ ಅದು ಎಟಕುವುದೇ ಇಲ್ಲವಲ್ಲ !"

"ಹೇಗಾ....ಬೈತಲೆ ತೆಗೆದುಕೊಳ್ಳೋಣ ಎಂದು ಕನ್ನಡೀನ ಕೆಳಕ್ಕೆ

ತೆಗೆದಿದ್ದೆ....ಉಮೇಶ ನನ್ನ ಸುತ್ತ....ಅತ್ತೆ....ಅತ್ತೆ....ಎನ್ನುತ್ತಾ ಓಡಾಡು ತ್ತಿದ್ದ....ಇವನು ಕನ್ನಡಿಗಾಗಿ ಹೋಚು ಕಾಯುತ್ತಿದ್ದಾನೆ ಎಂದು ನನಗೆ ತಿಳಿಯಲಿಲ್ಲ. ಬೈತಲೆ ತೆಗೆದುಕೊಂಡು ಮತ್ತೆ ಕನ್ನಡಿೀನ ಮೇಜಿನ ಮೇಲಿಟ್ಟು ಒಳಕ್ಕೆ ನಡೆದೆ....ಆಮೇಲೆ ಇವನು ಕನ್ನಡಿ ಎಟಕಿಸಿಕೊಳ್ಳಲು ಹೋಗಿದ್ದಾನೆ....ಅದು ಸಿಗಲಿಲ್ಲ ಎಂದು ಕಾಣುತ್ತೆ. ಮೇಜಿನ ಮೇಲೆ ಹಾಕಿದ್ದ ಟೇಬಲ್ ಕ್ಲಾತನ್ನು ಹಿಡಿದೆಳೆದಿದ್ದಾನೆ....ಕನ್ನಡಿ ಬಿದ್ದು ಚೂರು ಚೂರಾಗಿದೆ ಅಷ್ಟೇ"

"ಓ....ಅಷ್ಟೇನೆ? ಹೋಗ್ಲಿ ಬಿಡು ಅವನೂ ಒಡೀಲಿಲ್ಲವಲ್ಲ....ಆಕಸ್ಮಿಕ ವಾಗಿ ಆದದ್ದಕ್ಕೆ ಅವನೇನು ಮಾಡಿಯಾನು ?....ಒಡೆದವರು ಇನ್ನಾರು ಅಲ್ಲವಲ್ಲ....ನಾಳೆ ನಿನ್ನ ಮಗಳಿಗೆ ವರನಾಗುವ ಅಳಿಯ ತಾನೆ....?"

"ಅಳಿಯ ! ....ಇಂಥಾ ಘಟಿಂಗನನ್ನು ಅಳಿಯನನ್ನಾಗಿ ಮಾಡಿ ಕೊಂಡರೆ...." ಅಷ್ಟರಲ್ಲಿ ಹೊರಬಾಗಿಲಲ್ಲಿ ಸರೋಜ ಬರುತ್ತಿರುವುದನ್ನು ಕಂಡು ಮಾತು ಅಲ್ಲಿಗೇ ನಿಲ್ಲಿಸಿದಳು. ಚಂದ್ರುವೂ ಕೂಡ ಹೆಚ್ಚು ಮಾತ ನಾಡದೆ ಯಥಾಪ್ರಕಾರ ಮಕ್ಕಳೊಂದಿಗೆ ಆಟವಾಡಲು ತೊಡಗಿದ. ಆದರೆ ಉಮೇಶ ಮಾತ್ರ ಮಂಕಾಗಿದ್ದ.

ರಾತ್ರಿ ಉಮೇಶನಿಗೆ ಮೈ ಬೆಚ್ಚಗಾಗಿ ಜ್ವರ ಬಡಿದವು. ಸರೋಜ-ವಿಶಾಲ ಎಲ್ಲರೂ ಗಾಬರಿಗೊಂಡರು. ಚಂದ್ರು ಓಡಿಹೋಗಿ ಡಾಕ್ಟರನ್ನ ಕರೆತಂದ. ಡಾಕ್ಟರು ಬಂದು "ಏನೂ ಭಯವಿಲ್ಲ....ಹುಡುಗ ಸ್ವಲ್ಪ ಹೆದರಿದ್ದಾನೆ...ಅದರಿಂದಲೇ ಮೈ ಬಿಸಿಯಾಗಿದೆ...ಭಯಪಡಬೇಕಾದ್ದೇನೂ ಇಲ್ಲ" ಎಂದು ಒಂದೆರಡು "ಸಿಬಜಾಲ್" ಪಿಲ್ಸ್ ಕೊಟ್ಟು ಹೊರಟು ಹೋದರು. "ಹುಡುಗ ಸ್ವಲ್ಪ ಹೆದರಿದ್ದಾನೆ" ಎಂದಂದ ಡಾಕ್ಟರ್ ಮಾತು ಕೇಳಿ ಚಂದ್ರು ತಾನೂ ಹೆದರಿದ. ಒಂದು ಸಣ್ಣ ಪ್ರಸಂಗಕ್ಕಾಗಿ ಹುಡುಗ ನನ್ನು ಎಷ್ಟೊಂದು ಗಾಬರಿಪಡಿಸಿದ್ದಾರೆ ಎಂದು ಯೋಚಿಸತೊಡಗಿದ. ಏಕೆಂದರೆ ತಾನು ಹಿಂದೊಮ್ಮೆ ಯಾವುದೋ ಮಾಸಿಕದಲ್ಲಿ....ಹುಡುಗರ ಮನಸ್ಸು ಬಹಳ ಮೃದು. ಅವರ ಮನಸ್ಸಿಗೆ ಏನಾದರೂ ಆಘಾತವಾದರೆ ಹೂವಿನ ಮೇಲೆ ಸಿಡಿಲೆರಗಿದಂತೆ ಎಂದು ಓದಿದ್ದ. ಅದೇ ಮಾಸಿಕದಲ್ಲಿ

"ಹುಡುಗರ ಮನಸ್ಸು" ಎಂಬ ಒಂದು ಲೇಖನ ಓದಿದ್ದು ಜ್ಞಾಪಕ ಬಂತು........

"........ಮನಶಾಸ್ತ್ರದ ಪ್ರಾಧ್ಯಾಪಕರ ಮಗಳೊಬ್ಬಳು ಮನೆಯಲ್ಲಿದ್ದ ಸೆಕ್ಸ್ ಪುಸ್ತಕದಲ್ಲಿ ಪ್ರಕಟಿಸಿದ್ದ ನಗ್ನ ಯುವತಿಯ ಚಿತ್ರ ನೋಡಿ ಆಶ್ಚರ್ಯಗೊಂಡು ತಂದೆಯ ಬಳಿಗೆ ಬಂದು "ಅಣ್ಣಾ ! ಈಕೆ ಯಾರು ?....ಇವಳಿಗೆ ಎಲ್ಲರಂತೆ ಬಟ್ಟೆಯೇಕಿಲ್ಲ" ಅಂದಳಂತೆ. ನಿಜಕ್ಕೂ ಆ ಮನಶಾಸ್ತ್ರಜ್ಞನಿಗೆ ಆ ಎಳೆ ಹುಡುಗಿಗೆ ಏನು ಹೇಳುವುದೋ ತಿಳಿಯದಾಯಿತು. ಮಾನವನ ಸುಪ್ತಕಾಮದ ಪ್ರಚೋದನೆಗಾಗಿ ಪ್ರಕಟಿಸಿದ ಚಿತ್ರದ ಸತ್ಯಾಂಶವನ್ನು ತಿಳಿಸುವುದೆ ? ತಿಳಿಸದೆ ಹೋದರೆ ಸತ್ಯಾಂಶ ಹುಡುಗಿಯಿಂದ ಬಚ್ಚಿಟ್ಟು ಅವಳ ಕೆರಳಿದ ಮನಸ್ಸಿಗೆ ಅನುಮಾನ ತಂದೊಡ್ಡಲೇ? ಇದೇ ತುಯ್ದಾಟದಲ್ಲಿದ್ದು ಕಡೆಗೆ ಏನೋ ಯೋಚಿಸಿ, ಹುಡುಗಿಯನ್ನು ಹೊರಗಡೆ ಕರೆದುಕೊಂಡು ಹೋಗಿ, ಬೀದಿಯಲ್ಲಿ ಬರುತ್ತಿದ್ದ ನಾಯಿಯೊಂದನ್ನು ತೋರಿಸಿ "ನೋಡು ಮಗು ! ಇದು ಬೀದಿನಾಯಿ ಇದರ ಮೈಮೇಲೆ ಏನಾದರೂ ಇದೆಯೇ?.... ಅವೇ ನಮ್ಮ ಮನೆ 'ಜಾಕಿ' ನೋಡು ಅದೂ ನಾಯಿ, ಅದರ ಕೊರಳಲ್ಲಿ ಪಟ್ಟಿಯಿವೆ....ಹಾಗೆ ಆ ಚಿತ್ರದಲ್ಲಿನ ಹೆಂಗಸೂ ಕೂಡ....ಅದೊಂದು ಬೀದಿ ನಾಯಿ ಇದ್ದಹಾಗೆ" ಎಂದರಂತೆ. ಆ ಹುಡುಗಿಗೆ ತಂದೆ ಹೇಳಿದ ಉತ್ತರ ಸಮಂಜಸವಾಗಿ ಕಂಡಿತೇನೋ ಪುನಃ ಆ ಮಾತೆತ್ತಲಿಲ್ಲವಂತೆ...." ತಾನು ಹಿಂದೆ ಓದಿದ ಲೇಖನ ಚಂದ್ರುವಿಗೆ ಜ್ಞಾಪಕಕ್ಕೆ ಬಂತು. ಈದಿನ ಮನೆಯಲ್ಲೂ ಅಷ್ಟೆ ವಿಶಾಲ ಆ ಎಳೆ ಹುಡುಗನ ಮನಸ್ಸು ಅರಿತು ಕನ್ನಡಿ ಕೊಟ್ಟಿದ್ದರೆ ಖಂಡಿತ ಒಡೆಯುತ್ತಿರಲಿಲ್ಲ. ಕನ್ನಡಿ ಒಡೆದನಲ್ಲ ಎಂದು ಸರೋಜ ಏಟು ಕೊಡಬಾರದಿತ್ತು. "ಮಕ್ಕಳ ಮೃದುಮನ ಅರಿತವರಿಲ್ಲ" ಎಂದು ಇದೇ ಚಿಂತನೆಗೊಳಗಾದನು ಚಂದ್ರು.

ನಾಲ್ಕುದಿನ ಕಳೆದವು. ಉಮೇಶನ ಜ್ವರವಿಳಿಯಿತು. ತಂಗಿಯೂ ಗಂಡನ ಮನೆಗೆ ಹೊರಟು ನಿಂತಳು. ಆದರೂ ಉಮೇಶ ಮೊದಲಿನಂತೆ ಹೆಚ್ಚು ಲವಲವಿಕೆ ತೋರಿಸದೆ ಮಂಕಾಗಿಯೇ ಇದ್ದನು. ತಂಗಿ ಮಕ್ಕಳೊಡನೆ ಗಂಡನ ಮನೆಗೆ ಹೊರಟುಹೋದಳು.

೫

ಸರೋಜ ಮಕ್ಕಳೊಂದಿಗೆ ಊರಿಗೆ ಹೋಗಿ ಹದಿನೈದು ದಿನಗಳಾಗಿದ್ದುವು. ಆದರೂ ಅವಳಿಂದ ಕಾಗದವಿರಲಿಲ್ಲ. ಚಂದ್ರು ಆದಿನ ನಾಲ್ಕುವರೆಗೇ ಕಛೇರಿ ಬಿಟ್ಟು ಮನೆಗೆ ಬಂದನು. ವಿಶಾಲ ಎಂದಿನಂತೆ ಅಲಂಕೃತಳಾಗಿ ಸ್ವಾಗತಿಸಲು ಸಿದ್ಧಳಿರಲಿಲ್ಲ. ತಲೆಗೆದರಿಕೊಂಡು, ಕಣ್ಣು ಕೆಂಪಗೆ ಮಾಡಿಕೊಂಡು ಕಣ್ಣೀರು ಹಾಕುತ್ತಿದ್ದಳು. ಚಂದ್ರು ವಿಶಾಲಳ ಆಗಿನ ಸ್ಥಿತಿ ನೋಡಿ ದಿಗ್ಭ್ರಮೆಗೊಂಡು

"ವಿಶಾಲ !....ಏನೇ ಇದು !....ಯಾಕೆ ಅಳು ? ಮೈಗೆ ಸ್ವಸ್ಥವಿಲ್ಲವೇನೇ ?"

"..........." ವಿಶಾಲ ಉತ್ತರ ಕೊಡಲಿಲ್ಲ. ಬದಲಿಗೆ ಬಿಕ್ಕಿಬಿಕ್ಕಿ ಅಳಲುಪಕ್ರಮಿಸಿದಳು. ಅವಳ ಕಣ್ಣಲ್ಲಿ ನೀರು ಮಿನುಗಿ, ತಡೆಗಟ್ಟಿದ್ದ ದುಃಖದ ಕೋಡಿ ಹರಿಯತೊಡಗಿತು.

"ವಿಶಾಲ !....ನಿನ್ನ ಚರ್ಯೆ ಅರ್ಥವಾಗುತ್ತಿಲ್ಲ....ವಿಷಯವೇನು ತಿಳಿಸು ? ಆಮೇಲೆ ಮನಸೋ ಇಚ್ಛೆ ರೋಧಿಸುವಿಯಂತೆ"

"ಏನಿಲ್ಲಾ....ನೀವು ನೊನ್ನೆ ತಂದಿದ್ದ....ಕ....ನ್ನ....ಡಿ...."ಎನ್ನುತ್ತಾ ವಿಶಾಲ ದೊಡ್ಡ ಧ್ವನಿಯಲ್ಲಿ ಅಳತೊಡಗಿದಳು.

"ಅಳಬೇಡವೇ ಮಹಾರಾಯಿತಿ....ಏನಾಯಿತು ಕನ್ನಡಿಗೆ ?........ ಒಡೆದು ಹೋಯಿತೆ....?"

"ಹ್ಞಾಂ....ಮೇಜಿನ ಮೇಲಿತ್ತು....ತಲೆ ಬಾಚಿಕೊಳ್ಳಲು ತೆಗೆದುಕೊಂಡಿದ್ದೆ....ಪುನಃ ಅಲ್ಲಿಡುವಾಗ....ಕೈಜಾರಿ...."

"ಕೆಳಗೆ ಬಿದ್ದು ಒಡೆಯಿತು ಅನ್ನು !" ಚಂದ್ರುವಿಗೆ ಎಲ್ಲಿಲ್ಲದ ನಗು ಬಂತು...."ಹಹಹ್ಹಹ್ಹ...." ನಗು ತಡಯಲಾರದೆ "ಲೇ, ನಗು ತಡೆಯಲಿಕ್ಕೆ ಸಾಧ್ಯವಿಲ್ಲವೆ....ಅಯ್ಯಮ್ಮಾ....ಹಹ್ಹ....ಹ್ಹ....ಹ್ಹ...." ನಗು ಕ್ರಮೇಣ ನಿಲ್ಲತೊಡಗಿದ ಮೇಲೆ "ಕನ್ನಡಿ ಒಡೆದೇ ಬಿಟ್ಟೆಯಾ ? ಮನೆಗೆ ಅಶುಭ-ಅಮಂಗಲ ತಂದೊಡ್ಡಿದೆಯಲ್ಲೇ ?" ಚಂದ್ರು ನಗುತ್ತಲೇ ಹೇಳಿದ.

"ನಾನು ಬೇಕೂಂತ ಒಡೆಯಲಿಲ್ಲರ್ರೀ....ಕೈಜಾರಿ ಕೆಳಗೆ ಬಿದ್ದಿತು"

ಮತ್ತೆ ವಿಶಾಲಳ ಅಳು.

"ಹೋಗಲಿ ಬಿಡು, ಹೋದರೆ ಹೋಯಿತು....ಅದಕ್ಕೇತಕ್ಕೆ ಅಳು ತ್ತಿದ್ದೀಯಾ ?...."

"ಅದಕ್ಕಲ್ಲ....ಹಿಂದೆ ಉಮೇಶ ಕನ್ನಡಿ ಒಡೆದದ್ದಕ್ಕೆ....ಮಗು ಅನ್ನು ವುದು ಯೋಚಿಸದೆ ಸಿಕ್ಕಾಪಟ್ಟೆ ಅಂದೆ....ಈಗ ನಾನೇ ದೊಡ್ಡವಳಾಗಿ ಒಡೆದುಬಿಟ್ಟಿದ್ದೀನಿ...."

"ಸಾಮಾನುಗಳಿರುವುದು ಒಡೆಯಲಿಕ್ಕೇ ಕಣೇ........ಆದರೆ ಸ್ವಲ್ಪ ಜಾಗರೂಕತೆಬೇಕು ಅಷ್ಟೇ....ಹೋಗಲಿ ಬಿಡು. ಅಂದು ಎಳೆಯ ಮಗು ಒಡೆಯಿತು....ಇಂದು ನೀನೂ ಒಂದು ಬೆಳೆದ ಮಗು ಒಡೆದುಬಿಟ್ಟಿದ್ದೀಯಾ ....ಕನ್ನಡಿ ಒಡೆದರೆ ಅಶುಭ ಅಂತೀಯಲ್ಲ....ಈದಿನ ಆಫೀಸಿನಲ್ಲಿ ನನಗೇ ನಾಯ್ತು ಗೊತ್ತೆ ?"

"ಏನಾಯಿತ್ರೀ...." ವಿಶಾಲ ಅಳು ನಿಲ್ಲಿಸಿ ಗಾಬರಿಯಿಂದ ಕೇಳಿದಳು.

"ಏನಾಯಿತಾ....?....ಮುಳುಗೇ ಹೋಯಿತು ಪ್ರಪಂಚ ಇನ್ನು ಈ ಊರಿನ ಋಣಾನೆ ತೀರಿತಲ್ಲೇ?....ಕನ್ನಡಿ ಎಷ್ಟು ಹೊತ್ತಿನಲ್ಲಿ ಒಡೆಯಿತು?"

"ಸುಮಾರು ಹನ್ನೆರಡೂವರೆ ಇರಬಹುದುರ್‍ರೀ...."

"ಅಯ್ಯೋ !! ಆಗ್ಲೇನೆ ಈ ಚೀಟಿ ಕೈಗೆ ಬಂದದ್ದು ನೋಡು !" ಚಂದ್ರು ಟೈಪುಮಾಡಿದ ಕಾಗದವನ್ನು ವಿಶಾಲಳ ಕೈಗಿತ್ತ. ವಿಶಾಲ ಪೂರ್ಣ ಓದಿ ಬೆಳಗಿನ ಬಿಸಿಲು ಕಂಡು ಬಿರಿಯುವ ಹೂವಿನಂತೆ ಮುಖ ವರಳಿಸಿ

"ಏನ್ರೀ....ಸೀನಿಯರ್ ಆಡಿಟರ್ ಆಗಿ ಪ್ರಮೋರ್ಷ ಮಾಡಿದ್ದಾ ರಲ್ರೀ ಮೈಸೂರಿಗೆ....ಅಶುಭ ಅಂತ ಹೆದರಿಸಿ ಕೈಕಾಲೇ ಚಲಿಸದ ಹಾಗೆ ಮಾಡಿಬಿಟ್ಟರಲ್ರೀ....ಕಗ್ರಾಜುಲೇರ್ಷಸ್...."

"ಲೇ, ಕಗ್ರಾಜುಲೇರ್ಷಸ್ ಇರ್‍ಲೀ....ಇದೆಲ್ಲಾ ಏನು ಗೊತ್ತೆ ? ಕನ್ನಡಿ ಒಡೆದುದರ (ಅ)ಶುಭ ಕಣೇ....ಈಗ ಆಫೀಸಿನಿಂದ ಇಷ್ಟುಬೇಗ ಬಂದಿರುವುದೇಕೆ ಗೊತ್ತೆ?........ಇಂಪೀರಿಯಲ್‌ನಲ್ಲಿ ಇಂಗ್ಲೀಷ್ ಚಿತ್ರ "ಕೊವಾಡಿಸ್" ಹೊರಡು ಬೇಗ ಹೊತ್ತಾಗುತ್ತೆ........ನೋಡು ಆದಿನ

ಉಮೇಶ ಕನ್ನಡಿ ಒಡೆದದ್ದಕ್ಕೆ ಅವರಮ್ಮನಿಂದ ನಾಲ್ಕು ತೀಡಿಸಿದೆಯಲ್ಲಾ ಈ ದಿನ ನಿನಗೇನು ಶಿಕ್ಷೆ ಗೊತ್ತೆ ?”

“ಏನೋ....!” ವಿಶಾಲ ನಗೆಯ ಚಾಟಿಯಾಡಿಸಿದಳು.

“ಏನಾ....ಅಲ್ಲೇ ನಿಂತುಕೋ....ಶಿಕ್ಷೆ ತೋರಿಸ್ತೀನಿ”

“ಏನು....ಅಲ್ಲೇನೆ ಹೇಳಿ....” ಕೊಂಕು ಬೆರಸಿ ಬಿಂಕದಿಂದ ನುಡಿದಳು ವಿಶಾಲ.

“ನಾನು ...ಅವರಿವರ ಹಾಗೆ....ದೊಣ್ಣೆ....ಕೈಗಳಿಂದ ಶಿಕ್ಷೆ ವಿಧಿಸುವುದಿಲ್ಲ....ಕೊಟ್ಟರೆ ನಾಲ್ಕು ತುಟಿಯಿಂದ....”

“ಓ, ತಿಳೀತು ನಿಮ್ಮ....ಶಿಕ್ಷೆ........” ವಿಶಾಲ ಒಳಕ್ಕೆ ನಡೆದಳು, ಚಂದ್ರುವೂ ಹಿಂಬಾಲಿಸಿ ರೂಮಿನ ಕದವನ್ನು ಅರೆಬಾಗಿಲು ಮಾಡಿದ.

# ಬೀದಿಯ ಮಕ್ಕಳು

ಅದೊಂದು ಸತ್ತ ಶಿಶು....ಹಡೆದು ನಾಲ್ಕೈದು ದಿನಗಳಾಗಿರಬಹುದು ....ಈ ವಿಶಾಲ ವಿಶ್ವವನ್ನು ಕಣ್ಣು ಬಿಟ್ಟು ಸಹ ನೋಡಿರಲಾರದು........ ಯಾರು ಹಡೆದವರೋ....ಯಾರ ಮಗುವೋ....ಯಾವ ತಾಯಿ ನವಮಾಸ ಗಳು ಹೊಟ್ಟೆಯಲ್ಲಿ ಹೊತ್ತು ಸಲುಹಿ ಜನ್ಮವಿತ್ತಳೋ....ಯಾರೋ ಕತ್ತು ಹಿಚುಕಿ ಸೊಪ್ಪನ್ನು ಎಸೆದಂತೆ ಎಸೆದಿದ್ದಾರೆ....ಕೃತ್ಯ ನಡೆಸಿದಾಕೆ ಎಂಥ ನಿಷ್ಠುರ್ಣ್ಯಳಿರಬೇಕು....ಇಂಥ ಕೃತ್ಯ ನಡೆಸಲೋಸುಗವೇ ಬಯಸಿ ಜನ್ಮ ವಿತ್ತಳೇನೋ....?

ಸೊಂಪಾಗಿ ಬೆಳೆದು ಬೇರು ಬಿಟ್ಟಿದ್ದ ಆಲದ ಮರದ ಬುಡದಲ್ಲಿ ಒಂದು ಸತ್ತ ಶಿಶು ಬಿದ್ದಿತ್ತು. ನಾನು ಕಾಲೇಜಿಗೆ ಹೋಗಲು ಅದೇ ಹತ್ತಿರದ ದಾರಿ. ನಿರ್ಜನವಾದ ಆ ದಾರಿ ನನಗೆ ಅತ್ಯಂತ ಪ್ರಿಯ. ಕೈ ಕಾಲುಗಳನ್ನು ಸೆಟೆದುಕೊಂಡು ಬೆನ್ನು ಮೇಲೆ ಮಾಡಿಕೊಂಡು ಬಿದ್ದಿದ್ದ ಶಿಶು ನನ್ನ ಕಣ್ಣನ್ನು ಸೆರೆಹಿಡಿಯಿತು. ಆದರತ್ತ ಧಾವಿಸಿದೆ. ಸತ್ತ ಶಿಶು ವನ್ನು ಅತ್ತಿತ್ತ ಹೊರಳಿಸಿ ನೋಡಿದೆ....ಕಣ್ಣು ಮುಚ್ಚಿತ್ತು....ಕಣ್ಣುಗಳ ತುಂಬ ಇರುವೆಗಳು ಸಾಲುಗಟ್ಟಿದ್ದವು....ಒಂದೇ ಗೇಣು....ಕಡ್ಡಿಯಂಥ ಕೈಕಾಲುಗಳನ್ನು ಮುದಿಚಿಕೊಂಡು ಮಲಗಿತ್ತು.

ಯಾರ ಶಿಶುವೋ ಅದು....ಹಡೆದು ಕತ್ತು ಹಿಚುಕಿ ನಿಷ್ಕರುಣೆಯಿಂದ ಎಸೆದಿದ್ದಾರೆ....ಮಾತೆ ಪ್ರಪಂಚದಲ್ಲಿ ಅತ್ಯಂತ ದಯಾಮಯಿ....ಪ್ರೇಮ ಮಯಿ....ವಾತ್ಸಲ್ಯಮಯಿ....ಕರುಣಾರ್ದ್ರ ಹೃದಯಿ....ಆದರೆ ಆ ಶಿಶು

ವನ್ನು ಹಡೆದ ಮಾತೆ ಮನುಷ್ಯಳಲ್ಲ, ಮೃಗವಿರಬೇಕು.

ಪ್ರಾಯಶಃ, ಆದು ಹಾದರದಿಂದ ಹಡೆದ ಶಿಶುವಿರಬೇಕು.... ಹಡೆದಾಕೆ ಜಗತ್ತಿನ ಜನರ ಪ್ರಾಸಂಗಿಕ ಬಿರುನುಡಿಗೆ ಬಲಿಯಾಗಲಾರದೆ ... ತಲೆ ತಗ್ಗಿಸ ಲಾರದೆ ಹೇಸಿ ಈ ಕೃತ್ಯ ನಡೆಸಿವಳೆ?.... ಆದರೇನು ?.... ಯಾರ ಪಾಪಕ್ಕೆ ಯಾರು ಹೊಣೆ....?

ಕಾಲೇಜಿನ ದಾರಿ ಹಿಡಿದು ಹೊರಟೆ.... ನನ್ನ ತಲೆ ವಿಚಾರದ ಸುಳಿ ಯಲ್ಲಿ ಸಿಕ್ಕಿ ಸುತ್ತುತ್ತಿತ್ತು. ಕಾಲೇಜು ಸಿಕ್ಕಿತು. ಆಗಲೇ ಪ್ರಾಧ್ಯಾ ಪಕರು ಕ್ಲಾಸ್ ತೆಗೆದುಕೊಂಡು ಹತ್ತು-ಹದಿನೈದು ನಿಮಿಷಗಳಾಗಿದ್ದವು. ಅದು ಪಾಲಿಟಿಕ್ಸ್ ಕ್ಲಾಸ್.... ಒಳಕ್ಕೆ ಹೊರಟೆ... ನನ್ನ 'ಇಣಡಿಫರೆನ್ಸ್' ಕಂಡು ವಿದ್ಯಾರ್ಥಿ ವಿದ್ಯಾರ್ಥಿನಿಯರು ಮನದಲ್ಲೇ ನಕ್ಕಿರಬೇಕು. ಕೊನೆಯ ಬೆಂಚ್ ಒಂದರಲ್ಲಿ ಆಸನಾರೂಢನಾಗಿ ಬೋರ್ಡನ್ನು ಈಕ್ಷಿಸಿದೆ. 'ಫಾಲ್ ಆಫ್ ರೋಮ್' ಎಂದು ಬರೆದಿತ್ತು. ಅದು ಆ ದಿನ ಪ್ರಾಧ್ಯಾ ಪಕರು ಮಾಡುತ್ತಿದ್ದ ಪಾಠ.... ಅವರ ಉಪನ್ಯಾಸ ನಡೆಯುತ್ತಿತ್ತು.... ಕಣ್ಣುಗಳು ಅವರನ್ನೇ ನೋಡುತ್ತಿದ್ದವು.... ಕಿವಿ ಅವರ ಕಡೆಯೇ ಇದ್ದುವು ....ಆದರೆ ಮನದ ಕಣ್ಣು ಏನನ್ನೋ ಕಾಣುತ್ತಿತ್ತು........ ಮನದ ಕಿವಿ ಏನನ್ನೋ ಆಲಿಸುತ್ತಿತ್ತು.... ನೊರೆಯುತ್ತಿತ್ತು.

ಕಣ್ಣುಮುಂದೆ ಆದೇ ದೃಶ್ಯ.... ಸತ್ತಶಿಶು.... ಅದೆಷ್ಟು ಪಾಪಮಾಡಿ ಈ ಸುಖ ಉಣ್ಣಲಿಕ್ಕೆ ಬಂದಿತೊ ಈ ಲೋಕಕ್ಕೆ.... ಯಾವ ತಂದೆ ಅದಕ್ಕೆ ಜನ್ಮ ನೀಡಿದನೋ.... ಯಾವ ತಂದೆಯ ಹೆಸರನ್ನು ಆ ಹಸುಳೆ ಹೇಳಬೇ ಕಾಗಿತ್ತೋ.... ಯಾವ ತಾಯಿಯ ಮಡಿಲಲ್ಲಿ ಮಲಗಿ ಮೊಲೆಹಾಲು ಹೀರ ಬೇಕಾಗಿತ್ತೋ.... ಇಂದು.... ನಿಸ್ತೇಜವಾಗಿ.... ನಿರ್ಮಲವಾಗಿ.... ನಿಶ್ಕಲ್ಮಶವಾಗಿ ಮಣ್ಣಿನಲ್ಲಿ ಮಣ್ಣಾಗಿ ಹೋಗಲು ಮಲಗಿ ನಿದ್ರಿಸುತ್ತಿತ್ತು.

ಯಾರ ಮನೆಗೆ ಮಗುವಾಗಿ.... ಯಾರ ಮನದ ಮಲ್ಲಿಗೆಯಾಗಿ.... ಯಾರ ಮನೆತನಕ್ಕೆ ಹೂವಾಗಿ ಅರಳಬೇಕಿತ್ತೋ ಅಂಥ ಒಂದು ಶಿಶು ಇಂದು ಹೇಳ ಹೆಸರಿಲ್ಲದಂತೆ ಮಾಯವಾಗಿದೆ.... ಬರ್ನಾರ್ಡ್‌ಷಾ ಒಂದು ಕಡೆ ಹೇಳಿರುವರು "ಮಾನವ ನಾಗರೀಕತೆಯ ತುಟ್ಟತುದಿ ಮುಟ್ಟಿದರೂ

ಇನ್ನೂ ಮೃಗಸ್ವಭಾವ ಬಿಟ್ಟಿಲ್ಲ" ಎಂದು. ಇಂಥ ಪಲವು ಕೃತ್ಯಗಳನ್ನು ಕಂಡೇ ಷಾ ಆ ಮಾತು ಹೇಳಿದರೇನೊ....

ಮಹಾತ್ಮಾ ಗಾಂಧಿ.... ಏಸುಕ್ರಿಸ್ತ.... ಸಾಕ್ರಟೀಸ್.... ಬುದ್ಧ.... ಬಸವಣ್ಣ.... ಪರಮಹಂಸ .... ಷೇಕ್ಸ್‌ಪಿಯರ್.... ಷೆಲ್ಲಿ.... ಇಲಿಯಟ್.... ಬೈರನ್....ಮಿಲ್ಟನ್....ವರ್ಡ್ಸ್‌ವರ್ತ್....ವಿಶ್ವದಲ್ಲಿ ಹುಟ್ಟಿ ಅಳಿದ ಎಂಥೆಂಥ ಮಹಾನುಭಾವರನ್ನು ಇಂದು ಸ್ಮರಿಸಿ ಪೂಜಿಸುತ್ತಿದ್ದೇವೆ....ಆದರೆ ಆ ಸತ್ತ ಶಿಶು ಏಕೆ ಒಬ್ಬ ಏಸುವಾಗಬಾರದಾಗಿತ್ತು....ಏಕೆ ಒಬ್ಬ ಗಾಂಧಿಯಾಗ ಬಾರದಿತ್ತು....ಆಗುತ್ತಿತ್ತೇನೊ....?

....ಮುಂದಿನದು ಯಾರಿಗೆ ಬೇಕು....ಯಾರ ಭವಿಷ್ಯ ಯಾರಿಗೆ ಪ್ರೀತಿ....ತನಗಿಲ್ಲದ ವಿಶ್ವ....ತನಗಿಲ್ಲದ ಗೌರವ ಯಾರಿಗಿಷ್ಟರೇನು ?.... ನಾನಿಲ್ಲದ ವಿಶ್ವ ಏನಾದರೇನು? ಮಾನವನ ಈ ಸ್ವಾರ್ಥಸ್ವಭಾವವೇ ಎಲ್ಲ ಪಾಪಕ್ಕೂ ಮೂಲ....ತಾನು ಬದುಕಬೇಕು....ತನಗೆ ಗೌರವಬೇಕು.... ತನ್ನ ಗೌರವಕ್ಕಾಗಿ ಮಾಡಿದುದನ್ನು ಮುಚ್ಚಬಲ್ಲ....ಆಡಿದುದನ್ನು ಇಲ್ಲ, ಎನ್ನಬಲ್ಲ....ಪರರ ಸಮಾಧಿಯ ಮೇಲೆ ತನ್ನ ಸ್ವಾರ್ಥ ಸೌಧವನ್ನು ಕಟ್ಟ ಬಲ್ಲ, ಬಾಳಬಲ್ಲ....ಆದರೆ ಯಾರಿಗೇನು ಶಾಶ್ವತ ಈ ವಿಶ್ವದಲ್ಲಿ...."ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೆ." ಇದು ದಾಸರ ಕೀರ್ತನೆ....ಲಂಗು ಲಂಗಾಮಿಲ್ಲದೆ, ಹೊದೆಯಲು ಹಚ್ಚಡವಿಲ್ಲದೆ ಮನೆ ಮಠಗಳಿಲ್ಲದೆ ಹಾಡಿ ಕೊಂಡು ಅಲೆದ ದಾಸರ ಕೀರ್ತನೆಯಿಂದ ನಮಗೇನು ಸಾರ್ಥಕವಾದೀತು ಅನ್ನುವ ಬೃಹಸ್ಪತಿಗಳು ನಾವು....ನಮಗೆ ಯಾರ ಭಯವಿದೆ. ಯಾವ ಮರಿತ-ಸುಕೃತಗಳ ಭೀತಿಯಿದೆ....ನಾವು ಪಟ್ಟುದೇ ಭೋಗ....ಮಾಡಿದುದೇ ತ್ಯಾಗ....ನೀಡಿದುದೇ ಧರ್ಮ....

* * * * * * *

"ಅಮ್ಮಾss....ಕಮಳಾ ತಾಯಿ"

....................

"ಅಮ್ಮಾss....ಗಂಜೀನಾದ್ರೂ ಬಿಡೀ ತಾಯಿ" ಭಿಕ್ಷುಕಿಯೊಬ್ಬಳ ಆರ್ತಧ್ವನಿ....ಅವಳ ಕಂಕುಳಲ್ಲೊಂದು.... ಕೈಯಲ್ಲೊಂದು.... ಹಿಂದೆರಡು

ಮಕ್ಕಳು....ಯಾವ ಪುರುಷಾರ್ಥಕ್ಕೆ ಅವನ್ನು ಹಡೆದಳೋ........ಯಾವ ಪುರುಷಾವತಾರವೋ ಅವು....ನಗ್ನವಾಗಿ ಹುಟ್ಟಿರುವುವು....ನಗ್ನವಾಗಿಯೇ ಬೆಳೆಯುತ್ತಿವೆ.

ಬೀದಿಯಲ್ಲಿ ಬಿದ್ದ ಎಂಜಲೆಲೆ....ಯಾರೋ ಕರೆದು ಹಾಕಿದ ಹಳಸಿದ ತಂಗಳನ್ನ....ನಾಯಿ ನೆಕ್ಕುವ ನೀರು....ಕಂಡಾಗ ಇವಳೂ ಧಾವಿಸುತ್ತಾಳೆ.... ಅವಳ ಹಿಂದೆ ಆ ಹಸುಳೆಗಳೂ ಧಾವಿಸುತ್ತವೆ....ಹಸಿವಿನ ಮುಂದೆ ತಾಯಿ-ಮಕ್ಕಳೆಂಬ ಭೇದವಿಲ್ಲ....ಅನ್ನ ದೇವರ ಮುಂದೆ ಇನ್ನು ದೇವರಿಲ್ಲ.... ಎಲ್ಲರೂ ಒಂದೇ....

ಈ ವಿಶ್ವದಲ್ಲಿ ಅನ್ನಕ್ಕಾಗಿ ಜೀವಿಸಬೇಕು....ಇಲ್ಲವೆ ಜೀವಿಸಲಿಕ್ಕಾಗಿ ಅನ್ನ ಬೇಕು....ತುತ್ತು ಅನ್ನಕ್ಕಾಗಿ ಪೈಪೋಟಿ....ತಾಯಿ ಒಂದು ತುತ್ತು ತಿಂದರೆ....ಹಸಿವಿನಿಂದ ಬಳಲಿದ ಮಕ್ಕಳು ನಾಲ್ಕು ತುತ್ತು ಕಬಳಿಸುವುವು.... ಆಗ ತಾಯಿ ಮಕ್ಕಳ ಕಡೆ ನೋಡುವ ನೋಟ....ಮಕ್ಕಳು ತಾಯಿಯ ಕಡೆ ನೋಡುವ ಸಂಧಿಗ್ಧ ನೋಟ....ಎಂಥ ಭಯಂಕರ ! ....ಕರುಣಾಜನಕ !....

ಕಲ್ಲು....ಮಣ್ಣು........ಹುಲ್ಲುಗಳನ್ನು ತಿಂದು ಜೀವಿಸುವ ಶಕ್ತಿ ದೇವರು ನೀಡಿದ್ದರೆ ಇಂದು ಅವಕ್ಕೂ ಕ್ಷಾಮ ಒದಗುತ್ತಿತ್ತೇನೋ.... ಮಾನವ ಮಾನವನನ್ನೇ ಹೀರುವ ಮೃಗ ಸ್ವಭಾವ ಇಂದಿಗೂ ಇದ್ದಿದ್ದರೆ ಅದೆಷ್ಟು ಚೆನ್ನಾಗಿತ್ತು !........ತಾಯಿ ತಾನು ಹಡೆದ ಮಗುವನ್ನೇ ತಿನ್ನ ಬಹುದಿತ್ತು........ಮಗು ತನ್ನ ತಾಯಿಯ ಸ್ತನಗಳಲ್ಲಿ ಹಾಲು ಹೀರುವ ಬದಲು ಸ್ತನಗಳನ್ನೇ ತಿಂದು ತೇಗಬಹುದಿತ್ತು....

ಇಷ್ಟಾದರೂ ಆ ಭಿಕ್ಷುಕಿಗೆ ಪ್ರಪಂಚದ ಅರಿವಿಲ್ಲ....ಅನ್ನವಿಟ್ಟರು ಎಂಬ ಕರುಣೆಯಿಲ್ಲ....ಬೆತ್ತದಿಂದ ಹೊರಕ್ಕೆ ದೂಡಿದರು ಎಂಬ ಕೋಪವಿಲ್ಲ ....ಎಲ್ಲಿಯೋ ತಿರುಗುತ್ತಾಳೆ....ಎಲ್ಲಿಯೋ ಮಲಗುತ್ತಾಳೆ....ಎಲ್ಲಿಯೋ ಬೆಳೆಯುತ್ತಾಳೆ....ಅವಳ ಹಿಂದೆ ಕಟಿರೆ ಸಾಲಿನಂತೆ ಈ ಮಕ್ಕಳೂ ತಿರುಗುತ್ತವೆ.

....ನಾಲ್ಕು ಹಡೆದರೂ ಮಕ್ಕಳನ್ನ ಏಕೆ ಹಡೆದನೋ ಎಂಬ ಕೋಪ ವಿಲ್ಲ....ತಾಪವಿಲ್ಲ....ಅವಕ್ಕೂ ಒಬ್ಬ ದೇವರಿದ್ದಾನೆ........ನನಗೂ ಒಬ್ಬ ದೇವರಿದ್ದಾನೆ. ಬೆಳೆಯಲಿ ಎನ್ನುತ್ತಾಳೆ....

....ದೇವರು ಶಕ್ತಿ ನೀಡಿದರೆ ಇನ್ನೂ ಹತ್ತು ಹಡೆದಾಳು....ಆ ಶಕ್ತಿ ಅವಳಿಗಿದೆ....ಬಿಸಿಲಿನಲ್ಲಿ ಬೆಂದು ಜೀಗುದಿಪಟ್ಟು ಆಯಾಸದಿಂದ ರಾತ್ರಿ ಯಾವುದೋ ಅಂಗಡಿ ಸಾಲಿನಲ್ಲಿ ಮಲಗುತ್ತಾಳೆ........ನೊಂದ ಶರೀರದಲ್ಲಿ ಕಾವು ಏರಿದಾಗ....ರಕ್ತ ಬಿಸಿಯಾದಾಗ ಯಾವುದೋ ಶಕ್ತಿಯು ಒತ್ತಡವನ್ನು ಬಯಸುತ್ತಾಳೆ....ಅವಳ ಬಯಕೆಯು ಬಳ್ಳಿ ಪುರುಷಾಕಾರದ ರೂಪದಲ್ಲಿ ಕಣ್ಮುಂದೆ ಸುಳಿದು ಅವಳ ಮೈತಬ್ಬುತ್ತದೆ....ಅವನೂ ಬಯಸಿ ಬರುತ್ತಾನೆ....ಅವಳ ಕಾವೇರಿದ ಮೈಗೆ ತನ್ನ ಮೈಬೆರೆಸುತ್ತಾನೆ....ಕೂಡಿಸುತ್ತಾನೆ....ಅವಳೂ ತನ್ನ ಮೈಯನ್ನು ತೆರೆದು ಒಡ್ಡುತ್ತಾಳೆ....ಅಪರೂಪಕ್ಕೆ ಕಬ್ಬಿನ ಹೊರೆ ಕಂಡ ಆನೆಯಂತೆ ರಸ ಹೀರಿ....ರಕ್ತವಾದರೂ ಆಗಬಹುದು, ಬೆಳಕು ಹರಿಯುವುದರಲ್ಲೇ ಮಾಯವಾಗುತ್ತಾನೆ....

....ಬೆಳಕು ಹರಿದಮೇಲೆ....ಒಬ್ಬರಿಗೊಬ್ಬರ ಸಂಬಂಧವೇ ಇರುವುದಿಲ್ಲ....ಕೆಲವೊಂದು ವೇಳೆ ಯಾವನೋ ಬಯಸಿ....ಅರಸಿ....ಬಂದು....ಮೈ ಪಡೆದು ಒಂದೆರಡು ಆಣೆ ಹಾಕಿ ಹೊರಟುಹೋಗುತ್ತಾನೆ....ಆಗ ಕೈಕಾಲು, ನರಗಳು ನೋವು ಬಂದು, ಕಿತ್ತು ಬರುವಂತಾದರೂ ಚಿಂತಿಲ್ಲ ಸಹಿಸುವಳು ....ಅಳಲಾರಳು....ಅತ್ತರೆ ಕೇಳುವವರಾರು ?....

ಹಾಗೆ ಬಂದು ಹೋಗುವ ಪುರುಷಾಮೃಗಗಳು ಒಂದಾಗಬಹುದು.... ನೂರಾರಾಗಬಹುದು....ಅವಳ ಕರ್ಮಕ್ಕೆ ಯಾವುದೋ ಪುರುಷನಿಗೆ ಬಸಿರು ಹೊತ್ತು ನಿಲ್ಲುವಳು....ಬಸಿರು ಹೊರುವಳು....ಹಡೆಯುವಳು. ಹಡೆದ ಮಗುವಿಗೆ ಅಪ್ಪನ ಸುಳಿವಿಲ್ಲ....ಬಿಸಿಲು, ಮಳೆ, ಗಾಳಿಗಳ ಆರೈಕೆಯಿಂದ ....ಅಮ್ಮನ ಮೊಲೆ ಹಾಲಿನ ಋಣದಿಂದ ಬೆಳೆಯುತ್ತೆ....ಕೆಲದಿನ ಅಮ್ಮನನ್ನು ಕಚ್ಚಿ ಓಡಾಡುತ್ತೆ....ಅದು ಸ್ವಲ್ಪ ಬೆಳೆದಮೇಲೆ....ಬಾಯಲ್ಲಿ ಎರಡು ಹಲ್ಲು ಕಾಣಿಸಿದ ಮೇಲೆ....ಅದು ಎಲ್ಲೋ....ಇವಳು ಎಲ್ಲೋ....ಇಂಥ ದಿಕ್ಕೇಡಿ ಸಂತಾನವನ್ನು ದಿನನಿತ್ಯ ಸಹಸ್ರ ಕಾಣುತ್ತೇವೆ.

ಎಳೆ ಕೂಸು ಅವಳ ತೆರೆದ ಎದೆಯನ್ನು ಕಚ್ಚಿರುತ್ತೆ....ಮರ್ಮಾಂಗ ಮುಚ್ಚುವ ಮೊಳದುದ್ದದ ಬಟ್ಟೆಯನ್ನು ಹೊದ್ದು ಮನೆ ಮನೆಯನ್ನು ಅಲೆಯುತ್ತಾಳೆ....ಬಸ್‌ಸ್ಟ್ಯಾಂಡ್........ರೈಲ್ವೆ ನಿಲ್ದಾಣ........ಹೋಟೆಲ್

ಮುಂಭಾಗ....ಚೌಕ....ಸಾಲದ್ದಕ್ಕೆ ಮನೆಗಳ ಮುಂದೆ ಅವಳ ಮೆರವಣಿಗೆ ನಡೆಯುತ್ತದೆ....ಅವಳ ಬಗ್ಗೆ ದಯೆ ತೋರಿದವರು ತೋರಿದರು....ಇಲ್ಲ ದವರು ಇಲ್ಲ....ಅಂತೂ ಅವಳು ಜೀವನ ಸಾಗಿಸುತ್ತಾಳೆ....ಅವಳು ಜೀವಿ ಸಿರುವುದನ್ನು ನೋಡುವುದರಿಂದ ಜೀವನ ಸಾಗಿಸುತ್ತಾಳೆ ಎನ್ನಬಹುದು.

ಮೈ ಕೈ ತುಂಬಿ ಸಿಂಗರಿಸಿ, ಶಿಸ್ತಾಗಿ ಒನಪು ಒಯ್ಯಾರಗಳನ್ನು ಪ್ರದರ್ಶಿಸುತ್ತಾ ಹೊರಟ ಹೆಣ್ಣಿನ ಬಳಿಸ್ಸು ಕಂಡಾಗ ನಮಗಾಗುವ ಸಂತಸ ವೆಷ್ಟು ? ಬಳ್ಳಿಯಂತೆ ಅವಳನ್ನ ತಬ್ಬಬೇಕು ಎನ್ನಿಸುತ್ತೆ....ಆಗ ಆಗುವ ರಸೋತ್ಕರ್ಷವೆಷ್ಟು....ರಾಗೋದ್ದೀಪನಗಳೆಷ್ಟು ಬಗೆ....ಆದರೆ ತೆರದ ಎದೆ ಯಿಂದ ಬತ್ತಿದ ಸ್ತನಗಳನ್ನು ಕಂಡಾಗ....ಕೊಳಕು ತುಂಬಿದ ಭಿಕ್ಷುಕಿಯ ನ್ನು ನೋಡಿದಾಗ....ನಮಗೆಷ್ಟು ಅಸಹ್ಯ....ಅಪಹಾಸ್ಯ....ಬೇರು ಸಹಿತ ಕಿತ್ತ ಬಳ್ಳಿಯಂತೆ ನಮ್ಮ ಮನದ ಸುಪ್ತ ಚೇಷ್ಟೆಗಳೆಲ್ಲಾ ಮುದುಡಿಕೊಳ್ಳು ತ್ತವೆ.

....ಅದೂ ಹೆಣ್ಣೇ....ಇದೂ ಹೆಣ್ಣೇ....ಆದರೆ ಅದೆಷ್ಟು ಅಂತರ.... ಈ ಅಂತರ ದೈವಸೃಷ್ಟಿಯೇ ?........ಮಾನವ ಸೃಷ್ಟಿಯೆ ?........ಅದು ವಿಚಾರಾತೀತ....

ಆ ಬಡ ಹಸುಳೆಗಳನ್ನು ನೋಡಿದರೂ ಅಷ್ಟೇ....ಶ್ರೀಮಂತರ ಮಕ್ಕಳು ಅಂದವಾಗಿ ಅಲಂಕರಿಸಿಕೊಂಡು ಶಿಶುವಿಹಾರಕ್ಕೆ ತೆರಳುವಾಗ ಅದೆಷ್ಟು ಮುದ್ದು....ಅದೆಷ್ಟು ಅಪ್ಯಾಯಮಾನ....ಆದೇ ಈ ಮಕ್ಕಳನ್ನು ನೋಡಿದಾಗ ಅದೆಷ್ಟು ಅಸಹ್ಯ....ಭೀಭತ್ಸ....ಹಾಳು ಕಣ್ಣಿಗೆ ಅದೆಷ್ಟು ಬಗೆಯ ಭೇದಗಳು ಕಾಣಿಸುತ್ತವೆ....ಶ್ರೀಮಂತ....ಬಡವ........ಮಧ್ಯಮ ವರ್ಗದ....ಭಿಕಾರಿ....ಪರದೇಶಿ....ಬೇವಾರ್ಸಿ....ನಮ್ಮ ಭೇದಕ್ಕೆ ಅಂಕೆ-ಆತಂಕಗಳಿವೆಯೇ?....ಅವುಗಳನ್ನು ನಾನು-ನೀವು ವಿಚಾರ ಮಾಡಬಾರದು ಅಲ್ಲವೆ ?....ಅದಕ್ಕಾಗಿ ರಾಜಕಾರಣಿಗಳಿದ್ದಾರೆ !....ಸಮಾಜ ಸುಧಾರಕ ರಿದ್ದಾರೆ !....ನಮಗೇಕೆ ! ....ಹಾಗೆಂದು ನಾವು ಸುಮ್ಮನೆ ಕುಳಿತುಕೊಳ್ಳ ಬೇಕೆ ?!....

....ಮಾನವನಿಗೆ ಎಷ್ಟು ಬಗೆಯ ಆಸೆಗಳಿವೆ....ಧನಬೇಕು....ಮನೆ

ಮತಗಳು ಬೇಕು....ಗೌರವ ಬೇಕು....ಜ್ಞಾನಿಯಾಗಬೇಕು....ವಿಜ್ಞಾನಿಯಾಗಬೇಕು....ಮಂತ್ರಿಯಾಗಬೇಕು........ಅರಸನಾಗಬೇಕು........ಇಡೀ ವಿಶ್ವವೇ ತನ್ನದಾಗಬೇಕು. ಇದಕ್ಕಾಗಿ ನಿತ್ಯವೂ ನಮ್ಮ ಹೋರಾಟ ನಡೆಯುತ್ತಿದೆ....ಒಬ್ಬನ ಪ್ರಗತಿಯಿಂದ ಇನ್ನೊಬ್ಬನ ವಿಗತಿ....ಒಬ್ಬ ಧನಿಕನ ದೆಸೆಯಿಂದ ಹತ್ತು ಬಡಜನರ ಅವನತಿ ಅಧಃಪತನ.

ನನ್ನ ಮಾತನ್ನೇ ತೆಗೆದುಕೊಳ್ಳೋಣ....ನನ್ನ ತಂದೆ-ತಾಯಿಗಳು ಎಷ್ಟು ಪ್ರೀತಿಯಿಂದ ಸಾಕಿದ್ದಾರೆ....ಓದಿಸಿದ್ದಾರೆ....ಕಾಲೇಜು ಹತ್ತಿಸಿದ್ದಾರೆ ....ಬಿ.ಎ. ಪಾಸಾದ ತಕ್ಷಣ ಕೆಲಸ ಕೊಡಿಸುತ್ತಾರೆ....ಪ್ರೊಫೆಸರ್ ಕೆಲಸ ಸಿಕ್ಕರೂ ಸಿಕ್ಕಬಹುದು. ಆಮೇಲೆ ಮಂತ್ರಿಯಾಗಬಹುದು.... ಪುಣ್ಯವಿದ್ದರೆ ಪರದೇಶಕ್ಕೂ ಹೋಗಿ ಬರಬಹುದು....ಅದೆಷ್ಟು ಆಸೆಗಳು ! ....ಅವುಗಳು ಕೈಗೂಡಿದರೂ ಕೂಡಬಹುದು ಅಥವಾ ಮುಗಿಲು ಮಲ್ಲಿಗೆಯಂತೆ ಎಟಕದೆ ಇರಲೂಬಹುದು....ಆದರೂ ಆಸೆಯ ಮರೀಚಿಕೆಯನ್ನು ಹತ್ತಿ ಹೋಗುವುದು ಎಲ್ಲರಿಗೂ ಸಾಧ್ಯ....ನಾವೆಲ್ಲರೂ ಮಾಡುತ್ತಿರುವುದೂ ಅದೇ ಸದಾ ಆಸೆಯ ಚಿಂತೆ ...“ಹಸಿವಾದರೆ ಉಂಬುವ ಚಿಂತೆ....ಉಂಬುವುದಾದರೆ ಉಡುವ ಚಿಂತೆ . ತೊಡುವುದಾದರೆ ಹೆಂಡರ ಚಿಂತೆ....ಹೆಂಡರಾದರೆ ಮಕ್ಕಳ ಚಿಂತೆ....ಮಕ್ಕಳಾದರೆ....ಬದುಕುವ ಚಿಂತೆ....ಬದುಕುವುದಾದರೆ ಸಾವಿನ ಚಿಂತೆ”....ಹುಟ್ಟಿ ಸಾಯುವವರೆಗೂ ಚಿಂತೆ. ಚಿಂತೆಗೆ ಎಲ್ಲೆ ಇಲ್ಲ ....ಬೆಲೆ ಇಲ್ಲ. ನಾವು ಅದಕ್ಕೆ ಅಧೀನ....ಅವು ನಮಗೆ ಅಧಿಕಾರಿ.

ಈ ಎಲ್ಲ ಚಿಂತೆಗಳು ಇಂದು ಕತ್ತುಹಿಚುಕಿ ಹಾಕಿರುವ ಆ ತಾಯಿಗಿರಲಿಲ್ಲವೆ....?

....ಇದ್ದಿರಬಹುದು....ಇದ್ದರೂ ಅವಳು ಅಸಹಾಯಳಿರಬೇಕು.... ಸಮಾಜದ ಸಂಬಂಧವನ್ನು ಸಂಪೂರ್ಣ ಕಡಿದುಹಾಕುವ ಎದೆಗಾರಿಕೆ ಇಲ್ಲದೆ ಈ ಕೃತ್ಯ ನಡೆಸಿರಬೇಕು....ತೀರದ ಆಸೆ, ಅತೃಪ್ತಿ ಶಮನಕ್ಕಾಗಿ ವಿವಾಹ ಬಂಧನವಿಲ್ಲದೆ ಯಾರನ್ನೋ ಕೂಡಿರಬೇಕು....ಯಾರಿಗೋ ಬಸಿರು ಹೊತ್ತು ಹಡೆದಿರಬೇಕು....ಇಲ್ಲವಾದರೆ ಈ ಕೃತ್ಯವೇಕೆ ?

ಇಲ್ಲ....ಆ ಶಿಶುವನ್ನು ಹಡೆದ ತಾಯಿ ಭಿಕಾರಿ ಇರಬೇಕು....ಸಾಕುವ

ಶಕ್ತಿ ಇಲ್ಲದೆ ಕತ್ತು ಹಿಚುಕಿರಬೇಕು....ಅಂತೂ ಏನೋ ನಡೆದುಹೋಗಿದೆ ....ಅವನ್ನು ಪಾಪವೆಂದು ಕರೆಯಲಾರೆ....ಹಾಗೆಂದು ನಾನು ಎಂದರೆ ಆದೀತೇ ? ಸಮಾಜ ಪಾಪಮಾಡಿದ್ದಾಳೆ ಎನ್ನದೆ ಬಿಡುವುದೇ ?....

ನಾನು ಏನು ಕರುಣೆ, ಸಹಾನುಭೂತಿ, ವಿಶ್ವಾಸ ವ್ಯಕ್ತಪಡಿಸಿದರೇನು! ....ನಾನು ನೂರರಲ್ಲಿ ಒಬ್ಬ... ಸಹಸ್ರಾರು ಜನರಲ್ಲಿ ನಾನು ಅಣು....ಹತ್ತು ಜನರು ಪಾಪದ ಹಾದಿ ತುಳಿದರೆ ನಾನೂ ಅದನ್ನು ತುಳಿಯಬೇಕು.... ಅದನ್ನು ಪ್ರತಿಭಟಿಸಿ ನಿಲ್ಲಲಾರೆನು....ಅದೇ ಬಂಧನ....ಕಟ್ಟುನಿಟ್ಟಳ.... ಅದೇ ಕರ್ತವ್ಯ....ಇದು ಅನ್ಯಾಯವೆಂದು ಅಬ್ಬರಿಸಿದರೆ ಸಾಕು....ಸಮಾಜ ನಮ್ಮ ಕಡೆಗೆ ತನ್ನ ಕರಿ ನಾಲಗೆ ಚಾಚಿ ನುಂಗಿಬಿಡುತ್ತದೆ....ಯಾರಾದರೂ ಅಷ್ಟೇ. ಆ ದೃಶ್ಯವನ್ನು ನೋಡಿದ್ದರೆ ನನ್ನಂತೆ ಮನದಲ್ಲೇ ಮರುಗು ತ್ತಿದ್ದರೇ ವಿನಾ ಯಾರೂ ಬಾಯಿ ಬಿಟ್ಟು ತಮ್ಮ ವೇದನೆಯನ್ನು ವ್ಯಕ್ತ ಪಡಿಸುತ್ತಿರಲಿಲ್ಲ....ಕೆಲವು ವೇಳೆ ನಮ್ಮದು ಮೂಕಶೋಕ....

ಹಲವು ವೇಳೆ ನಾವು ದೇವರನ್ನು ಕೇಳಿಕೊಳ್ಳುತ್ತೇವೆ........ಈ ಅನ್ಯಾಯ....ಅತ್ಯಾಚಾರ....ಅಕೃತ್ಯವನ್ನು ನೋಡಲಾರೆವು ಬೇಗ ನಿನ್ನ ಪಾದದಡಿಗೆ ಸೇರಿಸಿಕೋ ಎಂದು ಗುಲಾಮರಂತೆ ಕೈಮುಗಿದು ಬೇಡುತ್ತೇವೆ ....ಆದರೆ ನಮಗೆ ಶಕ್ತಿನೀಡು....ಧೈರ್ಯೋತ್ಸಾಹಗಳನ್ನು ಕೊಡು........ ಅನ್ಯಾಯವನ್ನು ಎದುರಿಸಿ ನಿಲ್ಲುವ ಎದೆಗಾರಿಕೆ ಕೊಡು ಎಂದು ಯಾರೂ ಕೇಳುವುದಿಲ್ಲ....ಹಾಗೆ ಕೇಳಲು ಮೈಲಿ ವೀರ್ಯವಿರಬೇಕು........ನಾವು ನಿರ್ವೀರ್ಯರು....ಶಕ್ತಿಹೀನರು....ಸೋಮಾರಿಗಳು....ನಮಗೆ ಕೋಟಲೆ ಒದಗಿದಾಗ ಎದುರಿಸಿ ನಿಲ್ಲುವ ಶಕ್ತಿ ಬೇಕಿಲ್ಲ....ಅದು ನಮ್ಮ ಕಣ್ಣಿಗೆ ಕಾಣದಂತೆ ಕಣ್ಮರೆಯಾಗುವ ಪವಾಡಬೇಕು.

ನನ್ನ ತಲೆಯಲ್ಲಿ ಇದೇ ವಿಚಾರಗಳ ಗಿರಿಗಟ್ಟಲೆ ಸುತ್ತುತ್ತಿತ್ತು.... ಕಾಲೇಜು ಬೆಲ್ಲು ಬಾರಿಸಿತು. "ಪಾಲಿಟಿಕ್ಸ್" ಪ್ರಾಧ್ಯಾಪಕರು ಉಪನ್ಯಾಸ ನಿಲ್ಲಿಸಿ ಹೊರಟರು, ಅವರ ಹಿಂದೆ ಹುಡುಗ ಹುಡುಗಿಯರೆಲ್ಲ ಹೊರಟರು. ಕೆಲವರು ಅವರ ಬೆನ್ನುಹತ್ತಿ ತಿಳಿಯದ ಹಲವು ಅಂಶಗಳನ್ನು ಕೇಳುತ್ತಿದ್ದರು.

ನಾನು ಆಗತಾನೆ ತಲೆಯಲ್ಲಿ ಸುತ್ತುತ್ತಿದ್ದ ವಿಚಾರ ಸುಳಿಯಿಂದ

ತಪ್ಪಿಸಿಕೊಂಡು ಬಾಹ್ಯ ಜಗತ್ತನ್ನು ಈಕ್ಷಿಸುತ್ತಿದ್ದೆ. ಎಲ್ಲರ ಹಿಂದೆ ನಾನೂ ಒಬ್ಬನಾಗಿ ಹೊರಟು ಬಂದೆ ಬೋರ್ಡಿನ ಮೇಲೆ ''Fall of Rome'' ಎಂದು ಬರೆದಿದ್ದು ರಾರಾಜಿಸುತ್ತಿತ್ತು, ನನ್ನ ತಲೆಯ ಬೋರ್ಡಿನಲ್ಲಿ ''Fall of humanity, Fall of morality'' ಎಂದು ಯಾರೋ ಬರೆಯುತ್ತಿದ್ದರು.

ಬೆಳಕು ಹರಿಯಿತು. ದೈನಂದಿನ ಪತ್ರಿಕೆಯೊಂದು ಮನೆಗೆ ಬಂದಿತು. ತೆರೆದು ಓದಿದೆ. ನಮ್ಮೂರಿನ ಸುದ್ದಿಗಾರರು ವರದಿಮಾಡಿದ್ದು ಈ ರೀತಿ ಅಚ್ಚಾಗಿತ್ತು. "ನಾಲ್ಕು ದಿನಗಳ ಹಿಂದೆ ಇಲ್ಲಿಯ ಜನರಲ್ ಆಸ್ಪತ್ರೆಯಲ್ಲಿ ಹೆರಿಗೆಯಾದ ಹೆಂಗಸೊಬ್ಬಳನ್ನು ಗಂಡನ ವಿಳಾಸ ಕೇಳಿದ್ದಕ್ಕೆ ಸರಿಯಾಗಿ ತಿಳಿಸದೆ ನಿನ್ನೆ ರಾತ್ರಿ ಆಕೆ-ಮಗು, ಮತ್ತು ಆಕೆಯ ಜೊತೆ ಬಂದಿದ್ದವರು ಅಪ್ಪಣೆಯಿಲ್ಲದೆ ಓಡಿಹೋಗಿರುವರೆಂದು ತಿಳಿದುಬಂದಿದೆ" ಎಂದಿತ್ತು. ಅದರ ಕೆಳಗೆ "ಊರಿನ ಸ್ಮಶಾನದ ಆಲದ ಮರದ ಬುಡವಲ್ಲಿ ಯಾರೋ ಹಡೆದ ಮಗುವೊಂದನ್ನು ಕತ್ತು ಹಿಚುಕಿ ಹಾಕಿರುವರೆಂದು, ಪ್ರಾಯಶಃ ಅದು ವ್ಯಭಿಚಾರದ ಶಿಶುವಿರಬಹುದೆಂದು ಊಹಿಸಲಾಗಿದೆ ಎಂದು ತಿಳಿದುಬಂದಿದೆ. ಪೋಲೀಸರು ತನಿಖೆಯಲ್ಲಿದ್ದಾರೆ" ಎಂದಿತ್ತು.

ಹಾಗೇ ನೋಡುವಾಗ ಇನ್ನೊಂದುಕಡೆ ಈ ರೀತಿ ಅಚ್ಚಾಗಿತ್ತು. "ನೆನ್ನೆದಿನ ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಗಾಡಿಯಲ್ಲಿ ಮದ್ದೂರು ಬಳಿ ಯಾರೋ ಹೆಂಗಸು ಮೂರು ತಿಂಗಳ ಮಗುವನ್ನು ತೊಟ್ಟಿಲಲ್ಲಿ ಬಿಟ್ಟು ಹೊರಟುಹೋದಳೆಂದು, ಪೋಲೀಸರು ಮಗುವನ್ನು ವಶಕ್ಕೆ ತೆಗೆದುಕೊಂಡಿರುವರು" ಎಂದಿತ್ತು. ಓದಿದೆ. ಓದಿ ಮೂಕನಾದೆ.



# ಕಲೆಯ ಕೊಂದ ಕಲಾವಿದೆ

ಹೆಣ್ಣಿನ ಕಡೆಯ ಎಲ್ಲರಿಗೂ ಕೋಪ ಬಂದಿತ್ತು.

ಕಳೆದ ಎರಡು ದಿನಗಳಿಂದಲೂ ನಡೆದ ಮಾತುಕತೆ-ವಧು ವರರ ಸಂದರ್ಶನ-ನಂಟಸ್ತಿಕೆ, ಕುಲ, ಗೌರವಗಳ ಸೂಕ್ಷ್ಮಪರಿಶೀಲನೆ-ಕೊಟ್ಟು, ತರುವ ವ್ಯವಹಾರಿಕ ಮಾಲುಗಳೆಲ್ಲಾ ಮುಗಿದು-ವಧುವನ್ನು ವರನು ನೋಟದ ಮೇಲೆ ಮರುನೋಟ ನೋಡಿ-ಕೊನೆಯ ಕಿರುನೋಟವೂ ಆಗಿ-ಔತಣಗಳ ಮೇಲೆ ಔತಣಗಳು ನಡೆದು; ವರನ ಒಪ್ಪಿಗೆ ಮುದ್ರೆ ಪಡೆದಾಗಿತ್ತು. ಸಕಲವರಲ್ಲೂ ಸಂತೃಪ್ತಿ ಹೊಂದಿದ ವರನ ಕಡೆಯವರು ನಿಶ್ಚಿತಾರ್ಥಕ್ಕೆ ಸಿದ್ಧರಾಗಿ ಅಂದೇ ನಿಷ್ಕರ್ಷೆ ಮಾಡಿಕೊಳ್ಳುವರಾಗಿದ್ದರು.

ಈ ಮದುವೆಯ ಮಾತುಕತೆ ವಧುವಿನ ಕಡೆಯವರಿಗಿನ್ನ ವರನ ಕಡೆಯವರಿಗೇ ಹೆಚ್ಚು ಆನಂದ ತಂದಿತ್ತು, ಕಳೆದ ಸುಮಾರು ವರುಷ ಗಳಿಂದ ಮದುವೆ ಬೇಡವೆಂದು ಪಟ್ಟು ಹಿಡಿದಿದ್ದ ಜಟ್ಟಿ ಒಮ್ಮೆಗೆ ಒಪ್ಪಿಗೆ ಯನ್ನಿತ್ತಿದ್ದ. ವಧುವನ್ನ ನಾಲ್ಕಾರು ಬಾರಿ ನೋಡಿದ್ದ ಇಂದುಧರ ತುಲನೆಮಾಡಿ-ಲೆಖ್ಖಹಾಕಿ-ಎಣಿಸಿ ಎಣಿಸಿ ಕೊನೆಯ ಒಪ್ಪಿಗೆ ನೀಡಿದ್ದ. ಇಂದುಧರ ಮದುವೆಗೆ ಒಪ್ಪಿದುದೆ ಹೆಚ್ಚಿನ ಸಂಗತಿಯಾದರೂ ವಧು ವರನ ಮನಕ್ಕೆ ಬಂದುದು ಅತ್ಯಂತ ಚಿದಂಬರ ರಹಸ್ಯವಾಗಿತ್ತು.

ಈ ಸಂಬಂಧವನ್ನು ಹೊಂದಿಸಲು ಕಾರಣಪುರುಷನಾದ ವರನ ಸ್ನೇಹಿತ-ವಧುವಿನ ಸಂಬಂಧಿ ಪ್ರಸಾದ್‌ಗೆ ಎಲ್ಲರೂ ಕೃತಜ್ಞತೆಯನ್ನು ಸಲ್ಲಿಸಿದರು- ವಧುವಿನ ಕಡೆಯವರಂತೂ ನಾವು ಋಣಿಗಳೆಂದು ಜೀವ ಹಿಡಿಯಲ್ಲಿ ಹಿಡಿದು ಹೇಳತೊಡಗಿದ್ದರು.

ಆದರೆ ಇಂದು ಬೆಳಿಗ್ಗೆ ಬಂದ ವಾರ್ತೆ ಎಲ್ಲರ ಮನದಲ್ಲೂ ಭೂಕಂಪ ವಾಗಿಸಿತ್ತು.

ಸ್ವತಃ ವರನೇ ಈ ಮದುವೆ ಬೇಡ ನಿಲ್ಲಿಸಿಬಿಡಿರೆಂದು ಹೇಳಿರುವುದು ಕೇಳಿ ಹೆಣ್ಣಿನ ಕರುಳಿನ ಸಂಬಂಧ ಪಡೆದ ಎಲ್ಲರೂ ದಗ್ಧಗೊಂಡು ಕಿಡಿ ಕಿಡಿಯಾದರು. ಕೋಪಗೊಂಡು ಕನಲಿದರು–ಗುಡುಗಿದರು.

"ಇದೇನು ಮಕ್ಕಳ ಗೊಂಬೆಯಾಟವೇ ಹೆಣ್ಣು ನೋಡುವುದೆಂದರೆ ? ನಮ್ಮ ಹೆಣ್ಣಲ್ಲಿ ಯಾವ ಹುಳುಕು ಕಂಡು ಬೇಡವೆಂದ ? ಹೆಣ್ಣಿನ ಚಾರಿತ್ರ ಕೆಟ್ಟದೆಯೆ ? ಕಪ್ಪೇ ? ಕುಂಟೇ ? ಕುರುಡೇ ? ಮಂಕೇ ? ಯಾವುದು ಊನ ! ವಂಶೀಕರಿಗೆ ಸರಿಯಲ್ಲ ಈ ಮಾತುಗಳು....!"

ಬಾಯಿಗೆ ಬಂದ ಮಾತು ಬಂದ ಹಾಗೇ ಆಡಿದರು; ಈ ಎರಡೂ ದಿನವೂ ಪುಷ್ಕಳ ಭೋಜನಮಾಡಿ ತೇಗಿದ್ದ ವಧುವಿನ ಸಂಬಂಧಿಗಳು. ಮದುವೆಯು, ಕನಿಷ್ಠ ಅಂದರೆ ಒಂದು ವಾರದ ಊಟಕ್ಕೆ ಚ್ಯುತಿ ಬಂತಲ್ಲ ಎಂದು ಅಬ್ಬರಿಸಿದರು ಹಲವರು.

ಈ ಸುದ್ದಿ ಕೇಳಿದ ವರನ ತಂದೆ-ತಾಯಿಗಳೇ ದಿಕ್ಕುತೋಚದಾದರು. ಇಂದುಧರನ ಅಭಿಪ್ರಾಯಕ್ಕೆ ಎದುರು ಹೇಳುವ ಮನುಷ್ಯರಿರಲಿಲ್ಲ; ಒದ ಲಿಸುವ ಭೂಪರಿರಲಿಲ್ಲ. ಮುಂದೇನು ? ಹೆಣ್ಣಿನ ಕಡೆಯವರಿಗೆ ಮುಖ ತೋರಿಸುವುದು ಹೇಗೆಂದು ತಬ್ಬಿಬ್ಬಾದರು ಮಾನಕ್ಕೆ ಅಂಜಿದ ಮಾತಾ ಪಿತೃಗಳು.

ಈ ನಾಟಕದ ಸೂತ್ರಧಾರಿ ಪ್ರಸಾದನೆ ಇಂದುಧರನ ಬೇಜವಾಬು ದಾರಿ ಮಾತು ಕೇಳಿ ಕಂಗಾಲಾದನು. ಆ ಕ್ಷಣ ಅವನ ಮೈ ಕಾವೇರಿತು- ಕಣ್ಣು ಕೆಂಪಾದವು- ಕೋಪದ ಕೈಲಿ ತಾನು ಹೋದನು.

ಕೆಲಹೊತ್ತಿನಲ್ಲೇ ತಿಳಿಯಿತು ಬಡವನ ಕೋಪ ಅವನ ದವಡೆಗೆ ಮೂಲವೆಂದು. ಪ್ರಸಾದನು ಏನೂ ಮಾಡಲಾಗಿದ್ದ. ಇಂದುಧರ ನಿರ್ಧಾರ ಮಾಡಿಯಾಗಿತ್ತು. ಅವನ ನಿರ್ಧಾರ ಶಿಲ್ಪಿ ಕಡೆದ ವಿಗ್ರಹದಂತೆ ಸ್ಪಷ್ಟ ವಾಗಿತ್ತು.

ಎಲ್ಲಕ್ಕೂ ಹೆಚ್ಚಿನದಾಗಿ ಮದುವೆಯಾಗಲಿರುವ ಕನ್ಯೆ ಸುಗುಣಳ

ಮೂಕವೇದನೆ ಪ್ರಸಾದನ ಕರುಳು ಕಿವಿಚಿತು. ಚಿಕ್ಕಂದಿನಿಂದಲೂ ನೋಡಿದ್ದ ಸುಗುಣಳನ್ನು. ದೇವತಾ ಗುಣಗಳು ಅವಳವು. ಅಂಥ ಗುಣವತಿ-ಸ್ವಪ್ನಜೀವಿ-ಭಾವನಾ ಲೋಕದಲ್ಲಿರುವ ಮುಗ್ಧ ಕನ್ಯೆಯ ಮನಸ್ಸಿನ ಮೇಲೆ ಆಗಿರುವ ಆಘಾತದ ಆಳ ಎಷ್ಟೆಂದು ಊಹಿಸದಾಗಿದ್ದ ಪ್ರಸಾದ್.

ಈ ಮದುವೆ ನಿಂತರೆ ಪ್ರಪಂಚವರಿಯದ ಹೆಣ್ಣಿನ ತಲೆ ಮೇಲೆ ನಾನೇ ಕಲ್ಲು ಹಾಕಿದಂತೆ ಅಲ್ಲವೆ? ತಾನು ಹಿಡಿದ ಹಾವು ತನ್ನನ್ನೇ ಕುಟುಕಿತ್ತು. ಪ್ರಸಾದ್ ಚಿಂತನೆಯ ಸಾಗರದಲ್ಲಿ ಮುಳುಗಿದ್ದ.

ಏನಾದರೂ, ಹೇಗಾದರೂ, ಈ ಮದುವೆ ಮಾಡಿಸಿಯೇ ತೀರಬೇಕು. ಇದಕ್ಕಾಗಿ ಕೊನೆಯ ಪ್ರಯತ್ನ ಮಾಡಿಯೇ ತೀರುತ್ತೇನೆ, ಕಡೆಗೆ ಇಂದುಧರನ ಕಾಲು ಹಿಡಿದರೂ ಶಕ್ಯವೆ. ಮದುವೆಗೆ 'ಹೂಂ' ಅನ್ನಿಸಬೇಕೆಂದು ನಿರ್ಧರಿಸಿ ಹೊರಟ. ಆ ನಿರ್ಧಾರದಲ್ಲಿ ದ್ರೌಪದೀ ಧೈರ್ಯವಿತ್ತು-ಭೀಷ್ಮ ಪ್ರತಿಜ್ಞೆಯಿತ್ತು. ಗೋಡೆಯ ಮೇಲೆ ಹಲ್ಲಿಯೊಂದು ಲೊಚಗುಟ್ಟಿತು. ಪ್ರಸಾದ್ ಮನದಲ್ಲಿ ಆನಂದದ ತೆರೆಗಳನ್ನು ತುಂಬಿಕೊಂಡು ಇಂದುಧರನನ್ನು ಕಾಣಲು ಹೊರಟ.

ಪ್ರಸಾದ್ ಬಂದಾಗ ಇಂದುಧರ ರೂಮಿನಲ್ಲಿ ಶತಪಥ ಹಾಕುತ್ತಲಿದ್ದ. ಅವನ ಕುಲ-ಛಲ-ಗೌರವಗಳು ಕೆಣಕಿದ ಸರ್ಪಗಳಂತೆ ಹೆಡೆಯೆತ್ತಿ ಬಡಿಯುತ್ತಿದ್ದುವು. ತಾನೊಬ್ಬ ಎಲ್ಲರಿಗೂ ಅತೀತನಾಗಿ-ನುಂಗಲಾರದ ತುತ್ತಾಗಿ-ಸಿಗಿಯಲಾರದ ಕಬ್ಬಾಗಿ-ಕೆತ್ತಿದಂತೆಲ್ಲಾ ಸಿಬಿರು ಎನ್ನುವಂತಾಗಿದ್ದೇನೆಂದು ಭಾವಿಸಿದ.

"ಇಂದುಧರ ! ಇದು ನಿನ್ನ ಕೊನೆಯ ನಿರ್ಧಾರವೇನು ?" ಪ್ರಸಾದ್ ಮೌನದ ಮೈ ಸೀಳಿ ಮಾತಾಡಿದನು.

"ಹೌದು !"

"ಇನ್ನೊಮ್ಮೆ ಯೋಚಿಸಿ ನೋಡು !"

"ಸಾವಿರಬಾರಿ ಯೋಚಿಸಿ ನಿರ್ಧಾರದ ದಡ ಹಿಡಿದಿದ್ದೇನೆ"

"ಬೇಡ ಎನ್ನಲಿಕ್ಕೆ ಹೆಣ್ಣಿನ ಚಾರಿತ್ರದಲ್ಲಿ ಕುಂದು ಕಂಡೇನು ?"

ಪ್ರಸಾದ್ ಚಿಂತಿಸಿ ಕೇಳಿದನು.

"ಛೇ ! ವಂಶೀಕರ ಮಕ್ಕಳಲ್ಲಿ ತಪ್ಪನ್ನು ತಡಕಿ ಯಾವ ಪಾಪಕ್ಕೆ ಹೋಗಲಿ ?"

"ಹಾಗಾದರೆ ವರದಕ್ಷಿಣೆ-ವರೋಪಚಾರದ ಬಗ್ಗೆ ಅಪಚಾರವಾಯಿತೇನು ?"

"ನಾವು ಅಂಥವುಗಳ ಆಸೆಬುರಕನಲ್ಲವೆಂದು ನಿನಗೆ ತಿಳಿದಿಲ್ಲವೇ ?"

"ಹಾಗಾದರೆ, ಎಲ್ಲರೂ ಒಪ್ಪಿ, ನೀನೂ ಸಮ್ಮತಿ ಇತ್ತು, ನಿಶ್ಚಯ ನಿಮಿಷ ಹತ್ತಿರವಾದಾಗ ಬೇಡ ಎನ್ನಲು ಕಾರಣವೇನು ? ಈ ನಿರ್ಧಾರಕ್ಕೆ ಬರುವ ಮುನ್ನ ಆ ಬಡ ಹೆಣ್ಣಿನ ಭವಿಷ್ಯವೇನೆಂದು ಯೋಚಿಸಿದೆಯಾ ? ಗೊತ್ತಾದ ವರ ಬೇಡ ಎನ್ನಲಿಕ್ಕೆ ಕಾರಣವೇನೆಂದು ಮುಂದೆ ಬರಲಿರುವ ನಿನ್ನಂಥ ವರ ಸಂತತಿಗೆ ಹೇಳುವುದಾದರೂ ಏನು ? ಇದಕ್ಕಿಂತ ಆ ಹುಡುಗಿಯ ತಲೆಯ ಮೇಲೇಕೆ ಕಲ್ಲು ಹಾಕಬಾರದಿತ್ತು." ಪ್ರಸಾದ್ ಉದ್ವೇಗದಿಂದ ನುಡಿದ.

"ಈ ಬಗ್ಗೆ ಹೆಚ್ಚು ಪ್ರಶ್ನಿಸಿ ನೋಯಿಸಬೇಡ ಪ್ರಸಾದ್ ನನ್ನ ತಪ್ಪಿಗೆ ಏನು ದಂಡ ಬೇಕಾದರೂ ತೆರಲು ಸಿದ್ಧ" ಇಂದುಧರ ವ್ಯಾಕುಲದಿಂದ ಚೀರಿದ.

"ನಿನ್ನದು ಅಕ್ಷಮ್ಯ ಅಪರಾಧ ಇಂದುಧರ ! ಅಡಕೆಗೆ ಹೋದ ಮಾನ ಆನೆ ಕೊಟ್ಟರೆ ಬಾರದು. ಮತ್ತೊಬ್ಬರಿಗೆ ದುಃಖ ಕೊಟ್ಟು ಯಾವ ಮನುಷ್ಯನೂ ಸುಖದಿಂದಿರಲಾರ. ನಿನಗೆ ಆಗಿರುವುದಾದರೂ ಏನು ಸ್ಪಷ್ಟವಾಗಿ ಹೇಳಬಾರದೆ !"

"ನಿನ್ನೆ ಏಕೆ ಆ ಹುಡುಗಿಯ ಸರ್ಟಿಫಿಕೇಟುಗಳು-ಭಾವಚಿತ್ರಗಳನ್ನ ತೋರಿಸಿದೆ ?"

"ಯಾವುವು ! ಆ ಹುಡುಗಿಯ ನರ್ತನದ ಪ್ರಶಸ್ತಿಪತ್ರಗಳು ಮತ್ತು ಫೋಟೋಗಳು ತಾನೆ ?"

"ಹೌದು ! ಅವುಗಳೇ !"

"ಇಂದುಧರ ! ನೀನೆಂಥಾ ಅವಿವೇಕಿ ! ಆಕೆ ಬೆಳೆಸಿಕೊಂಡಿರುವ

ಕಲೆ ಕಂಡು ಹಿಗ್ಗಬೇಡವೆ ?"

"ಆ ಕಲೆಯೇ ನಮ್ಮ ಮದುವೆಗೆ ಕೊಡಲಿಯಾಗಿದೆ !"

"ಇಂದುಧರ ! ಏನು ಮಾತು ನಿನ್ನವು ! ಎಲ್ಲಾ ವಿಚಿತ್ರ !!.... ನಿನಗೆ ತಲೆ ಕೆಟ್ಟಿಲ್ಲತಾನೆ ?" ಪ್ರಸಾದ್ ವ್ಯಗ್ರನಾಗಿ ನುಡಿದ.

"ಹೌದು ! ನನಗೂ ಅದೇ ಯೋಚನೆಯಾಗಿದೆ ನನ್ನ ತಲೆ ಏಕಿನ್ನು ಕೆಟ್ಟಿಲ್ಲವೆಂದು. ಯಾವ ಭೂತವನ್ನು ಕಂಡು ಹೆದರಿ ನಡುಗುತ್ತಿದ್ದೆನೋ ಇಂದು ಅದೇ ಭೂತವನ್ನು ಆಲಂಗಿಸು ಎನ್ನುತ್ತಿರುವಿರಿ. ಕೈಗೆ ಕೊಳ್ಳಿ ಕೊಟ್ಟು ತಲೆ ತುರಿಸಿಕೋ ಎನ್ನುತ್ತಿರುವಿರಿ ! ಪ್ರಸಾದ್ ! ನಮ್ಮ ಮನೆಗೂ-ಕಲೆಗೂ ಜನ್ಮಾಂತರ ವೈರ. ಕಲೆಯ ದೆಸೆಯಿಂದಲೇ ಎರಡು ಜೀವಂತ ವ್ಯಕ್ತಿಗಳ ಕೊಲೆಯಾಗಿದೆ ! ಮತ್ತೆ ಹೇಗೆ ಅದನ್ನೇ ಸ್ವಾಗತಿಸಲಿ. ಈ ಮಾತು ಎಲ್ಲರಿಗೂ ವಿಚಿತ್ರ. ಆದರೆ ಇದೇ ನನ್ನ ಏಕಮೇವ ಪ್ರಶ್ನೆಯಾಗಿದೆ !"

"ಇಂದುಧರ! ನಿನ್ನ ಮಾತುಗಳು ಬೆಕ್ಕಿಗೆ ಚಳಿ-ಜ್ವರ ಬಂದಹಾಗಿವೆ ! ಹೋಗಲಿ ಈ ವಿಚಿತ್ರದ ಮರ್ಮವೇನು ಹೇಳಬಾರದೆ ?"

"ಈಗ ಹೇಳಲೇಬೇಕಾದ ಪರಿಸ್ಥಿತಿ ಬಂದಿದೆ. ಹೇಳಿದರೆ ನನ್ನ ಜೀವಿತದ ಪ್ರಶ್ನೆ. ಹೇಳದಿದ್ದರೆ ನನ್ನ ಜೀವನವ ಕಗ್ಗೊಲೆ ಅಯ್ಯೋ ! ಎಂಥ ಸಂದಿಗ್ಧ ಸ್ಥಿತಿ ಇದು !"

ಇಂದುಧರನ ಕಣ್ಣಲ್ಲಿ ನೀರು ಧುಮುಕಿದವು.

ನೀರು ಬಿದ್ದ ಸುಣ್ಣದ ಹರಳಿನಂತೆ ಇಂದುಧರ ತನ್ನೊಳಗೆ ತಾನೆ ಬೇಗುದಿಪಡುತ್ತಿರುವುದು ನೋಡಿ ಇಕ್ಕಳಕ್ಕೆ ಸಿಲುಕಿದ ಇಲಿಯಂತೆ ಸಂಕಟಕ್ಕೆ ಈಡಾದ ಪ್ರಸಾದ್ ! ಎಷ್ಟು ಯೋಚಿಸಿದರೂ ಇಂದುಧರನಿಗೆ ಏನಾಗಿದೆ ಎಂದು ತಿಳಿಯದಾಗಿತ್ತು.

ಇಂದುಧರ ತುಸು ಸಮಯ ನೀರವನಾಗಿದ್ದ. ದುಃಖ ತುಂಬಿಬಂದು ಅವನ ಬಾಯಿ ಕಟ್ಟಿತ್ತು. ಕುರ್ಚಿಯೊಂದರಲ್ಲಿ ಕುಳಿತು ಕೆಲವು ನಿಮಿಷಗಳು ಎದುರು ಗೋಡೆಯನ್ನೇ ದಿಟ್ಟಿಸಿದನು. ಕಣ್ಣುಗಳು ಕೆಂಡವಾಗಿದ್ದುವು. ಮುಖ ಕೆಂಡವನ್ನು ಮುಚ್ಚಿಕೊಂಡ ಬೂದಿಯಂತೆ ಗಂಭೀರವಾಗಿತ್ತು.

"ಪ್ರಸಾದ್ ! ಏನಾದರೂ ಬೇರೆ ಕೆಲಸವಿತ್ತೆ ?" ಇಂದುಧರ ಮಾತ ನಾಡಿದನು.

"ಅಂ ! ಏಕೆ ?" ಪ್ರಸಾದ್ ಬೆಚ್ಚಿಬಿದ್ದು ಕೇಳಿದನು.

"ಏತಕ್ಕೂ ಇಲ್ಲ ! ನಾನೀಗ ಕಥೆ ಪ್ರಾರಂಭಿಸಿದರೆ ಅದು ಉದ್ದವಾಗಿ ನಿನ್ನ ಕೆಲಸ ಹಾಳಾಗಬಾರದು ?"

"ನಾನು ನಿನ್ನ ಕಡೆಗೇ ಬಂದವನು ಇದಕ್ಕಿಂತ ಹೆಚ್ಚಿನ ಕೆಲಸ ಸಧ್ಯ ದಲ್ಲಿ ನನಗಾವುದೂ ಇಲ್ಲ !"

ಇಂದುಧರ ಮತ್ತೆ ನೀರವನಾದ. ಕಣ್ಣಿಂದ ಧುಮುಕುವ ಕಣ್ಣೀರನ್ನು ಕರವಸ್ತ್ರದಿಂದ ಒತ್ತಿ

"ಪ್ರಸಾದ್! ನಾನು ಡಿಗ್ರಿ ತರಗತಿಯಲ್ಲಿರುವಾಗ ನನ್ನ-ನಿನ್ನ ಗೆಳೆತನ ವಾದುದು ಅಲ್ಲವೆ ?"

"ಹೌದು ! ಏಕೀಗ !?

"ಸುಮ್ಮನೆ ಕೇಳಿದೆ ಅಷ್ಟೆ ! ಈಗ ನನ್ನ ಬಗ್ಗೆ ನೀನೆಷ್ಟು ತಿಳಿದಿರು ವೆಯೋ ಅದು ಕೇವಲ ಸ್ವಲ್ಪ.

ನೀನು ಭಾವಿಸಿರುವಂತೆ ನಾನೊಬ್ಬನೇ ಅಲ್ಲ ನಮ್ಮ ತಂದೆಗೆ ಪುತ್ರನು, ನನ್ನಗಿನ್ನ ಆರೇಳು ವರುಷ ಹಿರಿಯನಾದ ಪರಶಿವಮೂರ್ತಿ ಯೆಂಬ ಅಣ್ಣನಿದ್ದ. ಆತನನ್ನು ನಾವೆಲ್ಲರೂ ಮೂರ್ತಿಯೆಂದೇ ಕರೆಯು ತ್ತಿದ್ದೆವು.

ನನಗೂ ಆತನಿಗೂ ಕೇವಲ ವರುಷಗಳಲ್ಲೇ ಅಲ್ಲ ಗುಣದಲ್ಲೂ ಅಂತರವಿತ್ತು. ಅವನ-ನನ್ನ ಸಂಬಂಧ ಆತ್ಮೀಯ ಅಣ್ಣ-ತಮ್ಮಂದಿರ ವಾತ್ಸಲ್ಯವಾಗಿರಲಿಲ್ಲ. ಆತ ಅಣ್ಣ-ನಾನು ತಮ್ಮನೆಂಬ ಸ್ವಾಮಿ-ಸೇವಕನ ಭಾವನೆ ನಮ್ಮಲ್ಲಿ ಬೆಳೆದಿತ್ತು. ಈ ಅಂತರಕ್ಕೆ ಅವನ ಸ್ವಭಾವವೇ ಕಾರಣ.

ಅವನು ವಾಚಾಳಿಯಲ್ಲ-ಮಿತಭಾಷಿ. ಬಹಳ ಮೃದು ಮತ್ತು ಸಂಕೋಚದ ಸ್ವಭಾವ ಅವನದು. ನನಗೆ ತಿಳಿಸಿದಮಟ್ಟಿಗೆ ಅವನಿಗೆ ಸ್ನೇಹಿತರೇ ಇರಲಿಲ್ಲ. ಇದ್ದರೂ ತನ್ನ ತರಗತಿ ಮತ್ತು ಪಾಠ-ಪ್ರವಚನ ಗಳ ಸಂಬಂಧದ ಸ್ನೇಹವೇ ವಿನಾ ಆತ್ಮೀಯತೆ ಯಾರಲ್ಲಿಯೂ ಬೆಳೆಸಿರಲಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಅವನು ಸಂಘಜೀವಿಯಲ್ಲ-ವ್ಯಕ್ತಿಜೀವಿ.

ತಾನಾಯಿತು ತನ್ನ ಗಣಿತ-ಫಿಸಿಕ್ಸ್ ಆಯಿತು. ಒಂಮಮೇಳೆ ಈ ಲೋಕದಲ್ಲಿ ಅವನಿಗೆ ಬೇಕಿದ್ದ ವಸ್ತುವೆಂದರೆ ತಾಯಿಯುವರೊಬ್ಬರೆ. ಕಾಂಗರು ಮರಿ ಇದ್ದಹಾಗೆ. ಅವರು ಎರಡುದಿನ ಊರಲ್ಲಿ ಇಲ್ಲದಿದ್ದರೆ ಅವನ ಸ್ಥಿತಿ ದುಃಸ್ಥಿತಿಯಾಗಿ ಎಲ್ಲವೂ ಏರುಪೇರಾಗುತ್ತಿತ್ತು. ತಂದೆಯವರ ಎದುರಿನಲ್ಲಿ ಆತ ಮಾತನಾಡಿದುದೇ ಇಲ್ಲ. ಫೀ-ವಗೈರೆಗೆ ಹಣ ಬೇಕಾದರೂ ಅಮ್ಮನ ರಾಯಭಾರವಿಲ್ಲದೆ ನಡೆದುದೇ ಇಲ್ಲ.

ಓದಿನಲ್ಲಿ ಅಣ್ಣ ಬುದ್ಧಿವಂತನಾಗಿದ್ದ. ಎಲ್ಲ ಪಬ್ಲಿಕ್ ಪರೀಕ್ಷೆಯಲ್ಲೂ ಆತನಿಗೇ ಮೀಸಲು ಮೊದಲದರ್ಜೆ. ಇಂಜಿನಿಯರಿಂಗ್ ಪರೀಕ್ಷೆ ಫಲಿತಾಂಶ ಬರುವ ಮುನ್ನವೇ ಆತನಿಗೆ ಯಾವುದೋ ಪ್ರಾಜಕ್ಟ್ ಒಂದರಲ್ಲಿ ಕೆಲಸಕ್ಕೆ ಆರ್ಡರ್ ಬಂದಿತ್ತು.

ನನಗೆ ಗಣಿತ ಕೈಕೊಟ್ಟಾಗ ಅಣ್ಣನ ಎದುರು ನಿಲ್ಲುತ್ತಿದ್ದೆ. ಲೆಖ್ಖ ಬಿಡಿಸುವುದರಲ್ಲಿ ನಿಸ್ಸೀಮ ಆತ. ಫಾರಮುಲಾಗಳೆಲ್ಲಾ ಯಾವಾಗಲೂ ಆತನ ಬಾಯಿ ಬುಡದಲ್ಲೇ ಇರುತ್ತಿದ್ದವು. ಆತ ಲೆಖ್ಖ ಹೇಳಿಕೊಡುವು ದಲ್ಲದೆ ತಪ್ಪಿ ಕೂಡ ಬೇರೊಂದೂ ಮಾತಾಡುತ್ತಿರಲಿಲ್ಲ. ಅಷ್ಟು ಏಕಾಗ್ರತೆ ಇತ್ತು ಆತನಲ್ಲಿ.

ಅವನ ರೂಪು ವರ್ಣಿಸಲು ನನಗೆ ಬಾರದು. ನನಗಿಂತ ಸುಂದರ ನಾಗಿದ್ದ. ಅವನಲ್ಲಿ ಕರೀಕೋಟು ಒಂದಿತ್ತು. ಅದನ್ನು ಹಾಕಿಕೊಂಡು ಬಂದಾಗಲೆಲ್ಲಾ ಅಮ್ಮ ದೃಷ್ಟಿ ಬೊಟ್ಟು ತೆಗೆಯುತ್ತಿದ್ದಳು. ಕನಿಷ್ಠ ಒಂದು ಸೇರು ಮೆಣಸಿನಕಾಯಿ ನಿವಾಳಿಸಿ ಒಲೆಗೆ ತುರುಕುತ್ತಿದ್ದಳು. ಸ್ವಲ್ಪವೂ ಘಾಟು ಬಾರದ್ದು ನೋಡಿ ಅಮ್ಮಾ "ಅವು ಇನ್ನೆಂಥ ಕಣ್ಣುಗಳಪ್ಪಾ ?" ಎಂದುಕೊಳ್ಳುತ್ತಿದ್ದರು. ಅಂಥ ಸುಂದರ ದಷ್ಟಪುಷ್ಟ ದೃಢಕಾಯ ಅವನದು. ಮನ್ಮಥನು ಒಲಿದ ರೂಪು.

ಅವ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಮೊದಲವರ್ಜೆ ಗಿಟ್ಟಿಸಿದಾಗ ಹೆಣ್ಣು ಹೆತ್ತ ಹತ್ತಾರುಜನ ಸಂಬಂಧ ಬೆಳಸಲು ಮುಂದೆಬಂದರು. ಅಣ್ಣನೂ ನಾಲ್ಕಾರುಕಡೆ ಹೋಗಿ ಹೆಣ್ಣು ನೋಡಿ ಬಂದನು. ಅವನಿಗೆ

ಯಾವುದೂ ಒಪ್ಪಿಗೆಯಾಗಲಿಲ್ಲವೇನೋ ಕೊನೆಗೆ ತಾಯಿಯವರಿಗೆ ಜವಾಬ್ದಾರಿ ಕೊಟ್ಟು ಅವರು ಒಪ್ಪಿ ತಂದ ಸೊಸೆಯನ್ನು ಹೆಂಡತಿ ಎನ್ನುವೆನೆಂದು ಮಾತುಕೊಟ್ಟನು ಅದರಂತೆ ಪಾಲಿಸಿದನು.

ಅಮ್ಮನ ತೌರಿನ ಸಂಬಂಧದಲ್ಲಿ ಶ್ರೀಮಂತ ಅಡ್ವೋಕೇಟರೊಬ್ಬರಿದ್ದಾರೆ. ಅವರ ಒಬ್ಬರೇ ಮಗಳಾದ ಸಾವಿತ್ರಿಯನ್ನು ಸೊಸೆಯಾಗಿ ಮಾಡಿಕೊಳ್ಳಲು ಒಪ್ಪಿದರು. ಅಣ್ಣ ಬಂದು ಹೆಣ್ಣು ನೋಡಿ ಒಪ್ಪಿಗೆ ಇತ್ತನು. ಮದುವೆ ನಡೆದುಹೋಯಿತು.

ಸಾವಿತ್ರಿ ನನ್ನ ಅತ್ತಿಗೆಯಾಗಿ, ನಮ್ಮಣ್ಣನ ಒಲವಿನ ಬಳ್ಳಿಯಾಗಿ, ನಮ್ಮಮ್ಮನ ವಾತ್ಸಲ್ಯದ ಶಿಶುವಾಗಿ ನಮ್ಮ ಮನೆಯನ್ನು ತುಳಿದರು. ಅಷ್ಟೇಬೇಗ ತಮ್ಮ ಸದ್ಗುಣಗಳಿಂದ ನಮ್ಮೆಲ್ಲರ ಮನವನ್ನು ಆಕ್ರಮಿಸಿದರು.

ಸಿರಿವಂತ ಪುತ್ರಿಯಾದರೂ ನಿಗರ್ವಿಯಾಗಿ, ಕೇಳಿದುದು ಕೊಡುವ ಕಲ್ಪತರುವಾಗಿ, ಸದ್ಗುಣಗಳ ಸಾಗರವಾಗಿ, ನಮ್ಮೆಲ್ಲರ ಕಣ್ಣಿನ ಬೆಳಕಾಗಿ ಬಾಳತೊಡಗಿದರು.

ಅವರ ಗುಣಗಳನ್ನು ಕಂಡು ಎಲ್ಲರೂ ಒಪ್ಪಿದರು ಮೆಚ್ಚಿದರು. ಅವರ ಮಾತಿಗೆ ಪ್ರತಿ ಹೇಳದಷ್ಟು ಮೋಡಿ ಹಾಕಿದ್ದರು ನಮ್ಮ ಮೇಲೆ.

ಇಷ್ಟಾದರೂ ಅವರು ಅಣ್ಣನ ಹತ್ತಿರ ಸಲಿಗೆಯಿಂದ ಇದ್ದಂತೆ ಕಾಣುತ್ತಿರಲಿಲ್ಲ. ಅವರಿಬ್ಬರಲ್ಲಿ ಪ್ರೇಮವಿದ್ದರೂ ಏನೋ ಅಂತರವಿತ್ತು. ಪ್ರಾಯಶಃ ಅತ್ತಿಗೆಯ ಸಂಕೋಚ ಪ್ರಕೃತಿಯೋ ಇಲ್ಲ ಅಣ್ಣನಲ್ಲಿ ಬೆಳೆದು ಬಂದ ಒಂಟೀ ಜೀವನದ ಪ್ರಭಾವವೋ ತಿಳಿಯದು.

ನಮ್ಮ ಮನೆಯಲ್ಲಿ ಹೆಚ್ಚು ಕೆಲಸವಿರುವುದಿಲ್ಲ. ಹೊರಗಿನ ಕೆಲಸಗಳಿಗೆ ಆಳುಗಳಿರುತ್ತಾರೆ. ಇನ್ನು ಅಡಿಗೆ ವಗ್ಗೆರೆ ಬಗ್ಗೆ ಅಮ್ಮ ಸೊಸೆಗೆ ತ್ರಾಸ ಕೊಡುತ್ತಿರಲಿಲ್ಲ. ಸೊಸೆಯಾದರೋ ಅತ್ತೆಯ ಕೈಯ ಕೆಲಸ ಕಿತ್ತು ಮಾಡುವ ಸ್ವಭಾವ.

ಏನೇ ಕೆಲಸವಿದ್ದರೂ ಮಧ್ಯಾಹ್ನಕ್ಕೆ ಮುಗಿದುಬಿಡುತ್ತೆ. ಮಧ್ಯಾಹ್ನವಾದ ಮೇಲೆ ಏನಾದರೂ ಕಸೂತಿ ಹಿಡಿದು ಕುಳಿತುಕೊಳ್ಳುತ್ತಿದ್ದರು ಅತ್ತಿಗೆ. ತೀರ ಬೇಸರವಾದಾಗ ವೀಣೆ ಹಿಡಿದು ಮೀಟುತ್ತಿದ್ದರು.

ಅಂತೂ ಒಂದು ದಿನವಾದರೂ ಸೋಮಾರಿಯಾಗಿ ಮಧ್ಯಾಹ್ನ ಮಲಗಿದವರಲ್ಲ.

ನಮ್ಮ ಮನೆಗೆ ಬಂದು ಮೂರು ತಿಂಗಳಾದರೂ ಅವರಿಗೆ ಹಾಡಲಿಕ್ಕೆ ಬರುತ್ತೆಂದು ಗೊತ್ತಿರಲಿಲ್ಲ. ತೌರಿನಿಂದ ಬರುವಾಗಲೇ ಜೊತೆಗೆ ವೀಣೆಯನ್ನು ತಂದದ್ದು ನೋಡಿ ವೀಣೆ ನುಡಿಸಬಹುದು ಎಂಬುದು ಮಾತ್ರ ತಿಳಿದಿತ್ತು ನನಗೆ. ಹಾಡಿನ ಬಗ್ಗೆ ಅಮ್ಮನೂ ಕೇಳಿರಲಿಲ್ಲ. ಅಣ್ಣನಿಗೆ ಸಂಗೀತವೆಂದರೆ ರಾಗವೂ ಇಲ್ಲ ದ್ವೇಷವೂ ಇಲ್ಲ ಎನ್ನುವ ಪ್ರಕೃತಿ. ನನಗೆ ಸಂಗೀತ ಬರುತ್ತೆ ಎಂದರೆ ಮನೆಯ ಮಂದಿ ಏನು ತಿಳಿಯುವರೋ ಎಂದು ಸುಮ್ಮನಿದ್ದರು ಅತ್ತಿಗೆ. ಆದರೆ ಕಲಿತ ಕಲೆ-ಅರ್ಜಿಸಿದ ವಿದ್ಯೆ ಎಂದಾದರೂ ಒಳಗಿರುವುದೆ ?

ನಾನು ಮನೆಯಲ್ಲಿ ಸಿಳ್ಳುಹಾಕಿ ಕಾಲೇಜಿನಲ್ಲಿ ಹಾಡಿದ ಭಾವಗೀತೆಗಳನ್ನೋ-ಸಿನಿಮಾ ಸಂಗೀತಗಳನ್ನೊ ಮೆಲ್ಲಗೆ ಮೆಲುಕು ಹಾಕುತ್ತಿರುವಾಗ ಅತ್ತಿಗೆ ಆಲಿಸಿ ತಪ್ಪಿದ ಕಡೆ ತಿದ್ದಿ ಹೇಳುತ್ತಿದ್ದರು. ಆಗಲೇ ತಿಳಿದುದು ಅತ್ತಿಗೆಗೆ ಹಾಡಲಿಕ್ಕೆ ಬರುತ್ತೆ, ಕೇವಲ ಶಾಸ್ತ್ರೀಯ ಸಂಗೀತವಲ್ಲದೆ ಸಿನಿಮಾ ಸಂಗೀತಗಳನ್ನೂ ಹಾಡುವರೆಂದು. ಒಂದುದಿನ ಹೆಚ್ಚು ಪೀಡಿಸಿದ್ದಕ್ಕೆ ವೀಣೆ ಹಿಡಿದು ನಾಲ್ಕು ಕೀರ್ತನೆ ನುಡಿದರು.

"ನೀನೋಕೋ ! ನಿನ್ನ ಹಂಗ್ಯಾಕೊ ! ನಿನ್ನ ನಾಮದ ಬಲವೊಂದಿದ್ದರೆ ಸಾಕೋ !" "ಈಸಬೇಕು ! ಇದ್ದು ! ಜಯಿಸಬೇಕು !! ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಪದ್ಹಾಂಗೆ" ಎಂದು ಅತ್ತಿಗೆ ಹಾಡಿ ಮುಗಿಸಿದಾಗ ಅಮ್ಮ ಗಳಗಳ ಅತ್ತುಬಿಟ್ಟರು. ಪುರಂದರದಾಸರೇ ಎದುರು ನಿಂತು ಹಾಡಿದಂತೆ ಭಾವಿಸಿದರು ಅವರು. ಕೀರ್ತನೆ ಕೇಳಿ ಅಣ್ಣ 'ಹ್ವಾ ! ಭೇಷ್' ಎಂದುಬಿಟ್ಟನು. ನಾನಂತೂ ನಮ್ಮ ಮನೆಯಲ್ಲಿರುವವರು ಅತ್ತಿಗೆಯಲ್ಲಿ ಸಾಕ್ಷಾತ್ ಸರಸ್ವತಿ ಎಂದು ತಿಳಿದುಬಿಟ್ಟೆ.

ಅಂದಿನಿಂದ ನನ್ನ ಅತ್ತಿಗೆಯಲ್ಲಿ ಸಲಿಗೆ ಬೆಳೆಯಿತು. ಎಷ್ಟೋವೇಳೆ ಅವರ ಕಣ್ಣಿನಲ್ಲಿ ತನ್ಮಯನಾಗುತ್ತಿದ್ದೆ; ಅವರ ಹಾರೈಕೆಯಲ್ಲಿ ಮಗುವಾಗುತ್ತಿದ್ದೆ. ನನ್ನೊಂದಿಗೆ ಮನಬಿಚ್ಚಿ ಮಾತಾಡುತ್ತಿದ್ದರು. ಸಂಗೀತದ ಸುದ್ದಿ

ಬಂದವರಂತೂ ಆವೇಶ ಬಂದವರಂತೆ ಮಾತಾಡುತ್ತಿದ್ದರು.

"ಇಂದು ! ಸಂಗೀತ ಒಂದು ತಪಸ್ಸು. ಸರಸ್ವತಿ ಎಲ್ಲರಿಗೂ ಒಲಿಯುವುದಿಲ್ಲ. ಒಲಿದಾಗ ವಶಪಡಿಸಿ ಭದ್ರಪಡಿಸಿಕೊಳ್ಳಬೇಕು" ಎನ್ನುತ್ತಿದ್ದರು.

ಹೀಗೆ ಹೇಳುವಾಗಲೆಲ್ಲಾ ಅವರು ಕಣ್ಣೀರು ಕರೆಯುತ್ತಿದ್ದರು. ಅವರಿಗೆ ಇನ್ನೂ ಕಲಿಯುವ ಇಚ್ಛೆಯಿತ್ತು. ವಿದ್ವತ್ ಆಗಿದ್ದರೂ ಮತ್ತೂ ಪಾಂಡಿತ್ಯಗಳಿಸಬೇಕೆಂಬ ಆಸೆ ಹೆಮ್ಮರವಾಗಿ ಬೆಳೆದಿತ್ತು. ಆದರೆ ಅಣ್ಣ ಆ ಆಸೆಯ ಹೆಮ್ಮರದ ರಂಭೆಗಳನ್ನು ನಿಧಾನವಾಗಿ ಕಡಿಯುತ್ತಿದ್ದ.

ಒಂದುದಿನ ಸಂಜೆ ಕಾಲೇಜಿನಿಂದ ಬಂದಾಗ ಅತ್ತಿಗೆ ಬಿಕ್ಕಳಿಸಿ ಅಳುತ್ತಿದ್ದರು. ಅಣ್ಣ ರೂಮು ಸೇರಿ ತಲೆಯ ಮೇಲೆ ಕೈಹೊತ್ತು ಕುಳಿತಿದ್ದ. ಮನೆಯ ತುಂಬಾ ವೀಣೆ ಒಡೆದ ಚೂರುಗಳು ಮೂಲೆ ಮೂಲೆಯನ್ನು ಸೇರಿದ್ದುವು. ಎದೆ ಧಸಕ್ಕೆಂದಿತು. ವಾತಾವರಣ ಗಂಭೀರ-ನಿಶ್ಶಬ್ಧವಾಗಿದ್ದುದನ್ನು ಅರಿತು ಹೊರಗೆ ಹೊರಟುಹೋದೆ.

ಮತ್ತೆ ರಾತ್ರಿಗೆ ಅತ್ತಿಗೆಯನ್ನು ಏಕಾಂತದಲ್ಲಿ ಕಂಡು ವಿಚಾರಿಸಿದಾಗ ತಿಳಿದುಬಂತು.

ಅಂದು ಮಧ್ಯಾಹ್ನ ಅವರ ಸಂಗೀತದ ಗುರುಗಳು ಬಂದಿದ್ದರಂತೆ. ಅವರು ಆಗ ಇದೇ ಊರಿನಲ್ಲಿ ವಾಸವಾಗಿದ್ದರು. ಮೇಲಾಗಿ ಆಸ್ಥಾನ ವಿದ್ವಾನ್. ಅವರು ಅತ್ತಿಗೆಯನ್ನು ಬಹಳ ಬಲವಂತ ಮಾಡಿದಾಗ ಅವರೆದುರಿನಲ್ಲಿ ಕುಳಿತು ವೀಣೆ ನುಡಿಸುತ್ತಿದ್ದರಂತೆ. ಆದೇತಾನೆ ಆಫೀಸಿನಿಂದ ಬಂದ ಅಣ್ಣ ತನ್ನ ಹೆಂಡತಿ ಸಂಗೀತಮೇಷ್ಟ್ರ ಎದುರು ಕುಳಿತು ನಿರ್ಭಯವಾಗಿ ಹಾಡುತ್ತಿರುವುದನ್ನು ಕಂಡು ಕಸಿವಿಸಿಗೊಂಡು ಕಿಡಿಕಿಡಿಯಾದನಂತೆ. ರೂಮಿಗೆ ಹೋಗಿ ಹಾಡುತ್ತಿದ್ದ ಅತ್ತಿಗೆಯನ್ನು ಕರೆದು ಕಪಾಳಕ್ಕೆ ಎರಡು ತೀಡಿದನಂತೆ. ಸದ್ದು ಕೇಳುತ್ತಲೇ ಸಂಗೀತಮೇಷ್ಟ್ರು ಹೊರಟುಹೋದರಂತೆ. ಅಣ್ಣನ ಸಿಟ್ಟಿಗೆ ವೀಣೆ ಆಹುತಿಯಾಯಿತಂತೆ. ಅಲ್ಲದೆ ಮತ್ತೆ ಎಂದೂ ಈ ಮನೆಯಲ್ಲಿ ತಪ್ಪಿಯಾದರೂ ಸಂಗೀತ ಹಾಡಬಾರದೆಂದು ಆಜ್ಞೆ ಮಾಡಿದನಂತೆ.

ಅಣ್ಣನ ಆ ಪ್ರಕೋಪಕ್ಕೆ ಇನ್ನೂ ಒಂದು ಕಾರಣವಿತ್ತು. ಆ ಸಂಗೀತಮೇಷ್ಟ್ರು ಚಾರಿತ್ರ್ಯ ಚೆನ್ನಾಗಿಲ್ಲ. ಅವರ ಮೇಲೆ ಇಲ್ಲದ ಆರೋಪಗಳಿವೆ. ಅದು ನನಗೂ ತಿಳಿದಿತ್ತು. ಅಣ್ಣನಿಗೆ ಅದು ಗೊತ್ತಾಗಿ ಅಷ್ಟು ಕೆರಳಿರಬೇಕು. ಮನಸ್ಸು ತಡೆಯದೆ ಹೇಳಿದೆ

"ಅತ್ತಿಗೆ ! ಆ ಮೇಷ್ಟ್ರ ಚಾರಿತ್ರ್ಯದ ಬಗ್ಗೆ ಕೇಳಿರುವೆಯಾ ? ಅಣ್ಣನ ಕೋಪಕ್ಕೆ ಕಾರಣವೇ ಬೇರೆ ಇದೆ" ಎಂದೆ.

ಅತ್ತಿಗೆ ಶಾಂತಿಯಿಂದ ಹೇಳಿದರು

"ಇಂದು ! ಅವರ ಚಾರಿತ್ರ್ಯದಿಂದ ನನಗೇನು ಆಗಬೇಕಾಗಿದೆ. ಅವರು ನನಗೆ ವಿದ್ಯೆ ಹೇಳಿದ ಗುರುಗಳು-ತಂದೆಯ ಸಮಾನ. ಅವರ ವಿದ್ಯೆಗೆ ನಾನು ಶಿಷ್ಯೆ ಅವರಿಗಲ್ಲ. ಅವರ ಪಾದಗಳಿಗೆ ಎಂದೆಂದೂ ಮಣಿಯುತ್ತೇನೆ" ಎಂದು ಕಣ್ಣೀರು ಹಾಕಿದರು.

ಇನ್ನು ಹೆಚ್ಚು ಮಾತಾಡಲಿಲ್ಲ ಪರಿಸ್ಥಿತಿ ಬಿಗಡಾಯಿಸುತ್ತೆಂದು.

ಹೀಗೆಯೇ ಕೆಲದಿನ ಕಳೆದವು. ಎಲ್ಲಾ ಎಂದಿನಂತೆಯೇ ಇತ್ತು. ಅತ್ತಿಗೆ ನಗುತ್ತಿದ್ದರು ಆದರೆ ಅನೇಕಬಾರಿ ಆ ನಗು ಒಣನಗು ಎಂದು ನನಗೆ ಕಾಣುತ್ತಿತ್ತು. ಅಂದಿನಿಂದ ಅಣ್ಣ-ಅತ್ತಿಗೆಯರಲ್ಲಿ ಸರಸ ಹೋಗಿ ವಿರಸ ಬೆಳೆಯುತ್ತಿತ್ತು.

ಇನ್ನೊಂದು ದಿನ ಇನ್ನೊಂದು ಹಗರಣ ನಡೆಯಿತು. ಅಂದು ಯಾವ ಮಾರಿ ನಮ್ಮ ಮನೆ ಹೊಕ್ಕಿದ್ದಳೋ ?

ಆ ದಿನ ನಮ್ಮ ಮನೆಗೆ ಕಿರಾತನಂತೆ ಬಂದು ನಮ್ಮೆಲ್ಲರ ಶಾಂತಿಗೆ ಧಕ್ಕೆ ತಂದ ಅದೇ ಸಂಗೀತ ಮೇಷ್ಟ್ರ ಘನವಾದ ಕಛೇರಿ ನಮ್ಮ ಊರಲ್ಲಿ ಏರ್ಪಡಿಸಿದ್ದರು. ಕಛೇರಿಯು ಎಂಟುದಿನ ಮುನ್ನ ಘನವಾದ ಪ್ರಚಾರವೂ ನಡೆದಿತ್ತು.

ಅತ್ತಿಗೆಗೆ ಕಛೇರಿಗೆ ಹೋಗುವ ಇಷ್ಟ. ಬೆಳಗಿನಿಂದಲೂ ಪೇಚಾಡುತ್ತಿದ್ದರು. ಅಣ್ಣನನ್ನು ಕೇಳಲು ಹೆದರಿಕೆ ಅವರಿಗೆ. ಮನದ ಬೇಗುದಿ ತಡೆಯಲಾರದೆ ಮಧ್ಯಾಹ್ನ ಊಟಕ್ಕೆ ಬಂದಾಗ "ಸಂಜೆ ಸಂಗೀತ ಕಛೇರಿ ಇದೆ. ಹೋಗಿ ಬರುತ್ತೇನೆ" ಎಂದರು.

ಮಾತು ಕೇಳಿ ಅಣ್ಣ ಕಿಡಿಕಿಡಿಯಾದ.

"ಆ ವಿಟಪುರುಷನ ಕಛೇರಿಗೆ ತಾನೆ. ನೀನು ಅವನ ಹಿಂದೆಯೇ ಹೋಗು ಮತ್ತೆ ಹಿಂತಿರುಗಬೇಡ" ಎಂದನು.

ಅಂಥ ಕಠೋರ ಶಬ್ದಗಳನ್ನು ಅಣ್ಣನ ಬಾಯಿಂದ ನಾನೆಂದೂ ಕೇಳಿರಲಿಲ್ಲ. ಅತ್ತಿಗೆ ಆ ಮಾತು ಕೇಳಿ ದಹಿಸಿಹೋದರು. ಅತ್ತು ಅತ್ತು ಅವರ ಕಣ್ಣು ಕಾದ ಕಬ್ಬಿಣದಂತಾದವು.

ಆ ದಿನ ಸಂಜೆ ನಮ್ಮಣ್ಣನ ಆಫೀಸಿನ ಜವಾನ ಚೀಟಿಯೊಂದು ತಂದುಕೊಟ್ಟನು.

ಚೀಟಿ ಅಣ್ಣ ಕಳುಹಿಸಿದ್ದ.

ರಾತ್ರಿ ಊಟಕ್ಕೆ ಬರುವುದಿಲ್ಲ. ಸ್ನೇಹಿತರ ಮನೆಯಲ್ಲಿ ಔತಣವಿದೆ. ಬರುವುದು ಹತ್ತೋ-ಹನ್ನೆರಡೋ ಆಗುತ್ತೆ ಎಂದು ಬರೆದಿದ್ದ.

ಅದೇನು ಪರೀಕ್ಷೆಮಾಡಲೆಂದು ಆ ರೀತಿ ಬರೆದಿದ್ದನೇನೋ ?

ಆ ಚೀಟಿ ನೋಡಿ ನನಗೊಂದು ಉತ್ಸಾಹ ಬಂದಿತ್ತು. ಅತ್ತಿಗೆಗೆ ಸಮಾಧಾನ ಹೇಳಿದೆ. ಅಣ್ಣ ಬರುವ ಹೊತ್ತಿಗೆ ಒಂದೆರಡು ಗಂಟೆ ಸಂಗೀತ ಕೇಳಿಬರುವುದೆಂದು; ಜೊತೆಯಲ್ಲಿ ನಾನೇ ಕರೆದುಕೊಂಡು ಹೋಗುತ್ತೇನೆಂದು ಹೇಳಿದೆ.

ಮೊದಲು ಅತ್ತಿಗೆ ನನ್ನ ಯೋಚನೆಗೆ ಸಮ್ಮತಿಸಲಿಲ್ಲ. "ಬೇಡ ! ಅವರಿಗೆ ಗೊತ್ತಾದರೆ ರಂಪಾ ಆದೀತು" ಎಂದರು.

ಹಾಳಾದ್ದು ಕಲೆ ! ಹಾವಾಡಿಗನ ಪುಂಗಿಗೆ ಆಕರ್ಷಿಸುವ ಹಾವಿನಂತೆ.

ಅತ್ತಿಗೆ ಯೋಚಿಸಿ ಯೋಚಿಸಿ ನನ್ನ ಸಲಹೆಗೆ ಒಪ್ಪಿದರು. ಒಂದರ್ಧ ಗಂಟೆ ಕೇಳಿಬರುವುದು ಎಂದರು. ಅಮ್ಮನ ಸಂಗಡ ವಾಕಿಂಗ್ ಹೋಗುತ್ತೇವೆಂದು ಹೇಳಿ ಕಛೇರಿಗೆ ಹೊರಟೆವು.

ಒಂದೆರಡು ಗಂಟೆ ಸಂಗೀತ ಕೇಳಿ ವಾಪಸಾದೆವು. ಮನೆಗೆ ಬಂದಾಗ ಅಣ್ಣ ಬಂದಿದ್ದು ಅತ್ತಿಗೆಯನ್ನು ವಿಚಾರಿಸಿ ಇಲ್ಲದ್ದು ನೋಡಿ ಮತ್ತೆ ಎಲ್ಲಿಗೋ ಹೊರಟು ಹೋದನೆಂದು ಅಮ್ಮ ಹೇಳಿದರು.

ಸುದ್ದಿ ಕೇಳಿ ಅತ್ತಿಗೆಗೆ ಜೀವ ಹಾರಿಹೋಯಿತು. ನನಗೆ ಜಂಘಾ

ಬಲವೇ ಹುದುಗಿಹೋಯಿತು. ಆ ರಾತ್ರಿ ಹನ್ನೆರಡು-ಒಂದಾದರೂ ಅಣ್ಣ ಬರಲಿಲ್ಲ ಆ ರಾತ್ರಿ. ಅತ್ತಿಗೆ ರೂಮು ಸೇರಿ ಅಳತೊಡಗಿದರು. ನನಗೆ ಯಾವಾಗ ನಿದ್ರೆ ಬಂದಿತೋ ಗೊತ್ತಾಗಲಿಲ್ಲ.

ಬೆಳಿಗ್ಗೆ ಎದ್ದು ನೋಡುವಾಗ ಅತ್ತಿಗೆ ರೂಮಿನ ತೊಲೆಯಲ್ಲಿ ನೇತು ಬಿದ್ದಿದ್ದರು. ಅಣ್ಣ ಹಿತ್ತಲ ಬಾವಿಯಲ್ಲಿ ತೇಲುತ್ತಿದ್ದ.

ಆ ದೃಶ್ಯ ನೋಡಿ ನನ್ನ ತಲೆ ಗಿರ್ರೆಂದಿತು. ಮನೆಯಲ್ಲಿ ನಾನಿರಲಿಲ್ಲ. ನನ್ನ ಮೇಲೆ ಮನೆ ಇದ್ದಿತು. ತಲೆ ಸುತ್ತಿ ಮೂರ್ಛೆ ಬಂದಿತು.

ಮತ್ತೆ ಚೇತರಿಸಿಕೊಂಡಾಗ ಜನರು ಅತ್ತಿಗೆ-ಅಣ್ಣನನ್ನು ಒಂದೇ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಸ್ಮಶಾನಕ್ಕೆ ಒಯ್ಯಲು ಸಿದ್ಧರಿದ್ದರು. ನಾನೂ ಹೆಣಗಳ ಹಿಂದೆ ಹೋದೆ. ಮೂರುಹಿಡಿ ಮಣ್ಣನ್ನು ಗುಂಡಿಗೆ ಹಾಕಿದೆ. ಹಾಳು ಪಾಪಿಗಳು ಅಣ್ಣ-ಅತ್ತಿಗೆಯರ ಎದೆಯ ಮೇಲೆ ಮಣ್ಣು ಎಳೆದರು. ಅಂದೇ ನನ್ನ ಎದೆಯ ಮೇಲೂ ಮಣ್ಣು ಎಳೆದುಕೊಂಡೆ.

ದಿನಗಳು ಕಳೆದವು. ಅಣ್ಣ-ಅತ್ತಿಗೆಯರ ದುರಂತ ಸಾವು ರೇಡಿಯೋ ಅಲೆಗಳಂತೆ ಊರಲ್ಲಿ ಹರಡಿತು. ಅಷ್ಟೇ ಬೇಗ ಅವರ ಸಾವಿನ ಕಾರಣಕ್ಕೆ ನೂರು ಕಟ್ಟುಕಥೆಗಳು ಹುಟ್ಟಿದವು.

ಇದೆಲ್ಲಾ ಕೇಳಿ-ನೋಡಿ ಬಹಳ ದುಃಖವಾಯಿತು. ಏನುಮಾಡಿ ದರೂ ದಿನಗಳು ಉರುಳದಾದವು. ನನ್ನ ಪಾಲಿಗೆ ಅಣ್ಣ-ಅತ್ತಿಗೆಯರು ಸತ್ತು ಬದುಕಿದ್ದಾರೆ. ನಾನು ಬದುಕಿ ಸತ್ತಿದ್ದೇನೆ.

ಅತ್ತಿಗೆಯ ಸಾವಿಗೆ ನಾನೇ ಕಾರಣನೆಂದು ನನ್ನ ಭಾವನೆ. ಅಂದು ಅತ್ತಿಗೆಗೆ ಆ ಸಲಹೆ ಕೊಡದಿದ್ದರೆ ಪರಿಸ್ಥಿತಿ ಇಷ್ಟು ಹದಗೆಡುತ್ತಿರಲಿಲ್ಲ ವೇನೋ! ಹಲವು ವೇಳೆ ಇದಕ್ಕೆ ನಾನೂ ಕಾರಣನಲ್ಲ ಎನ್ನಿಸುತ್ತೆ. ಏಕೆಂದರೆ ಅವರ ರಕ್ತದಲ್ಲಿ ಮೂಡಿಬಂದ ಕಲೆ ಅವರ ಕೊಲೆಗೆ ಕಾರಣ ವಾಯಿತು.

ಅಂತೂ ಈ ದುಃಖ ಮರೆಯಲು ನನ್ನಿಂದ ಸಾಧ್ಯವಿಲ್ಲ. ಅತ್ತಿಗೆ ಸದಾ ನನ್ನೊಂದಿಗೆ ಮಾತನಾಡುವಂತೆ ಕಾಣುತ್ತೆ. ಕನಸಿನಲ್ಲಿ ಬಂದು ನನ್ನ ಮೈದಡವಿ-ತಲೆಸವರಿ ಕಣ್ಣೀರು ಹಾಕುತ್ತಾರೆ.

ಅಮ್ಮ.ಅಪ್ಪ ಈ ದುಃಖ ಕ್ರಮೇಣ ಮರೆತು ನನ್ನ ಮದುವೆಗೆ ಆತುರವಾಗಿದ್ದಾರೆ. ಇರುವ ವಂಶದ ಕುಡಿ ಬಾಡಬಾರದೆಂದು ಯೋಚಿಸ.ವುದಾಗಿದೆ.

ನಾನು ಮದುವೆಯೇ ಆಗಬಾರದೆಂದಿದ್ದೆ. ತಂದೆ-ತಾಯಿಗಳಿಗಾಗಿ ಆಗಬೇಕಾಗಿದೆ. ಈಗ ತೋರಿಸಿರುವ ಹೆಣ್ಣನ್ನು ಅವರು ಸಂಪೂರ್ಣ ಒಪ್ಪಿದ್ದಾರೆ. ನನಗೂ ಒಪ್ಪಿಗೆ ಇತ್ತು. ಆದರೆ ಆ ಹುಡುಗಿ ನರ್ತಕಿ ಎಂದು ತಿಳಿದರೆ ಅವರೆಷ್ಟು ಒಪ್ಪುವರೋ ನನಗೆ ಬೇರೆ ತಿಳಿಯದು.

ನನಗೆ ಕಲೆಯಲ್ಲಿ ದ್ವೇಷವಿಲ್ಲ. ಆದರೆ ನಮ್ಮಣ್ಣ ಸಂಗೀತ ದ್ವೇಷಿಯಾದಂತೆ ನಾನು ನರ್ತನ ದ್ವೇಷಿಯಾಗಿದ್ದೇನೆ.

ಇದಕ್ಕೂ ಒಂದು ಕಾರಣವಿದೆ. ನನಗೆ ಸಂಗೀತ-ನರ್ತನವೆಂದರೆ ಚಿಕ್ಕಂದಿನಿಂದಲೂ ಪ್ರಾಣ. ನನ್ನ ಬಾಲ್ಯಸ್ನೇಹಿತನೊಬ್ಬ ನರ್ತನ ಶಾಲೆ ಇಟ್ಟಿದ್ದಾನೆ. ಅವನಿಗೆ ನರ್ತನಕಲೆ ಚೆನ್ನಾಗಿ ರೂಢಿಸಿದೆ. ಕಲ್ಕತ್ತಾದಲ್ಲಿ ನಾಲ್ಕಾರು ವರುಷವಿದ್ದು ಬಂದವನು. ಅವನ ಸ್ಕೂಲಿನಲ್ಲಿ ಹತ್ತಾರು ಹುಡುಗಿಯರು ಕಲಿಯುತ್ತಿದ್ದಾರೆ. ಬೇಸರ ಬಂದಾಗ ಅಲ್ಲಿಗೆ ಹೋಗುವ ಪದ್ಧತಿ ಇತ್ತು.

ಅವನೆಷ್ಟು ಕಲಾವಿದನೋ ಅಷ್ಟೇ ಚರಿತ್ರಹೀನ. ಅಲ್ಲಿಗೆ ಬರುವ ಹುಡುಗಿಯರನ್ನೆಲ್ಲಾ ತನ್ನ ಬಲೆಗೆ ಹಾಕಿಕೊಳ್ಳುತ್ತಾನೆಂದು ಕೇಳಿದ್ದೇನೆ. ನಾನೇ ಒಂದುದಿನ ಹುಡುಗಿಯೊಬ್ಬಳನ್ನು ಚುಂಬಿಸಿದುದನ್ನು ನೋಡಿದೆನು. ಆ ಹುಡುಗಿ ಶ್ರೀಮಂತ ಪುತ್ರಿ. ಮೊನ್ನೆತಾನೆ ಮದುವೆಯಾಯಿತು. ಆಕೆಗೆ ನರ್ತನ ಕಲಿಯುವ ಆಸೆ. ಈತನಿಗೆ ಚುಂಬನದ ಚಪಲ. ಅಂದಿನಿಂದ ನರ್ತನ ಮಾಡುವವರನ್ನು ಕಂಡರೆ ನಾಗರಹಾವು ಕಂಡಷ್ಟು ಭಯ-ಭೀತಿ.

"ನಿಮ್ಮ ಸುಗುಣ ಅಂಥ ನಾಗರಹಾವುಗಳಲ್ಲಿ ಒಂದಲ್ಲತಾನೆ ?"

ಪ್ರಸಾದ್‌ಗೆ ಇದುವರೆಗೂ ಕಥೆ ಕೇಳಿ ಹೃದಯದಲ್ಲಿ ಕರುಣೆ ತುಂಬಿ ಬಂದಿತ್ತು. ಕಣ್ಣು ಕಂಬನಿ ಮಿಡಿಯಿತು.

ಇಂದುಧರನ ಕೊನೆಯ ಮಾತು

"ನಿಮ್ಮ ಸುಗುಣ ಅಂಥ ನಾಗರಹಾವುಗಳಲ್ಲಿ ಒಂದಲ್ಲ ತಾನೆ ?" ಎಂಬ ಮಾತು ಚಾಟಿಯಿಂದ ಜಾಡಿಸಿದಂತಾಯಿತು.

"ಬಾಯಿಮುಚ್ಚು ! ಏನು ಮಾತು ನಿನ್ನವು ಇಂದುಧರ ! ಶನಿಹಿಡಿದ ನಿನ್ನ ಕಣ್ಣಿಗೆ ಎಲ್ಲರೂ ಕಲುಷಿತರೇ ಅಲ್ಲವೇ ?"

"ಹಾಗಲ್ಲ ಪ್ರಸಾದ್ ! ಕೋಪಿಸಬೇಡ ! ಯಾವ ಹುತ್ತದಲ್ಲಿ ಯಾವ ಹಾವಿದೆಯೋ ?"

"ನನ್ನ ಭಾವನೆ ತಪ್ಪು ಇಂದುಧರ ! ಹುತ್ತಗಳೆಲ್ಲಾ ಹಾವಿರುವು ದಿಲ್ಲ. ಮಹರ್ಷಿ ಋಷಿಗಳೂ ಇರುತ್ತಾರೆ ಎನ್ನುವುದು ಮರೆಯಬೇಡ !"

"ಇರಬಹುದು !"

"ಹಾಗಾದರೆ! ಈ ಸುಗುಣ ಅಂಥ ಋಷಿಗಳಲ್ಲಿ ಒಬ್ಬಳು ಎಂದು ತಿಳಿ"

"ಇನ್ನು ಹೆಚ್ಚು ಹೇಳಿ ಪ್ರಯೋಜನವೇನು ? ಸುಗುಣಳ ಗುಣ ಗಳಲ್ಲಿ ನೀನು ಯಾವ ಅವಗುಣಗಳನ್ನು ಕಂಡು ದುಃಖಿಸಿದರೂ ಅದರ ಪೂರ್ಣ ಹೊಣೆ ನನ್ನ ಮಗುವಿನಾಣೆಯಾಗಿಯೂ ನಾನು ಹೊರುತ್ತೇನೆ. ನಿನಗೆ ಕೆಡಕುಮಾಡಿ, ಈ ಮದುವೆ ಮಾಡಿಸಿ ಯಾವ ರವರವ ನರಕವನ್ನೂ ಸೇರಬೇಕಿಲ್ಲ. ನನ್ನಲ್ಲಿ ನಂಬಿಕೆಯಿದ್ದರೆ ಈ ಮದುವೆಗೆ ಒಪ್ಪು. ಆ ಹುಡುಗಿ ಸಾಕ್ಷಾತ್ ಪಾರ್ವತೀ ಸಮಾನ. ಅವಳನ್ನು ಕೆಣಕಿದರೆ ಆದಿಶಕ್ತಿ."

"ಆ ಹುಡುಗಿಯ ಗುಣಗಳ ಬಗ್ಗೆ ಶಂಕೆಯಿಲ್ಲ....ಆದರೆ....ಆ...."

ಇಂದುಧರ ಹತ್ತುನಿಮಿಷ ದೀರ್ಘವಾಗಿ ಯೋಚಿಸಿದನು. ಯೋಚನೆ ಗಳ ಅಡಿಗಳಲ್ಲಿ ಸಿಲುಕಿ ತೊನೆಗೆ ದಡದ ಕಡೆ ಅಪ್ಪಳಿಸಿದನು.

"ಆಯಿತು ! ಮದುವೆಯಾಗುತ್ತೇನೆ. ಆದರೆ ಒಂದು ಷರತ್. ಆ ನರ್ತನದ ಭಾವಚಿತ್ರಗಳು-ಸರ್ಟಿಫಿಕೇಟ್‌ಗಳನ್ನು ನನ್ನ ಎದುರಿಲ್ಲಿಯೇ ಸುಡಬೇಕು. ಆಕೆ ಆ ಕಲೆಯನ್ನು ಸಂಪೂರ್ಣ ಮರೆಯಬೇಕು.

ಪ್ರಸಾದ್ ಗಹಗಹಿಸಿ ನಕ್ಕನು.

"ಹಾಗೇ ಆಗಲಿ ! ಅಯ್ಯೋ ! ಹುಚ್ಚ ! ಕೇವಲ ಸರ್ಟಿಫಿಕೇಟು ಗಳನ್ನು ಸುಟ್ಟರೆ ಅವಳು ಕಲಿತ ಕಲೆಯನ್ನು ಭಸ್ಮಮಾಡಿದಂತಾಗುವುದೆ?

ಆ ಬಗ್ಗೆ ಚಿಂತೆ ಮಾಡಬೇಡ. ಮೊದಲು ಅಧೈರ್ಯಗೊಂಡ ಆ ಜನಕ್ಕೆ ಧೈರ್ಯ ಹೇಳಿ ಬರುತ್ತೇನೆ"

ಎಂದು ಪ್ರಸಾದ್ ನಗುಮುಖದಿಂದ ಹೊರಬಿದ್ದನು.

*  *  *  *  *

ಸುಗುಣಳಿಗೆ ಈಗ ಎರಡು ಮಕ್ಕಳು. ಈಗ್ಗೆ ನಾಲ್ಕಾರು ವರುಷಗಳಿಂದ ಪ್ರಸಾದ್ ಅವರನ್ನು ಕಂಡಿರಲಿಲ್ಲ. ಮೊನ್ನೆ ತೌರಿಗೆ ಬಂದ ಸುಗುಣಳನ್ನು ನೋಡಲು ಹೋಗಿದ್ದ. ನೋಡಿ ತಾನೇ ಅವಕ್ಕಾದ.

ಇಂದುಧರ ತಾಳ ಹಾಕುತ್ತಲಿದ್ದ....ಸುಗುಣ ಥ....ಥಕ....ಥೈ.... ಥ....ಥಕ....ಥೈ....ಹೇಳುತ್ತಿದ್ದಳು. ಅವಳ ಮಕ್ಕಳೆರಡೂ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುತ್ತಿದ್ದರು.

# ಹೃದಯಗಳು ಮಾತನಾಡಿದವು

ನ್ಯಾಯಾಲಯದ ಬಾಗಿಲು ತೆರೆಯಲು ಇನ್ನೂ ಒಂದು ತಾಸು ಬೇಕಿತ್ತು. ಆಗಲೇ ಸುತ್ತಲೂ ಜನಸಮೂಹ ಜಮಾಯಿಸಿತ್ತು. ಮಾಡಳೂರಿನ ಸುತ್ತಲ ಹಳ್ಳಿಯಿಂದಲೂ ಜನ ನುಗ್ಗಿ ಬಂದಿದ್ದರು.

ಅಂದು ಹೊಸಮನಿ ಕೊಲೆ ಮೊಕದ್ದಮೆಯ ತೀರ್ಪು ಇತ್ತು. ಕೊಲೆಪಾತಕಿ ಶಿವನಂಜಿಗೆ ಏನು ಶಿಕ್ಷೆ ವಿಧಿಸುತ್ತಾರೆಂಬ ಕುತೂಹಲ ಅರ್ಧ ವಿದ್ದರೆ-ಅವಳ ಗತ್ತು-ಗೈರತ್ತನ್ನು ಕೊನೆಯಬಾರಿ ನೋಡಿ ಹೋಗಲು ಬಂದ ಜನರೇ ಹೆಚ್ಚು.

ಮಾಡಳೂರಿನಲ್ಲಿ ಶಿವನಂಜಿ ಎಂದರೆ ಯಾರಿಗೂ ಅರ್ಥವಾಗುತ್ತಿರ ಲಿಲ್ಲ. 'ಯಾರು? ಗಂಡುಬೀರಿ ಶಿವನಂಜಿಯೆ?' ಎಂದು ಜನ ಗುಣವಾಚಕ ಬೆರಸಿ ಕೇಳುತ್ತಿದ್ದರು.

ಶಿವನಂಜಿಯನ್ನು ಗಂಡುಬೀರಿ ಎನ್ನಲು ನೂರು ಕಾರಣಗಳಿದ್ದುವು. ಅವಳ ನಿಲುವು-ಅವರ ಸಾಹಸ ಅಂಥವು. ಮಾಡಳೂರಿನಲ್ಲಿ ಮೀಸೆ ಹೊತ್ತ ಗಂಡಸರಿಂದ 'ಅಸಾಧ್ಯ' ಎಂಬ ಕೆಲಸಗಳಿಗೆ 'ಕುಮ್ಮಕ್ಕು' ಕೊಡುತ್ತಿದ್ದಳು ಅವಳು.

ಒಮ್ಮೆ ಊರಿಗೆ ನುಗ್ಗಿದ ಕಾಡುಕರಡಿಯನ್ನು ಹಿಡಿಯಲು ಹೆದರಿದ ಪೈಲ್ವಾನ್ ಸಿದ್ಧನನ್ನು ಹುರಿದುಂಬಿಸಿ ಅವನ ಜೊತೆ ಹೋಗಿ ಕರಡಿ ಹಿಡಿ ದಾಕೆ ಶಿವನಂಜಿ. ಇನ್ನೊಮ್ಮೆ ನಮ್ಮೂರಿನ ಪಟೇಲರ ಮಗಳು ಬಸವಿ ಬಟ್ಟೆ ಒಗೆಯುತ್ತಿದ್ದವಳು ಹೊಳೆಯಲ್ಲಿ ಕೊಚ್ಚಿಹೋದಾಗ; ಊರಿನ

ಈಜುಗಾರ ಬಂಟರೆಲ್ಲಾ ಕಕ್ಕಾವಿಕ್ಕಿಯಾದಾಗ; ಕಚ್ಚೆ ಕಟ್ಟಿ ಕೊಚ್ಚಿ ಹೋಗುತ್ತಿದ್ದ ಬಸವಿಯನ್ನು ಹಿಡಿದು ತಂದವಳು ಶಿವನಂಜಿ. ಕೊಡಲಿ ಹಿಡಿದು ಮರ ಕಡಿಯಲು ನಿಂತರೆ ಯಾವ ಗಂಡಸು ಸಮ ಅವಳಿಗೆ. ಹೀಗಿದ್ದೂ ಅವಳನ್ನು ಮೃದುಮಲ್ಲಿಗೆಯಂಥ ಹೆಣ್ಣು ಎನ್ನಲಾದೀತೆ ?

ಶಿವನಂಜಿ ಸೇರೆಗಾರ ಸಂಕಣ್ಣನ ಮಗಳು. ಹುಟ್ಟಿದವಳೂ ಒಬ್ಬಳೇ–ಬೆಳೆದವಳೂ ಒಬ್ಬಳೇ. ಶಿವನಂಜಿ ಕಣ್ಣು ಬಿಡುವ ಮೊದಲೇ ತಾಯಿ ಕಣ್ಣು ಮುಚ್ಚಿದ್ದಳು.

ಶಿವನಂಜಿ ಪ್ರಾಯದ ಹೆಣ್ಣಾಗಿ ಕಳಕಳಿಸಿದಾಗ ಇವಳ ಕೈಹಿಡಿಯುವ 'ಖದೀಮ' ಯಾರಿದ್ದಾರೆಂದು ಊರಿಗೆ ಊರೇ ಚಿಂತಿಸಿತು. ಊರಿನ ಹೈದರು ಶಿವನಂಜಿ ಎಂದರೆ ಆರುಮಾರು ದೂರದಿಂದಲೇ ಕೈ ಮುಗಿಯು ತ್ತಿದ್ದರು. ಇನ್ನು ಗಂಡು ಎಲ್ಲಿ ಈ ಪಡ್ಡೆ ಹುಡುಗಿಗೆ ?

ಹೊಸಮನಿ ಕಳ್ಳಭಟ್ಟಿ ಅಂಗಡಿ ತೋಪಯ್ಯನ ಪಟ್ಟಶಿಷ್ಯ–ನೀಟಾದ ಹುಡುಗ. ವಯಸ್ಸು ಇಪ್ಪತ್ತೈದರ ಗಡಿ ದಾಟಿರಲಿಲ್ಲ. ಬೆಳವಣಿಗೆಯಲ್ಲಿ ಹುಡುಗ ಸ್ವಲ್ಪ ಪೀಚಾದರೂ ಲಕ್ಷಣವಂಥ. ಮೇಲಾಗಿ ತೋಪಯ್ಯನ ಕಳ್ಳಭಟ್ಟಿ ಸಾಗಾಣಿಕೆಯಿಂದ ನಾಲ್ಕು ಕಾಸು ಕೂಡಿಸಿದ್ದವ. ಪಟ್ಟಣದ ಗಿರಣಿಯೊಂದರಲ್ಲಿ ನೆಪಕ್ಕೆ ಕೆಲಸ ಹಿಡಿದಿದ್ದ. ಅಲ್ಲಿನ ಸಾಹೇಬರಿಗೆಲ್ಲಾ ಇವನ ಕಳ್ಳಭಟ್ಟಿ ಆಶ್ರಯವಾಗಿತ್ತು. ಇದರಿಂದಾಗಿ ಹೊಸಮನಿಯ ಪ್ರತಿಷ್ಠೆ ಗಿರಣಿಯಲ್ಲಿ ಸ್ವಲ್ಪ ಹೆಚ್ಚಿತ್ತು. ಸಣ್ಣಪುಟ್ಟ ನೌಕರರೆಲ್ಲಾ ಹೊಸಮನಿ ಯನ್ನು ಹಿಂಬಾಲಿಸುತ್ತಿದ್ದರು. ಮೇಲಿನ ಅಧಿಕಾರಿಗಳ ಪ್ರೀತಿಗಾಗಿ.

ಹೊಸಮನಿಯ ತಂದೆ–ತಾಯಿ ಯಾರು ಎಂಬುದು ಅವನಿಗೇ ಗೊತ್ತಿರಲಿಲ್ಲ. ಯಾರ ಆಶ್ರಯದಲ್ಲೋ–ಯಾರ 'ಕಿಂಪಳ'ಲ್ಲೋ ಬೆಳೆದು ಬಂದಿದ್ದ. ಸ್ವಬುದ್ಧಿಯಿಂದ ದೊಡ್ಡವರ ಗೌರವ ಗಳಿಸಿ ಗಂಡಸಿನ ಮಾನಕ್ಕೆ ತಕ್ಕಂತೆ ನಾಲ್ಕು ಕಾಸು ಗಳಿಸುತ್ತಿದ್ದ.

ಹಿಂದಿಲ್ಲ–ಮುಂದಿಲ್ಲ ಎನ್ನುವ ಹೊಸಮನಿ ಗಳಿಸಿದ ಹಣಕ್ಕೆ ಖರ್ಚಿನ ನೂರುದಾರಿ ಕಂಡಿದ್ದ. ತನ್ನ ಷೋಕಿ–ಸೂಳೆಯರಿಗೇ ಕಳ್ಳಂಗಡಿ ಹಣ ವೆಲ್ಲಾ ಸುರಿಯುತ್ತಿದ್ದ.

ಪಟ್ಟಣದ ಸಂಸ್ಕೃತಿಗೆ ಹೊಂದಿಕೊಂಡು ನೀಟಾಗಿ ಬರುತ್ತಿದ್ದ ಹೊಸಮುನಿಯನ್ನು ಶಿವನಂಜಿ ಮಾಡಳೂರಿನಲ್ಲಿ ನೂರುಬಾರಿ ನೋಡಿದ್ದಳು. ಅವಳೇ ಎಷ್ಟೋಬಾರಿ 'ಈ ಹೈದ ಎಷ್ಟು ಚೆಂದಾಗವ್ನೆ' ಎಂದು ಕೊಂಡಿದ್ದಳು.

ಹೊಸಮುನಿಯ ಅತಂತರ ಜೀವನವನ್ನು ನೋಡಿದ್ದ ತೋಪಯ್ಯನಿಗೆ ಇದ್ದಕ್ಕಿದ್ದಂತೆ ಯೋಚನೆಯೊಂದು ಹೊಳೆಯಿತು.

ತತ್‌ಕ್ಷಣ ಸೇರೆಗಾರ ಸಂಕಣ್ಣನನ್ನು ಕರೆಸಿ ಹೊಟ್ಟೆಬಿರಿಯ ಹೆಂಡ ಹೊಯ್ದು ಹೊಸಮುನಿಯ ವೃತ್ತಾಂತ ತಿಳಿಸಿದನು. ಪಟ್ಟಣದಲ್ಲಿ ಅವನು ಗಳಿಸಿರುವ ಗೌರವಕ್ಕೆ ಮೆರೆಗುಕೊಟ್ಟು ವರ್ಣಿಸಿದ. ಗಿರಿಣಿಯಲ್ಲಿ ಹಿಡಿದಿರುವ ಕೆಲಸ_ಅವನ ಗುಪ್ತವ್ಯವಹಾರವೆಲ್ಲಾ ಹೇಳಿ, ಸಂಕಣ್ಣನಿಗೆ ನೂರು ರೂಪಾಯಿ ತೆರ ಕೊಡಿಸುವ ಆಸೆ ತೋರಿಸಿ ಶಿವನಂಜಿಯನ್ನು ಕೊಟ್ಟು ಮದುವೆ ಮಾಡು ಎಂದನು.

ಹೆಂಡದ ಅಮಲಿನಲ್ಲಿದ್ದ ಸಂಕಣ್ಣ 'ಹೂಂ' ಎಂದನು.

ಶಿವನಂಜಿಗೂ ಅದೇ ವಶೀಕರಣ. ಹೆಂಡವನ್ನು ಕೊಟ್ಟು ಏನೇನೋ 'ಭೂಕಾಳಿ' ಊದಿದ ತೋಪಯ್ಯ. ಪಟ್ಟಣದ ಬೆಡಗಿನ ಅಮಲೇರಿದ್ದ ಶಿವನಂಜಿ ಹಿಂದು–ಮುಂದು ನೋಡದೆ 'ಹೂಂ' ಎಂದಳು.

ಹೊಸಮುನಿಯನ್ನು ಒಪ್ಪಿಸಿ ಊರಮುಂದಿನ ಮಾರಮ್ಮನ ಗುಡಿಯಲ್ಲಿ ಮದುವೆಯನ್ನು ಮಾಡಿಸಿಬಿಟ್ಟ ತೋಪಯ್ಯ. ಮದುವೆ ಮುಗಿಯುವವರೆಗೂ ಸಂಕಣ್ಣನ ಅಮಲು ಇಳಿಯದಂತೆ ನೋಡಿಕೊಳ್ಳುವ ಏರ್ಪಾಟೂ ಮಾಡಿದ್ದ.

ಊರಿನ ಹೈಕಳೆಲ್ಲಾ ಶಿವನಂಜಿಯ ಮದುವೆ ನೋಡಿ ಬೆಪ್ಪಾದರು. ಹಲವರು 'ಹುಡುಗ ಬಹಳ ಪೀಚು ಶಿವನಂಜಿಗೆ ಯಾತರ ಗಂಡು' ಎಂದುಕೊಂಡರು. ಇನ್ನೂ ಕೆಲವರು 'ನಪ್ತಟಾಲ್ ಎಲ್ಲಿ ಸಿಕ್ಕಿಬಿದ್ದ' ಎಂದುಕೊಂಡರು.

ಅಂತೂ ಮದುವೆಯಾಯಿತು. ಶಿವನಂಜಿ ಹೊಸಮುನಿಯ ಮಡದಿಯಾದಳು. ಮದುವೆಯಾದ ಮೂರೇ ದಿನದಲ್ಲಿ ಮಾಡಳೂರು ಬಿಟ್ಟು

ಹೊಸಮನಿ ಪಟ್ಟಣದಲ್ಲಿ ಮಾಡಿದ ಹೊಸಮನೆಗೆ ನಡೆದುಬಂದಳು ಶಿವನಂಜಿ.

ಎರಡೇ ತಿಂಗಳಲ್ಲಿ ಶಿವನಂಜಿ ಹೊಸಮನಿಯ ಬಾಯಲ್ಲಿ ಬರೀ 'ನಂಜಿ–ಅಪರಂಜಿ' ಯಾದಳು. ಸೇರೆಗಾರ ಹೆಣ್ಣು ಸೊಗಸುಗಾರಳಾದಳು. ಒನಪು–ವೈಯ್ಯಾರಗಳು ಮೂಡಿಬಂದವು. 'ನಂಜಿ' ನಲಿಯುವ ನವಿಲಾದಳು. ಬೆಡಗಿನ ಬೊಂಬೆಯಾದಳು–ಒಟ್ಟಿನಲ್ಲಿ ಎಲ್ಲರೂ ಬಯಸುವ ಬಣ್ಣದ ಬೀಸಣಿಗೆಯಾಗಿ; ಬಿನ್ನಾಣದ ಬೊಂಬೆಯಾದಳು.

ಇದಿಷ್ಟು ಅವಳ ಪೂರ್ವವೃತ್ತಾಂತ. ಆದರೆ ಇದ್ದಕ್ಕಿದ್ದಂತೆ ಒಂದು ದಿನ ಮಾಡಳೂರಿನ ಜನರೆಲ್ಲಾ ದಿಗ್ಭ್ರಮೆಯಾಗುವ ಸುದ್ದಿಯೊಂದು ಬಂದಿತು.

"ಶಿವನಂಜಿ ಹೊಸಮನಿಯನ್ನು ಮಚ್ಚಿನಿಂದ ಕೊಂದು, ತಾನೆ ಖುದ್ದು ಬಂದು ಪೋಲೀಸರ ಖೈದು ಆಗಿದ್ದಾಳೆ. ತನಿಖೆ ನಡೆಯುತ್ತಿದೆ" ಎಂಬ ಸುದ್ದಿ ಕೇಳಿ ಎಲ್ಲರೂ ಅವಕ್ಕಾದರು. ಸಂಕಣ್ಣ ಎದೆ ಬಡಿದುಕೊಂಡ. ಊರಿನ ಹೈಕಳು ಕೆಲವರು ಹೀಗಾಗುತ್ತೆಂದು ಮೊದಲೇ ಗೊತ್ತಿತ್ತು ಎಂದರು.

ಅಂತೂ ಹೊಸಮನಿಯ ಕೊಲೆ ಒಂದು ರಹಸ್ಯವಾಗಿತ್ತು. ಶಿವನಂಜಿ ವಿಚಾರಣೆ ಕಾಲದಲ್ಲಿ ಏನೂ ಹೇಳಿದವಳಲ್ಲ. ಹೊಸಮನಿ ಹೆಚ್ಚಾಗಿ ಕುಡಿಯುತ್ತಿದ್ದನೆಂದು; ಹಾಗೆ ಕುಡಿದಾಗಲೆಲ್ಲಾ ಕೂಗಾಡಿ ತನ್ನನ್ನು ಮೈಮುರಿಯ ಬಡಿಯುತ್ತಿದ್ದನೆಂದು; ಒಂದು ದಿನ ಮಚ್ಚು ಹಿಡಿದು ಶಿವನಂಜಿಯನ್ನು ಕೊಲ್ಲಲು ಬಂದನೆಂದು; ತಾನೂ ರೋಸಿ ಮೈಮೇಲೆ ಪ್ರಜ್ಞೆ ಇಲ್ಲದೆ ಆಕ್ರೋಶ ಬಂದು ಅದೇ ಮಚ್ಚಿನಿಂದ ಅವನ ಕುತ್ತಿಗೆ ಕತ್ತರಿಸಿದಳೆಂದು ಹೇಳಿದ್ದಳು.

ವಿಚಾರಣೆ ಆರು ತಿಂಗಳು ನಡೆದು ಇಂದು ಕೊನೆಯ ತೀರ್ಪು ನ್ಯಾಯಾಧೀಶರು ಹೇಳುವರಿದ್ದರು.

ಶಿವನಂಜಿಯನ್ನು ನೋಡಲೋಸುಗ ಅವಳ ಪರಿಚಿತರೆಲ್ಲರೂ ಬಂದಿದ್ದರು. ಸೇರೆಗಾರ ಸಂಕಣ್ಣ–ಕಳ್ಳಂಗಡಿ ತೋಪಯ್ಯ–ಪೈಲ್ವಾನ್ ಸಿದ್ಧ–ಅವರಿವರೆನ್ನಲೇಕೆ ಊರಿಗೆ ಊರೇ ಬಂದಿತ್ತು.

ಕಛೇರಿ ಗಡಿಯಾರ ಹನ್ನೊಂದು ಬಾರಿಸಿತು. ನ್ಯಾಯಾಧೀಶರು ನ್ಯಾಯಾಲಯದೊಳಗೆ ನಡೆದುಬಂದರು.

ಅತ್ತ ದೂರದಲ್ಲಿ ಪೋಲೀಸರು ಕೈಕೋಳ ಹಾಕಿದ ಶಿವನಂಜಿಯನ್ನು ಕರೆತರುತ್ತಿದ್ದರು.

ಹೆಡ್‌ಕಾನ್ಸ್ಟೇಬಲ್ ಉಗ್ರಪ್ಪ ಕೈಬೇಡಿ ಹಿಡಿದುಕೊಂಡು ಶಿವನಂಜಿಯನ್ನು ನಡೆಸಿಕೊಂಡು ಬರುತ್ತಿದ್ದ.

ಕಾನ್ಸ್ಟೇಬಲ್ ಉಗ್ರಪ್ಪನ ಹೆಜ್ಜೆಗೆ ಸಮಹೆಜ್ಜೆ ಹಾಕಿಕೊಂಡು ಬರುತ್ತಿದ್ದಳು ಶಿವನಂಜಿ. ಅವಳ ಮುಖದಲ್ಲಿ ಯಾವ ಅಂಕೆ-ಶಂಕೆಯೂ ಇರಲಿಲ್ಲ. ನಗುವ ನವವಧುವಿನ ಠೀವಿ ಅವಳಲ್ಲಿತ್ತು.

ಜನಸಮೂಹ ಬರುತ್ತಿದ್ದ ಶಿವನಂಜಿಯನ್ನು ನೋಡಿತು. ಅವಳ ಆ ಠೀವಿ-ಆ ಗಾಂಭೀರ್ಯ ಕಂಡು ಬೆರಗಾದರು.

'ಅಬ್ಬಾ ! ಇವಳ ಧಿಮಾಕೆ ?' ಎಂದಿತು ಸಮೂಹ.

ಅವಳ 'ಪಗರ್' ನೋಡಿರಯ್ಯ ಎಂದರು ಮಾಡಳೂರಿನ ಹೈದರು.

ಶಿವನಂಜಿಗೆ ಇದಾವುದೂ ಕೇಳಿಸಲಿಲ್ಲ. ಅವಳ ಹೃದಯದಲ್ಲಿ ಅಲ್ಲೋಲಕಲ್ಲೋಲವೆದ್ದಿತ್ತು. ಸುತ್ತ ನೆರೆದ ಸಮೂಹ ನೋಡಿದಳು. ಪಕ್ಕಕ್ಕೆ ಒಮ್ಮೆ ತಿರುಗಿದಳು. ಅವನೇ ತನ್ನ ನೆಚ್ಚಿನ ನಲ್ಲ ಉಗ್ರಪ್ಪ ಕೈ ಹಿಡಿದಿದ್ದಾನೆ.

'ಓಹೋ ! ಈ ಸಮೂಹ ನನ್ನ ಮದುವೆ ನೋಡಲು ನೆರೆದಿದೆ' ಎಂದುಕೊಂಡಳು.

ಸುತ್ತ ಇನ್ನೊಮ್ಮೆ ನೋಡಿದಳು ಎಲ್ಲಾದರೂ ಹೊಸಮನಿ ಕಂಡಾನೆಂದು.

"ಅಯ್ಯೋ ! ನನಗೆಲ್ಲೋ ಹುಚ್ಚು ! ನಾನೇ ಕೊಲ್ಲಲಿಲ್ಲವೆ ? ಇಲ್ಲದಿದ್ದರೆ ಉಗ್ರಪ್ಪ ನನ್ನ ಕೈ ಹಿಡಿಯುತ್ತಿದ್ದನೆ!-ಈ ಮದುವೆ ಆಗುತ್ತಿತ್ತೆ?"

ಹುಸಿನಗು ನಕ್ಕಳೊಮ್ಮೆ.

ಜನಸಮೂಹ ಓಹೋ ಎನ್ನುತ್ತಿತ್ತು.

ಶಿವನಂಜಿಗೆ ತಲೆ ಗಿರ್ರೆಂದಿತು. ಅವಳ ಕಣ್ಣುಗಳು ಮಂಜಾದವು.

ನೆತ್ತಿಯಿಂದ ನೆನಪಿನ ಉಂಡೆಗಳು ಉರುಳಿದವು.

"ಏನು ಕೆಲಸ ಮಾಡಿದೆ ಶಿವನಂಜಿ! ಹೊಸಮುನಿಯನ್ನು ಕೊಲ್ಲು ವುದೆ? ನಿನ್ನದು ತಪ್ಪಲ್ಲವೆ?"

ಎಂದಿತು ಅವಳ ಮನಸ್ಸು.

"ತಪ್ಪೇ? ಯಾತರ ತಪ್ಪು! ಆ ಮೂದೇವಿಯನ್ನು ಆದಿನ ನನ್ನ ನಲ್ಲ ಉಗ್ರಪ್ಪ ಬಿಡಿಸದಿದ್ದರೆ ಇದುವರೆಗೂ ಜೈಲಿನಲ್ಲಿ ಕೊಳೆಯಬೇಕಿತ್ತು. ಏನೋ ಕೊಲ್ಲುತ್ತಾನಂತೆ ಉಗ್ರಪ್ಪನನ್ನು. ನೋಡು ಈಗ ಯಾರ ತಲೆ ಎಗರಿತು. ಶಿವನಂಜಿಯನ್ನು ಏನೋತಿಳಿವ ಮೂದೇವಿ"

ತನಗೆ ತಾನೆ ಹೇಳಿಕೊಂಡಳು.

ಶಿವನಂಜಿ ಉಗ್ರಪ್ಪನ ಹೆಜ್ಜೆಗೆ ಸಮಹೆಜ್ಜೆ ಹಾಕಿ ನಡೆಯುತ್ತಲೇ ಇದ್ದಳು. ಅವಳ ನೆತ್ತಿಯಿಂದ ನೆನಪಿನ ಉಂಡೆಗಳು ಜಾರುತ್ತಲೇ ಇದ್ದವು.

ಹೊಸಮುನಿಯನ್ನು ಕೈಹಿಡಿದ ಮೇಲೆ-ಪ್ರಪಂಚವೇನೆಂದು ಅರಿತ ಮೇಲೆ ಶಿವನಂಜಿಯ ತಾರುಣ್ಯ ತುಂಬಿದ ದೇಹದಲ್ಲಿ ಎಲ್ಲಿಲ್ಲದ ಉತ್ಸಾಹ ಬಂದಿತ್ತು. ಮೈಕೈ ತುಂಬಿ ಜಾಲೀಮರದಂತೆ ಗಡುಸಾಗಿ ಬೆಳೆದ ಶಿವನಂಜಿಗೆ ಹೊಸಮುನಿ ನೆಪಕ್ಕೆ ಗಂಡನಾಗಿದ್ದ. ತನಗೆ ಸಾಟಿಯಲ್ಲ ಈ ಗಂಡು ಎಂದು ಹೊಸಮುನಿ ಕೈ ಹಿಡಿದ ಗಳಿಗೆಯಲ್ಲೇ ತಿಳಿದುಕೊಂಡಿದ್ದಳು ಶಿವನಂಜಿ.

ಹೊಸಮುನಿಯೂ ಅಷ್ಟೇ ಅವನಲ್ಲಿ ಏನೇ ದುಡಿಯುವ ಧೀಮಂತಿಕೆ ಇದ್ದರೂ ರಸಿಕತನವಿರಲಿಲ್ಲ. ಶಿವನಂಜಿ ಬಯಸುವ ರಸಿಕತನ ಅವನಲ್ಲಿ ಎಳ್ಳಷ್ಟೂ ಇರಲಿಲ್ಲ. ಅವನ ದೇಹ 'ಖಾಲಿ ಬಾಟಲ್' ಎನ್ನುವಂತಾಗಿತ್ತು. ಪಟ್ಟಣದಲ್ಲಿ ಮನೆ ಮಾಡಿದ ಹೊಸಮುನಿ ಹೆಚ್ಚು ಹಣ ಗಳಿಸುವ ಆಸೆ ಯಿಂದ ತನ್ನ ಮನೆಯನ್ನೇ ಕಳ್ಳಭಟ್ಟಿ ಅಂಗಡಿ ಮಾಡಿದನು. ದಿನಗಳು ಉರುಳಿದಂತೆ ಗಿರಾಕಿಗಳು ಹೆಚ್ಚಿದಂತೆ ಶಿವನಂಜಿಯ ಶೃಂಗಾರವೂ ಹೆಚ್ಚಾ ಯಿತು.

'ನಂಜಿ ಕೈಲಿ ನಂಜು ಕುಡಿದರೂ ಸೊಗಸೆ!"

ಎನ್ನುವಂತಾದರೂ ಗಿರಾಕಿಗಳು.

ಎಲ್ಲರನ್ನೂ ಆಟವಾಡಿಸುತ್ತಿದ್ದಳು ಶಿವನಂಜಿ. ಅವಳ ರೂಪು-

ಅವಳ ಮೈಕಟ್ಟು ಅಂಥದು.

ಅವಳ ಗ್ರಹಚಾರಕ್ಕೆ ಒಂದು ದಿನ ಪೋಲೀಸರು ಗುಪ್ತವಾಗಿ ಬಂದು ಕಳ್ಳಭಟ್ಟಿಯನ್ನು 'ಸೀಜ್' ಮಾಡಿದರು. ಹೊಸಮುನಿಯನ್ನು ಸ್ಟೇಷನಿಗೆ ಎಳೆದು ನಡೆದರು.

ಆಗ ಶಿವನಂಜಿಗೆ ದಿಕ್ಕು ತೋಚದಾಯಿತು. ತಾನೆ ಸ್ಟೇಷನ್ ತನಕಾ ನಡೆದಳು. ತನ್ನ ಗಂಡನನ್ನು ಹಿಡಿದುಕೊಂಡು ಹೋದ ಕಾನ್ಸ್ಟೇಬಲ್ ಉಗ್ರಪ್ಪನ ಕಾಲು ಹಿಡಿದಳು–ಹೊಸಮುನಿಯನ್ನು ಬಿಡಿಸಿಕೊಳ್ಳಲು.

ಹೊಸಮುನಿಯನ್ನು ಬಿಡಲು ಉಗ್ರಪ್ಪ ಸಾಮಾನ್ಯಕ್ಕೆ ಒಪ್ಪಲಿಲ್ಲ. ಶಿವನಂಜಿ ವಶವಾಗದ ಹೊರತು ಉಗ್ರಪ್ಪ ಮನಸ್ಸು ಬದಲಾಯಿಸುವಂತಿರಲಿಲ್ಲ.

ವಿಧಿಯಿಲ್ಲದೆ ಉಗ್ರಪ್ಪನ ಬಯಕೆಯ ಬಳ್ಳಿಯನ್ನು ಮೈಮೇಲೆ ಹಬ್ಬಿಸಿಕೊಂಡಳು.

ಅವರ ಸ್ನೇಹ ಬರುಬರುತ್ತಾ ಪ್ರೇಮವಾಯಿತು. ಮಹಾರಸಿಕ ಉಗ್ರಪ್ಪ ಶಿವನಂಜಿಯ ಬೊಂಬೆಯಾದನು. ಉಗ್ರಪ್ಪನ ಸಹವಾಸದಿಂದ ಅವಳ ಮೈ ತಣಿಯುತ್ತಿತ್ತು. ಇಂಥಾ ಸುಖ ಕೊಡುವ ಹೆಣ್ಣು ತಾನು ನೋಡಿಯೇ ಇಲ್ಲವೆಂದು ಉಗ್ರಪ್ಪನೂ ಹೇಳಿದುದುಂಟು.

ಅಂತೂ ಹೊಸಮುನಿ ಗಿರಣಿಯಲ್ಲಿದ್ದಾಗ ಉಗ್ರಪ್ಪ ಶಿವನಂಜಿ ಮನೆಯಲ್ಲಿ ಡ್ಯೂಟಿಯಲ್ಲಿರುತ್ತಿದ್ದನು.

ಹೀಗೇ ನಡೆದಿತ್ತು ಈ ಸೊಗಸಿನಾಟ.

ಗಿರಣಿ ಕೆಲಸಕ್ಕೆ ಹೋದ ಹೊಸಮುನಿ ಒಂದುದಿನ ತಲೆ ಸುತ್ತುತ್ತೆಂದು ರಜೆ ಪಡೆದು ಮನೆಗೆ ಹಿಂತಿರುಗಿದನು. ಮನೆಯಲ್ಲಿ ಉಗ್ರಪ್ಪನೊಂದಿಗೆ ಸರಸವಾಡುತ್ತಿದ್ದ ಶಿವನಂಜಿ-ತನ್ನ ಅಪರಂಜಿಯನ್ನು ನೋಡಿ ಕಿಡಿಕಿಡಿಯಾದನು. ನೆತ್ತಿ ಉರಿದು ಬಂದಿತು. ಉಗ್ರಪ್ಪನನ್ನು ಕೊಂದು ಬಿಡುತ್ತೇನೆಂದು ಹಾರಾಡಿದನು. ಶಿವನಂಜಿಯನ್ನು ಬೈದು ಮೈಮುರಿಯ ತಳಿಸಿದನು.

ಹೊಸಮುನಿಗೆ ತಲೆಕೆಟ್ಟು ಹೊಟ್ಟೆಬಿರಿಯ ಹೆಂಡ ಹೀರಿ ತೂರಾಡಿ

ದನು. ಬಾಯಿಗೆ ಬಂದಂತೆ ಮಾತಾಡ ಹತ್ತಿದನು.

"ಉಗ್ರ ! ನಿನ್ನನ್ನು ತೀರಿಸಬಿಡುತ್ತೇನೆ"

ಎಂಬ ಸೊಲ್ಲು ಅವನ ಬಾಯಿಂದ ಪುರೆಯಾಗಲಿಲ್ಲ.

ಹೀಗೇ ಎರಡು ದಿನ ಕಳೆದವು. ಅವನ ಕೋಪ ಇಳಿದಿರಲಿಲ್ಲ. ಅಂದು ಹೊರಗೆ ಹೋಗಿ ಮಸೆದ ಮಚ್ಚು ತಂದು ಬಚ್ಚಿಟ್ಟನು.

"ಉಗ್ರ ! ಇಂದು ನಿನ್ನ ತಲೆ ಹಾರಿಸುತ್ತೇನೆ-ಚೆಂಡಾಡಿಬಿಡುತ್ತೇನೆ" ಎಂದು ಆಕ್ರೋಶದಿಂದ ಹೀರಿದನು ಹುಳಿ ಹೆಂಡವನ್ನು.

ಶಿವನಂಜಿಗೂ ತಲೆ ಕೆಟ್ಟಿತ್ತು. ನಾಲ್ಕು ದಿನಗಳಿಂದಲೂ ಉಗ್ರಪ್ಪನ ಸಹವಾಸವಿಲ್ಲದೆ ಸಿಂಹಿಣಿಯಾಗಿದ್ದಳು. ಅಂದು ಉಗ್ರಪ್ಪನನ್ನು ಗುಟ್ಟಾಗಿ ಕಂಡು ಹೊಸಮುನಿಯ ನಿರ್ಧಾರ ತಿಳಿಸಿದಳು.

ಉಗ್ರಪ್ಪ ಗಾಬರಿಯಾದರೂ ಹೊರತೋರಿಸಲಿಲ್ಲ. ಶಿವನಂಜಿಗೆ ಧೈರ್ಯ ಹೇಳಿದನು-ಕಿವಿಯಲ್ಲಿ ಒಂದು ಉಪಾಯ ಹೇಳಿ ಅವಳನ್ನು ಒಪ್ಪಿಸಿದನು.

ಶಿವನಂಜಿ ಸರಸರನೆ ಮನೆಗೆ ಬಂದಳು. ಗಂಡ ಮನೆಯಲ್ಲಿರಲಿಲ್ಲ. ಕೆಲಸಕ್ಕೆ ಹೋಗಿರಬಹುದೆಂದು ತಿಳಿದಳು. ಅಂದು ರುಚಿ ರುಚಿಯಾದ ಅಡಿಗೆ ಮಾಡಿದಳು. ಡಬ್ಬದಲ್ಲಿ ಹುಳು ಹತ್ತುತ್ತಿದ್ದ ಹೆಸರುಕಾಳು ಬೀಸಿ, ಪಾಯಸ ಕಾಯಿಸಿ ಹೊಸಮುನಿಯು ಬರುವನ್ನೇ ಕಾಯತೊಡಗಿದಳು.

ಹೊಸಮುನಿ ರಾತ್ರಿಗೆ ಬಂದನು-ಹುಸಿನಕ್ಕು ಊಟಕ್ಕೆ ಬಡಿಸಿದಳು-ಒಲ್ಲದ ಮನದಿಂದಲೇ ಊಟ ಮುಗಿಸಿದನು-ಊಟ ಪೂರೈಸಿ ಹೆಂಡ ಹೀರಿದನು-ಅಲ್ಲಿಗೆ ಉಗ್ರಪ್ಪನ ಯೋಚನೆಯನ್ನೇ ಮಣಿತಿದ್ದನು.

ಮಧ್ಯಾಹ್ನ ಹೊಸಮುನಿ ತಂದಿಟ್ಟ ಮಚ್ಚಿನ ಜಾಗ ಬದಲಾಯಿಸಿದ್ದಳು ಶಿವನಂಜಿ. ಹೊಸಮುನಿಗೆ ನಿದ್ರೆ ಹತ್ತಿದ ಮೇಲೆ ಮೇಲೆದ್ದು ಮಚ್ಚನ್ನು ಹೊರತೆಗೆದು ಒಮ್ಮೆ ಜಳಪಿಸಿದಳು. ಅದರ ಹರಿತ ಎಷ್ಟು ಎಂದು ಮಚ್ಚಿನ ಅಲುಗಿನ ಮೇಲೆ ಬೆರಳು ಆಡಿಸಿದಳು. ತೊಟ್ಟಿಕ್ಕಿತು ರಕ್ತ ಬೆರಳಿಂದ.

"ಭೇಷ್" ಎಂದುಕೊಂಡಳು.

ಮಚ್ಚು ಹಿಡಿದು ಹೊಸಮುನಿಯ ಹತ್ತಿರ ನಡೆದಳು, ಮಲಗಿದ್ದ ಹೊಸಮುನಿಯ ಕತ್ತನ್ನು ಆ ಕಡೆ-ಈ ಕಡೆ ಒಮ್ಮೆ ಹೊರಳಿಸಿ ನೋಡಿದಳು. ಹೊಸಮುನಿಗೆ ಎಚ್ಚರವಿರಲಿಲ್ಲ-ಪೂರ್ಣನಿದ್ರೆ ಹೋಗಿದ್ದ.

"ಹೊಂ! ಕುಂಭಕರ್ಣ!" ಎಂದುಕೊಂಡು ಮಚ್ಚು ಮೇಲಕ್ಕೆ ಎತ್ತಿದಳು. ಅವಳಿಗೆ ಗಂಡನ ಕುತ್ತಿಗೆಯ ಮೇಲೆ ಮಚ್ಚು ಬಿಡುತ್ತಿದ್ದೇನೆಂದು ಸ್ವಲ್ಪವೂ ಹೆದರಿಕೆಯಾಗಲಿ-ಅಂಜಿಕೆಯಾಗಲಿ ಆಗಲಿಲ್ಲ.

ಲೀಲಾಜಾಲವಾಗಿ ಮಚ್ಚನ್ನು ಹೊಸಮುನಿಯ ಕುತ್ತಿಗೆ ಮೇಲೆ ಬಿಟ್ಟಳು. ಒಂದೇ ಕ್ಷಣದಲ್ಲಿ ಹೊಸಮುನಿಯ ರುಂಡ ಹಾರಿತು. ರಕ್ತದ ಬುಗ್ಗೆ ಅವಳುದ್ದಕ್ಕೂ ಚಿಮ್ಮಿತು. ರೂಮು ರಕ್ತದ ಮಡುವಾಯಿತು.

ಶಿವನಂಜಿಗೆ ರಕ್ತ ನೋಡಿ ತಲೆ ಗಿರ್ರೆಂದು ಸುತ್ತಿ ಬಂದಿತು. ಗಾಬರಿಯಾದಳು-ಎದೆ ಬಡಿದುಕೊಂಡಳು.

"ಅಯ್ಯೋ!" ಎಂದು ಅರುಚಿದಳು.

ನಿಮಿಷಾರ್ಧದಲ್ಲಿ ಅಕ್ಕ-ಪಕ್ಕದ ಮನೆಯವರು ಸೇರಿದರು. ಪೋಲೀಸಿಗೂ ಕಂಪ್ಲೇಂಟ್ ಹೋಯಿತು. ದಫೇದಾರ್ ದೇವಣ್ಣನ ಜೊತೆಯಲ್ಲಿ ಬಂದ ಕಾನ್‌ಸ್ಟೇಬಲ್ ಉಗ್ರಪ್ಪನೇ ಶಿವನಂಜಿಯನ್ನು ಬಂಧಿಸಿದನು. ಮಾಡಿದ ಕೃತ್ಯಕ್ಕಾಗಿ ಶಿವನಂಜಿ ಅಳತೊಡಗಿದಳು.

ಶಿವನಂಜಿಯನ್ನು ಪೋಲೀಸರು "ರಿಮಾಂಡ್" ನಲ್ಲಿಟ್ಟಾಗ ಉಗ್ರಪ್ಪನ ಎದೆ ಬಡಿದುಕೊಳ್ಳಲಾರಂಭಿಸಿತು. ತನ್ನ ಸಂಚು ಬಯಲಾಗಿ ಎಲ್ಲಿ ತನ್ನ ಕೈಗೆ ಕೈಕೊಳ ಬಿದ್ದೀತೆಂದು ಗಾಬರಿಯಾದ.

ಸೆರೆಯಲ್ಲಿದ್ದ ಶಿವನಂಜಿಯನ್ನು ಗುಟ್ಟಾಗಿ ಕಂಡು ಧೈರ್ಯ ಹೇಳಿದ "ಚಿಂತಿಸಬೇಡ! ನಾನಿದ್ದೇನೆ. ಹೆಂಗಸರಿಗೆ ಮರಣದಂಡನೆ ಇಲ್ಲ. ಶಿಕ್ಷೆಯಾದರೆ ನಾಲ್ಕೈದು ವರ್ಷ ಆದೀತು. ಅದರಲ್ಲಿ ರಾಜರ ವರ್ಧಂತಿ-ಅವರಿವರ ಜಯಂತಿಗಳೆಂದು ಎಷ್ಟೋ ಕಮ್ಮಿಯಾಗುತ್ತೆ. ಅನಂತರ ನಿನಗೆ ನಾನೇ ತಾನೆ ಗತಿ" ಎಂದನು.

ಶಿವನಂಜಿಯೂ ಒಪ್ಪಿದಳು. ಜೈಲಿನಿಂದ ಹೊರಬಂದ ಮೇಲೆ ಅವಳಿಗೊಬ್ಬ ಗತಿ ಬೇಕಲ್ಲ.

ದೊಡ್ಡ ಜೈಲಿಗೆ ಶಿವನಂಜಿ ತೆರಳಿದ ಮೇಲೆ ಅಲ್ಲಿಯ ಜೈಲು ಡ್ಯೂಟಿಗೆ ಉಗ್ರಪ್ಪ ವರ್ಗಮಾಡಿಸಿಕೊಂಡ.

ಅಲ್ಲಿಯೂ ಅವಳ ಸುತ್ತ ಕಾವಲಿದ್ದು ತನ್ನ ಬಗ್ಗೆ ಚಕಾರವೆತ್ತದಂತೆ ಮಾಡಿದ್ದ. ರಾತ್ರಿ ಡ್ಯೂಟಿಯಲ್ಲಿದ್ದಾಗ ಅವಳನ್ನು ಮನಸಾರೆ ಒಲಿಸಿಕೊಂಡು ತನ್ನ ಪ್ರೇಮವನ್ನು ವೃದ್ಧಿಮಾಡಿಕೊಂಡಿದ್ದ.

ಈ ಕೊಲೆಯ ಹಿನ್ನೆಲೆಯಲ್ಲಿ ಯಾರಾದರೂ ಇದ್ದಾರೆಂದು ತಿಳಿಯಲು ಪೋಲೀಸರು ಶತಪ್ರಯತ್ನ ಮಾಡಿದರೂ ಶಿವನಂಜಿ ತುಟಿ ಎರಡು ಮಾಡಿರಲಿಲ್ಲ. ತಾನು ಕೊಂದದ್ದು ದಿಟವೆಂದು ಹೇಳಿಯೇ ಬಿಟ್ಟಳು. ಅದು ಉಗ್ರಪ್ಪನ ಮೇಲಿನ ಪ್ರೇಮಕ್ಕಾಗಿ–ಅರ್ಥಾತ್ ವ್ಯಾಮೋಹಕ್ಕಾಗಿ.

ಇಂದು ಅದೇ ಉಗ್ರಪ್ಪ ಅವಳ ಕೊಲೆಯ ತೀರ್ಪಿಗಾಗಿ ಕರೆತರುತ್ತಿದ್ದ. ಅವನ ಮುಖವೆಲ್ಲಾ ಬೆಪರಿತ್ತು. ಅಂದು ಡ್ಯೂಟಿಗೆ ಬರಬಾರದೆಂದು ಏನೇನೋ ನೆಪ ಹೂಡಿದ್ದ. ಆದರೆ ಅವನ ದುರಾದೃಷ್ಟಕ್ಕೆ ಸಾಹೇಬರು ರಜೆ ಕೊಟ್ಟಿರಲಿಲ್ಲ.

ನ್ಯಾಯಾಸ್ಥಾನದಲ್ಲಿ ಕೊನೆಯ ಗಳಿಗೆಯಲ್ಲಿ ಎಲ್ಲಿ ನಿಜಸ್ಥಿತಿ ಹೇಳಿಬಿಡುತ್ತಾಳೋ ಎಂಬ ಹೆದರಿಕೆ ಅವನನ್ನು ಹಿಂಡಿ ಹಿಚುಕತೊಡಗಿತು. ಒಂದು ದೃಷ್ಟಿಯಲ್ಲಿ ನ್ಯಾಯಾಧೀಶರು ತೀರ್ಪು ಕೊಡುವವರೆಗೂ ಅವಳ ಜೊತೆಯಲ್ಲಿರುವುದೇ ಒಳ್ಳೆಯದೆನಿಸಿತು.

ಶಿವನಂಜಿ ರಸ್ತೆಯಲ್ಲಿ ಹುಸಿನಗೆ ನಕ್ಕಾಗ ಅವನ ಜೀವ ಹಾರಿಹೋಗಿತ್ತು.

ತನ್ನಿಂದಲೇ ಶಿವನಂಜಿಗೆ ಈ ಗತಿ ಬಂದುದು ಎಂದು ಅವನ ಹೃದಯ ಸಾರಿಸಾರಿ ಹೇಳತೊಡಗಿತು. ಎಷ್ಟು ಸಮಾಧಾನ ಮಾಡಿಕೊಂಡರೂ ಅವನ ಎದೆ ಬಡಿತ ನಿಲ್ಲಲಿಲ್ಲ.

"ನಾನೇನು ಮಾಡಲಿಕ್ಕಾದೀತು ? ಕೊಲೆಮಾಡಿ ಕೂಗಿಕೊಂಡ ತಪ್ಪು ಯಾರದು ? ಆ ಒಂದು ಗಳಿಗೆ ಸುಮ್ಮನಿದ್ದರೆ ನಾನೆಲ್ಲವನ್ನೂ 'ಅದಬ್' ಮಾಡುತ್ತಿರಲಿಲ್ಲವೆ ? ಈ ಗುಟ್ಟು ಹೇಳಿಕೊಟ್ಟಿದ್ದರೂ ಅವಳ ಅವಿವೇಕದಿಂದ ಕೂಗಿಕೊಂಡು ಸಿಕ್ಕಿಕೊಂಡರೆ ನಾನು ಹೊಣೆಯೇ ?!"

ಎಂದು ಮನಸ್ಸಿಗೆ ನೂರು ಸಮಾಧಾನ ಹೇಳಿಕೊಂಡನು. ಆದರೂ ಅವನ ಹೃದಯ ಬಡಿದುಕೊಳ್ಳುತ್ತಿತ್ತು 'ಕೊಲೆಪಾತಕ' ಎಂದು.

ಅವನು ಶಿವನಂಜಿಯನ್ನು ಒಂದು ಬಾರಿಯೂ ನೋಡಲಿಲ್ಲ. ಜನ ಸಮೂಹವನ್ನೂ ಎದುರಿಸುವ ಧೈರ್ಯ ಬರಲಿಲ್ಲ. ನೆಟ್ಟ ನೋಟ ಇಟ್ಟು ನಡೆಯುತ್ತಿದ್ದನು. ಈಗ ಉಗ್ರಪ್ಪನ ಮನದಲ್ಲಿ ಶಿವನಂಜಿ ಅಪರಾಧಿ ಯಾಗಿರಲಿಲ್ಲ ತಾನೇ ಆಗಿದ್ದನು.

ಇತ್ತ ಶಿವನಂಜಿಗೆ ತಾನು ನ್ಯಾಯಾಧೀಶರ ತೀರ್ಪಿಗಾಗಿ ಹೋಗು ತ್ತಿದ್ದೇನೆಂಬ ಭಾವನೆಯೇ ಬರಲಿಲ್ಲ. ಇಂದು ತನ್ನ ಮತ್ತು ಉಗ್ರಪ್ಪನ ಮದುವೆ-ಮೆರವಣಿಗೆ ನಡೆಯುತ್ತಿದೆ-ಬಯಸಿದ ನಲ್ಲ ಪಕ್ಕದಲ್ಲಿಯೇ ಕೈ ಹಿಡಿದು ನಡೆಯುತ್ತಿದ್ದಾನೆ.

ಜನ ನವ ವಧು-ವರರನ್ನು ನೋಡಿ ಸುಖಿಸುತ್ತಿದೆ ಎಂದುಕೊಂಡಳು.

"ಆವೇಶ ಬಂದು ಹೊಸಮನಿಯನ್ನು ಕೊಂದ ಶಿವನಂಜಿಗೆ ಜೀವಾ ವಧಿ ಶಿಕ್ಷೆ" ಎಂದು ನ್ಯಾಯಾಧೀಶರು ಹೇಳಿದಾಗಲೇ ಶಿವನಂಜಿಯ ಸ್ವಪ್ನ ಒಡೆದು ಎಚ್ಚರವಾದುದು.

ತಾನು ನಿಂತಿರುವುದು ಅಪರಾಧಿ ಸ್ಥಾನವೆಂದು; ತನಗೆ ಶಿಕ್ಷೆ ಜೀವಾ ವಧಿ ಎಂದು ತಿಳಿದಾಗ ಒಮ್ಮೆ ಕೆಕ್ಕರಿಸಿ ನೋಡಿದಳು ಉಗ್ರಪ್ಪನನ್ನು.

ಆದರೇನು ಎಲ್ಲವೂ ಮುಗಿದಿತ್ತು. ಜನ 'ಓಹೋ' ಎಂದು ಕೂಗು ತ್ತಿತ್ತು. ತನ್ನ ನಲ್ಲ ಉಗ್ರಪ್ಪನೇ ದರದರನೆ ಎಳೆಯುತ್ತಿದ್ದ ಮತ್ತೆ ಜೈಲಿಗೆ.

ಈಗ ಶಿವನಂಜಿಗೆ ಅನುಕಂಪ ತೋರಿಸಲು ಉಗ್ರಪ್ಪನೂ ಇಲ್ಲ; ಹೊಸಮನಿಯೂ ಇಲ್ಲ; ಜೈಲಿನ ರಾಗಿ ಬೀಸುವ ಕಲ್ಲು ಮಾತ್ರ ಇತ್ತು.

# ಸುಖ ಸ್ವಪ್ನದ ಸುಳಿಯಲ್ಲಿ....!

"ಜಲಜಾಾ....ಲೇ ಜಲಜಾಾಾ."

"ಆಂ....ಬಂದೇ ಅಕ್ಕಾಾಾ...."

ಜಲಜಾ ಏದುತ್ತಾ ಅಕ್ಕನ ಎದುರು ನಿಂತಳು. ಸೀರೆಯ ನೆರಿಗೆಗಳನ್ನು ಎತ್ತಿ ಸೆರಗಿನ ತುದಿಯಿಂದ ಕಟ್ಟಿ ಸೊಂಟಕ್ಕೆ ಸಿಕ್ಕಿಸಿದ್ದಳು. ಮುಖದಲ್ಲಿ ಬೆವರಿನ ಮುತ್ತುಗಳು ಹರಡಿದ್ದವು.

"ಎಲ್ಲಿಗೆ ಹೋಗಿದ್ದೇs....ಹಾಳಾಗೀs" ಅನ್ನಪೂರ್ಣೆ ತಟ್ಟೆಯಲ್ಲಿ ಅನ್ನ ಕಿವಿಚುತ್ತಾ ಕೇಳಿದಳು.

"ಮಗುವಿನ ಕೊಕ್ಕದ ಬಟ್ಟೆ ಒಗೆಯುತ್ತಿದ್ದೆ."

"ಹೂಂ....ಇದೇನೇ....ಒಂದಿಷ್ಟು ಬೇಳೆನೀರು ಮಾಡಿಡಲು ಬರುವುದಿಲ್ವೇನು....ನಿನಗೆ ?....ಅಯ್ಯೋ !....ಇಷ್ಟೇನೆ ಖಾರ ಸುರಿಯುವುದು!.... ಏಕೆ ನಿಂತಿದ್ದೀಯಾ....ಹೋಗು....ದೇವರ ಮನೇಲಿ ತುಪ್ಪದ ಪಾತ್ರೆ ಇದೆ ತಗೋ....!"

ಜಲಜ ಕೀಲಿಕೊಟ್ಟ ಗೊಂಬೆಯಂತೆ ನಡೆದು ತುಪ್ಪದ ಪಾತ್ರೆ ತಂದು ಬಡಿಸಿದಳು.

ಅನ್ನಪೂರ್ಣೆ ಪಾತ್ರೆ ನೋಡಿದವಳೇ ಕಿರುಚಿದಳು :

"ಏನೇ ಇದು !....ವೀಸೆ ತುಪ್ಪ ತಂದು ವಾರ ಕೂಡ ಆಗಿಲ್ಲ.... ಆಗಲೇ ಪಾತ್ರೆ ತಳ ಕಾಣ್ತಾ ಇದೆಯಲ್ಲೇ"

ಜಲಜಳಿಗೆ ಮುಖ ಭಂಗವಾಯಿತು. ಮಾತನಾಡಲಾಗಲಿಲ್ಲ ಅವಳಿಗೆ. ನಿಂತೇ ಇದ್ದಳು ಮಂತ್ರ ಹಾಕಿದವಳಂತೆ.

"ಒಪ್ಪೊತ್ತಿನ ಊಟವನ್ನಾದರೂ ಬಿಡಬಾರದೇನೆ ಜಲಜ !.... ಹಾಳು ಮೈಯಾದರೂ ಕರಗುತ್ತೆ."

ಅನ್ನಪೂರ್ಣೆ ಕಲಸಿದ ತುತ್ತು ಬಾಯಲ್ಲಿ ಇಡುತ್ತಾ ಹೇಳಿದಳು.

ಜಲಜ ಅಲುಗಾಡಲಿಲ್ಲ. ನಿಂತೇ ಇದ್ದಳು. ಅವಳ ಕಣ್ಣಾಲಿಗಳು ರೆಪ್ಪೆಯ ದಡದಲ್ಲಿ ನಿಂತು ನೀರಲ್ಲಿ ಈಜತೊಡಗಿದವು.

ಇನ್ನಾವುದೇ ಸಂದರ್ಭದಲ್ಲಿ ಅಕ್ಕ ಈ ಮಾತು ಹೇಳಿದ್ದರೆ ಜಲಜ ಸಂತೋಷದಿಂದಲೇ ಸ್ವಾಗತಿಸುತ್ತಿದ್ದಳು. ಆದರೆ ತುಪ್ಪ ತಾನೇ ತಿಂದಿರಬೇಕೆಂಬ ಅಕ್ಕನ ಆಕ್ರೋಶದ ಮಾತು ಬೆಂಕಿಯ ಉಂಡೆಯನ್ನು ಗಂಟಲಲ್ಲಿ ಇಳಿಬಿಟ್ಟಂತಾಗಿತ್ತು. ಅವಳ ಪ್ರತಿಷ್ಠೆಯ ಸರ್ಪವನ್ನು ಕೆಣಕಿದಂತಾಗಿತ್ತು.

ಜಲಜ ಈಗಾಗಲೇ ಒಪ್ಪೊತ್ತಿನ ಊಟ ಬಿಟ್ಟಿದ್ದಳು. ದೇವರು ಅವಳಿಗೆ ತಡೆಯುವ ಶಕ್ತಿ ಕೊಟ್ಟಿದ್ದರೆ ಎರಡು ಹೊತ್ತಿನ ಊಟ ಬಿಡಲೂ ತಯಾರಿದ್ದಳು. ಆ ಒಪ್ಪೊತ್ತಿನ ಊಟವನ್ನು ಬಿಟ್ಟರೆ ದುಡಿಯುವ ಶಕ್ತಿ ? ....ದುಡಿಯದಿದ್ದರೆ ಲೋಕದಲ್ಲಿ ತನ್ನ ಜೀವನ....

ಜಲಜೆಯ ಕಣ್ಣಲ್ಲಿ ಸುರಿಯಿತು ಜಲಪಾತ.

ತೊಟ್ಟಿಲಲ್ಲಿದ್ದ ಹಸುಳೆ ಚಿಟ್ಟನೆ ಚೀರಿತು.

"ಏಕೆ ಗರುಡಗಂಭದ ಹಾಗೆ ನಿಂತ್ಬಿಟ್ಟೆ ?....ಮಗು ಅಳುವುದು ಕೇಳುವುದಿಲ್ವೇನೆ ?"

ಅನ್ನಪೂರ್ಣೆಯ ನುಡಿ ಕೇಳುತ್ತಲೆ ಜಲಜ ಓಡಿದಳು ಬಾಣಂತಿ ರೂಮಿಗೆ. ತೊಟ್ಟಿಲಲ್ಲಿ ಎರಡು ತಿಂಗಳ ಹಾಲು ಹಸುಳೆ ಕಾಲುಗಳನ್ನು ಬಡಿದು ಬಡಿದು ಅಳುತ್ತಿತ್ತು.

ಜಲಜ ಬಗ್ಗಿ ಬಾಚಿ ಎತ್ತಿಕೊಂಡಳು ಮಗುವನ್ನು. ಹೇಸಿಗೆ ಮಾಡಿಕೊಂಡಿದೆಯೋನೋ ಎಂದು ತಡಕಿದಳು. ಹಾಸಿದ ಬಟ್ಟೆ ಹಾಸಿದ ಹಾಗೇ ಇತ್ತು. ಮಗುವಿನ ಅಳು ಮಾತ್ರ ನಿಂತಿರಲಿಲ್ಲ.

ಕುಳಿತು ತೊಡೆಯ ಮೇಲೆ ಹಾಕಿಕೊಂಡು ಲಾಲಿ ಮಾಡಿದಳು.... ಒಂದು ಕಡೆಯ ತೊಡೆ ಕುಣಿಸಿದಳು. ಮಲಗೀತೆಂದು....ಆಡಿಸಿದಳು.... ಮುದ್ದಿಸಿದಳು....ಆದರೂ ಅಳು ನಿಲ್ಲಲಿಲ್ಲ....ಉಸಿರು ಕಟ್ಟಿ ಅಳತೊಡಗಿತು.

ಜಲಜೆಗೆ ಮಗುವಿನ ಅಳು ಅರ್ಥವಾಗಲಿಲ್ಲ........ಸಮಾಧಾನ ಮಾಡಲೂ ಆಗಲಿಲ್ಲ. ಹಾಗೇ ಎದೆಗೆ ಅವುಚಿಕೊಂಡಳು. ಮಗುವಿನ ಪುಟ್ಟ ಬೆರಳುಗಳು ಏನನ್ನೊ ತಡಕಿದವು. ಅವಳ ವಕ್ಷಸ್ಥಳದ ಮೇಲೆ ಮೃದುವಾಗಿ ಆಡತೊಡಗಿದವು....ಮಗು ಏನನ್ನೋ ತಡಕುತ್ತಿತ್ತು.

ಮಗುವನ್ನು ಇನ್ನಷ್ಟು ಎದೆಯ ಸಮೀಪಕ್ಕೆ ತಂದುಕೊಂಡಳು ಜಲಜೆ.

ಮಗು ಹಸಿದಿತ್ತು....ಅದರ ರೋದನ ಹಾಲಿಗಾಗಿ....ತಾಯಿ ಹಾಲಿಗಾಗಿ.......ಎದೆಯ ಹಾಲಿಗಾಗಿತ್ತು. ಆಕ್ಷಣ ಅರಿತಳು ಜಲಜೆ ಆ ರಹಸ್ಯವನ್ನು.

ತಾನೂ ಹೆಣ್ಣಲ್ಲವೇನು ?....ತಾನೂ ತಾಯಿಯಲ್ಲವೇನು ? ಮಗು ತನ್ನದಲ್ಲವೇನು ?

ತನ್ನದೇ ಮಗು....ಇನ್ನಷ್ಟು ಅಪ್ಪಿಕೊಂಡು ಎದೆಯ ಸಮೀಪಕ್ಕೆ ಮಗುವನ್ನು.

ಯಾವುದೋ ಮಧುರ ಸ್ಮೃತಿಗಳು ಅವಳನ್ನು ಪರವಶಳನ್ನಾಗಿ ಮಾಡಿದವು. ಕ್ಷಣಕಾಲ ಕಣ್ಣು ಮುಚ್ಚಿದಳು.

ಉಸಿರು ಸಿಕ್ಕಿ ಮಗು ಕಿಟ್ಟನೆ ಕೀರಿತು.

ಜಲಜ ಹಿಡಿತವನ್ನು ಇನ್ನಷ್ಟು ಬಿಗಿಮಾಡಿದಳು.

ಮಗು ಅತ್ತದ್ದು ನೋಡಿ ಓಡಿಬಂದಳು ಅನ್ನಪೂರ್ಣೆ. ಜಲಜೆಯ ಪರವಶತೆ ಕಂಡು ಸೆಳೆದುಕೊಂಡಳು ಮಗುವನ್ನು.

"ಏನೇ ಇದು ! ಹೀಗೆ ಅವುಚಿಕೊಂಡರೆ ಉಸಿರು ಸಿಕ್ಕಿ ಸಾಯುವುದಿಲ್ಲವೇನೆ ಮಗು. ಗೊಂಬೆಯೇನೇ ಅದು....ಮೈ ಮೇಲೆ ಏನಿರುತ್ತೆ ನಿನಗೆ."

ಅನ್ನಪೂರ್ಣೆ ಒಂದೇ ಸಮನೆ ಒದರಿದಳು.

ಜಲಜೆಯ ಸ್ಮೃತಿ ಸಿನಿಮಾ ನಿಂತಿತು. ಎಚ್ಚೆತ್ತಳು. ನಾಚಿಕೆಯಾಯಿತು. ತಲೆ ತಗ್ಗಿಸಿ ಹಿತ್ತಲ ಕಡೆ ನಡೆದಳು. ಸಾಬೂನು ಹಾಕಿ ನೆನೆಸಿಟ್ಟ ಬಟ್ಟೆಯ ರಾಶಿ ಅವಳನ್ನು ಸ್ವಾಗತಿಸಿತು.

ಧೊಪ್....ಧೊಪ್....ಕಲ್ಲಿನ ಮೇಲೆ ಬಟ್ಟೆಗಳನ್ನು ಬಡಿಯ ತೊಡಗಿದಳು ಜಲಜೆ. ಅವಳ ಮನದ ಕಲ್ಲಿನ ಮೇಲೂ ಒಂದೇ ಸಮನೆ ಏಟುಗಳು ಬೀಳುತ್ತಿದ್ದುವು.

ನೀರು ಚಿಮುಕಿಸಿ ಹಿಸುಕಿದಾಗ ಹೊರಟಿತು ಸುತ್ತ ಸಾಬೂನಿನ ನೊರೆ. ಅವಳ ಮಿದುಳಿಂದಲೂ ಚಿಮ್ಮಿದವು ನೊರೆನೊರೆಯಾಗಿ ನೂರಾರು ಭಾವನೆಗಳು.

ಬೆಳಗಿನಿಂದಲೂ ಅವಳ ಮೈ ಉರಿಯುತ್ತಿತ್ತು. ತಲೆ ಸಿಡಿದು ಹೋಗುತ್ತಿತ್ತು.

ಆ ವಠಾರದಲ್ಲಿರುವ ನಾಲ್ಕು ಮನೆಗೂ ಒಂದೇ ನಲ್ಲಿ. ನೀರು ಬೇಕಾದರೆ ಮುಬ್ಬಿಗೇ ಎದ್ದು ನಲ್ಲಿ ಕೆಳಗೆ ಬಿಂದಿಗೆಯಿಟ್ಟು ಮಿಣ ಮಿಣ ಎಂದು ನಿಲ್ಲಬೇಕು. ಸಾಲದ್ದಕ್ಕೆ ಆ ವಠಾರದಲ್ಲಿ ಕಾಲೇಜು ಕಲಿಯುವ ಹುಡುಗನಿಗೂ ಇದೇ ನಲ್ಲಿ ನೀರು ಪೂರೈಸಬೇಕು.

ಜಲಜ ಅಕ್ಕನ ಮನೆಗೆ ಬಾಣಂತನ ಪೂರೈಸಲು ಬಂದಾಗಲಿನಿಂದ ಮುಸುಕಿನಲ್ಲೇ ಎದ್ದು ನಲ್ಲಿಯ ಬಳಿ ನಿಲ್ಲುವ ವಾಡಿಕೆ....ಇಲ್ಲದಿದ್ದರೆ.... ಅಂದು ಸ್ನಾನ, ಅಡಿಗೆಗೆ ನೀರು ಖೋತಾ.

ಜಲಜ ನಲ್ಲಿಯ ಬಳಿ ಬಂದಾಗಲೇ ಆ ಕಾಲೇಜು ಹುಡುಗ ಟಬ್ಬು ಹಿಡಿದು ಬರಬೇಕೆ? ಅವನ ಮುಖಮಾರ್ಜನ....ಕರವಸ್ತ್ರ ಒಗೆಯುವುದು ....ಅದು, ಇದು....ಎಲ್ಲವೂ ನಲ್ಲಿಯ ಬಳಿಯೇ ಆಗಬೇಕು. ಅವನೇನು ವಠಾರಕ್ಕೆ ಸೇರಿಲ್ಲವೇನು?....ಬಾಡಿಗೆ ಕೊಡುವುದಿಲ್ಲವೇನು?

ಅದೆಲ್ಲವೂ ನಿಜ! ಅವನು ಜಲಜೆಗಾಗಿ ಬರುವನೋ....ನೀರಿಗಾಗಿ ಬರುವನೋ ಸಮಸ್ಯೆಯಾಗಿತ್ತು ಜಲಜೆಗೆ. ಇಂದೂ ಅದೂ ಬಗೆಹರಿದಿತ್ತು.

ಅಂದು ಮುಬ್ಬಿನಲ್ಲಿ ಜಲಜ ನೀರಿಗೆ ಬಂದಾಗ ನಗುತ್ತಾ ಬಂದ ಕಾಲೇಜು ಹುಡುಗ. ಜಲಜೆಯನ್ನು ನೋಡಿ ಕಾಗದವೊಂದನ್ನು ಅಲ್ಲೇ ಉದುರಿಸಿದ್ದ. ಅವನು ಮರೆಯಾದ ಮೇಲೆ ಎತ್ತಿಕೊಂಡು ನೋಡಿದ ಜಲಜೆಗೆ ಎದೆ ಒಡೆದಿತ್ತು.

"ಜಲಜಾ! ನಿನ್ನನ್ನು ಪ್ರೀತಿಸುತ್ತೇನೆ.... ನೀನು?....ಹಾಗಿದ್ದರೆ ಬರೆ...."

ಮುತ್ತಿನಂತೆ ಬರೆದಿದ್ದವು ಅಕ್ಷರಗಳು.

ತಾನೇಕೆ ಆ ಕಾಗದ ಎತ್ತಿಕೊಂಡು ಓದಿದೆ. ಅವನಿಗೇಕೆ ಅಷ್ಟು ಸಲಿಗೆ ಕೊಟ್ಟೆ. ಅಬ್ಬಾ! ಏನು ಧೈರ್ಯ ಅವನಿಗೆ. ಬೆಳಗಿನಿಂದಲೂ ಅವಳ ತಲೆಯಲ್ಲಿ ಹುಳು ಕೊರೆಯುತ್ತಿತ್ತು. ಈ ಯೋಚನೆಯಲ್ಲಿ ಸಾರಿಗೆ ಉಪ್ಪು ಹಾಕಿದ್ದಳೋ ... ಖಾರ ಹಾಕಿದ್ದಳೋ ಅವಳಿಗೇ ತಿಳಿಯದಾಗಿತ್ತು.

ಧೊಪ್... ಧೊಪ್.... ಮತ್ತೆ ಬಡಿದಳು ಕಲ್ಲಿನ ಮೇಲೆ ಬಟ್ಟೆಗಳನ್ನು ....ಹಿಂಡಿ ಹಿಚುಕಿದಳು. ಸಾಬೂನಿನ ನೊರೆಯನ್ನು....ಮಿದುಳಿಂದಲೂ ಮತ್ತೆ ಚಿಮ್ಮಿದವು ನೊರೆನೊರೆಯಾಗಿ ನೂರಾರು ಭಾವನೆಗಳು.

ಅಕ್ಕ ಅದೇತಾನೆ ಅಂದಿದ್ದಳು...."ಒಪ್ಪೊತ್ತಿನ ಊಟವನ್ನಾದರೂ ಬಿಡು ಕರಗಲಿ ಹಾಳು ಮೈ"–ಎಂದು.

ಈ ಮೈ ತನಗೆ ಕರಗಲು ಬಂದುದಲ್ಲ....ಕೇಡಿಗೆ ಬಂದಿರುವ ಮೈ ಎಂದುಕೊಂಡಳು.

ಮೊದಲಿನಿಂದಲೂ ಅವಳ ಬಣ್ಣ....ಅವಳ ಮೈ....ಅವಳ ಸೌಂದರ್ಯ ....ಅವಳಿಗೆ ಸರ್ಪಸದೃಶವಾಗಿತ್ತು.

ಬಾಲ್ಯದ ನೆನಪೊಂದು ಮರುಕಳಿಸಿತು ಜಲಜೆಗೆ.

ಜಲಜ ಹುಟ್ಟಿದ ಹಳ್ಳಿಯಲ್ಲಿ ಪಟೇಲರ ಮಗ ಚಂದ್ರುವಿನ ಚೌಲ ಆಗಿ ಆರತಿ ಆದಾಗ ತಮಾಷೆಗೆ ಹೆಂಗಸರು ಕೇಳಿದ್ದರು :

'ಜಲಜೆಯನ್ನು ಮದುವೆಯಾಗುತ್ತಿಯೋ, ಅನ್ನಪೂರ್ಣೆಯನ್ನೋ' ಎಂದಾಗ.

'ಜಲಜೆ' ಎಂದಿದ್ದ ಪಟೇಲರ ಮಗ.

'ಯಾಕೆ' ಎಂದು ಕೇಳಿದರು ಹೆಂಗಸರು.

'ಅನ್ನಪೂರ್ಣೆ ಕಪ್ಪು, ಒಣಕಲಿ' ಎಂದು ಹೇಳಿದ್ದ ಆ ಕಿಶೋರ.

ಅಲ್ಲಿಂದ ಅವಳ ಮದುವೆ ನೆನಪಾಯಿತು. ಅದೂ ಒಂದು ವಿಚಿತ್ರವೇ ಆಗಿತ್ತು ಅವಳಿಗೆ.

ಅಕ್ಕ–ತಂಗಿಯರು ಇಬ್ಬರೂ ಮದುವೆಗೆ ನಿಂತಿದ್ದ ಮನೆಗೆ ಅಕ್ಕನನ್ನು ನೋಡಲು ಬಂದ ಗಂಡು, ಜಲಜೆಯನ್ನು ನೋಡಿ ತನಗೆ ತಂಗಿಯೇ ಬೇಕೆಂದು ಹಠ ಹಿಡಿದ.

ಹುಡುಕಿಕೊಂಡು ಬಂದ ಸಂಬಂಧ ಬಿಡಲಾರದ ತಂದೆ-ತಾಯಿಗಳು ಅನ್ನಪೂರ್ಣೆಗೂ ಒಂದು ಗಂಡು ಹುಡುಕಿ ಎರಡು ಮದುವೆಯನ್ನೂ ಒಟ್ಟಿಗೆ ಮಾಡಿದರು.

ಆದರೆ ಜಲಜ ಮದುವೆಯಾದ ಆರೇ ತಿಂಗಳಲ್ಲಿ ಪತಿಹೀನೆಯಾದಳು. ಇನ್ನೊಂದು ವಾರವಿತ್ತು ಶೋಭನಕ್ಕೆ-ಗಂಡಿಗೆ ಹೆಣ್ಣಾಗಲಿಕ್ಕೆ.

ಪ್ರಪಂಚವನ್ನೇ ಅರಿಯದ ಜಲಜ ಕಾಣದ, ಒಡನಾಡದ ಗಂಡಿಗಾಗಿ ಹೂವು-ಕುಂಕುಮ-ಬಳೆಗಳನ್ನು ತ್ಯಜಿಸಿದಳು. ಮುಗ್ಧೆ ಜಲಜೆಯನ್ನು ನೋಡಿ ಸಮಸ್ತರೂ ಅನುಕಂಪ ತೋರಿಸಿದರು. ಆ ಅನುಕಂಪದಲ್ಲಿ ಜಲಜೆ ವಿಧವೆ ಎಂದು ಅಚ್ಚೊತ್ತಿದರು. ಅವಳ ಸೌಂದರ್ಯ ಇನ್ನು ಸ್ಮಶಾನ ಸೌಂದರ್ಯ. ಆ ಹೂವು ಇನ್ನು ಪ್ರೇತಪುಷ್ಪ ಎಂದು ಸಾರಿದರು.

ಪತಿಯ ಮನೆಗೇ ಹೋಗದೆ ಪತಿಹೀನೆಯಾದ ಜಲಜೆ ಇನ್ನು ಪತಿ ಸತ್ತ ಮೇಲೆ ಹೋಗಲು ಸಾಧ್ಯವೆ? ಹಾಗೆ ಹೋದರೂ ಅಲ್ಲಿನ ವಾರಗಿತ್ತಿಯರು ಬರಮಾಡಿಕೊಳ್ಳುವರೆ? ಹೇಗೋ ಇಲ್ಲಿಯೇ ಕಾಲ ತಳ್ಳೋಣವೆಂದು ತೌರುಮನೆಗೇ ಅಂಟಿಕೊಂಡಳು.

ಅದೃಷ್ಟಹೀನೆ-ನತದೃಷ್ಟೆ ಜಲಜ ತೌರಿನಲ್ಲೂ ಅತ್ತಿಗೆಯರ ಮಧ್ಯೆ ಸಿಂಹದ ಮರಿಗಳ ಕೈಲಿ ಸರಸ ಎಂಬಂತೆ ಕಾಲ ನೂಕಿದಳು.

ಜಲಜ ಬೇಕಿತ್ತು....ಮನೆಯಲ್ಲಿ ಯಾರಿಗಾದರೂ ಜಡ್ಡಾದಾಗ.... ಅತ್ತಿಗೆಯರು ಬಾಣಂತನ ಪೂರೈಸಿಕೊಳ್ಳುವಾಗ....ಸೇವೆಗಾಗಿ-ದುಡಿಮೆಗಾಗಿ ಜಲಜೆಯ ಅವಶ್ಯಕತೆ ಇತ್ತು. ಮನೆಯಲ್ಲಿ ಎಲ್ಲವೂ ಸುಸೂತ್ರವಾಗಿದ್ದಾಗ ಜಲಜೆಗೇ ಜಡ್ಡಾಗುತ್ತಿತ್ತು....ಬದುಕುವುದೇ ಕಷ್ಟವಾಗುತ್ತಿತ್ತು ....ಎಷ್ಟೋ ವೇಳೆ ದೇವರಲ್ಲಿ ಕೇಳಿಕೊಂಡಿದ್ದಳು....ಈ ಮನೆಗೆ ನನ್ನ ಸೇವೆ ಆಗತ್ಯವಿರುವಂತೆ ಸದಾ ಇಟ್ಟಿರೆಂದು.

ಸಮಪಾಲು ರಕ್ತ ಹಂಚಿಕೊಂಡು ಬಂದ ಅಕ್ಕ ಅನ್ನಪೂರ್ಣೆ ತನಗೆ ಬಂದ ಗಂಡು ಜಲಜೆಗೆ ಗಂಡನಾಗಿ ಅವಳ ಬಾಳ ಬಲಿ ತೆಗೆದುಕೊಂಡ. ಇಂದಿನ ಜಲಜೆಯ ದುಃಸ್ಥಿತಿ ಒಂದು ಕಾಲಕ್ಕೆ ತನಗೆ ಕಾದಿದ್ದ ಸ್ಥಿತಿಯೆಂದು ಜಲಜೆಯ ಬಗ್ಗೆ ಅನುಕಂಪ ತೋರಿಸಿ, ಕಣ್ಣೀರು ಹರಿಸಿ, ತನ್ನ

ಜೊತೆಗೇ ಬಂದುಬಿಡೆಂದು ನಾಲ್ಕಾರು ಕಾಗದಗಳನ್ನು ಬರೆದಿದ್ದಳು.

ಹೆಗ್ಗಣ ಯಾವ ದೇಶ ಸೇರಿದರೇನು ನೆಲ ತೋಡುವುದು ತಪ್ಪೀತೆ.... ಇದ್ದಕಡೆಯೇ ಇರೋಣವೆಂದು ಅಕ್ಕನ ಮಾತಿಗೆ ಕಿವುಡಿಯಾಗಿದ್ದಳು.

ಅನ್ನಪೂರ್ಣೆಗೆ ಎಂಟು ತುಂಬಿ, ಒಂಬತ್ತಕ್ಕೆ ಬಿದ್ದಾಗ ಜಲಜೆಯ ಅವಶ್ಯಕತೆ ಇತ್ತು. ಧೀರ್ಘ ಪತ್ರ ಬರೆದಳು ಜಲಜೆಗೆ.

"ಜಲಜಾ !....ಪ್ರಿಯ ತಂಗೀ,

"....ವಿಧಿ ನಿನಗೆಂತ ಬಾಳು ವಿಧಿಸಿದ... ನಿನ್ನ ಕಣ್ಣೀರು....ದೀನ ಮುಖ....ನನ್ನನ್ನು ಅಗ್ನಿಕುಂಡಕ್ಕೆ ಎಸೆದಿದೆ........ಚಿಂತಿಸಬೇಡ........ನನ್ನ ಉಸಿರು ಇರುವವರೆಗೂ ನಿನ್ನ ಹೊಣೆ ಹೊರುತ್ತೇನೆ....ನೀನೇನು ನನ್ನ ಕರುಳಲ್ಲವೇನು....

"....ಅವರೂ ಹೇಳಿದರು ನಿನ್ನನ್ನು ಇಲ್ಲಿಗೇ ಕರೆಸೆಂದು....ಅಲ್ಲದೆ ನನಗೀಗ ಒಂಬತ್ತು ತಿಂಗಳು........ನಿನ್ನಿಂದಲೇ ನನ್ನ ಮಕ್ಕಳು ಬೆಳೆಯ ಬೇಕು...."

ಇನ್ನೂ ಏನೇನೋ ಬರೆದಿದ್ದಳು....ಜಲಜೆಗೆ ನೆನಪು ಉಕ್ಕಿಬಂತು. ಹಾಗೆಯೇ ಕಲ್ಲಿನ ಮೇಲೆ ಬಟ್ಟೆಯ ಬಡಿತವನ್ನು ಜೋರುಮಾಡಿದಳು.

ಮತ್ತೆ ಮಿದುಳಿಂದ ನುಗ್ಗಿಬಂದವು ನೂರಾರು ನೆನಪುಗಳು.

ಮೊನ್ನೆ ಭಾವ ಎರಡು ವಾಯಿಲ್ ಸೀರೆಗಳನ್ನು ತಂದು ತನಗೊಂದು ಕೊಡಲು ಬಂದಾಗ ಅಕ್ಕ ಅಂದ ಮಾತು :

"ಅವಳಿಗೇಕೆ ಇಂಥ ನವಿರು ಸೀರೆ... ಅವಳ ಕೆಲಸಕ್ಕೆ ಒಂದು ತಿಂಗಳೂ ಬರುವುದಿಲ್ಲ ಇದು."

"ಇರಲಿ ಬಿಡು ! ನಿತ್ಯ ಉಡಲಿಕ್ಕೆ ಬೇರೆ ತಂದರಾಯಿತು. ಅವಳಿಗೇನು ನಿನ್ನ ಹಾಗೆ ಉಟ್ಟು-ತೊಡುವ ಆಸೆಯಿಲ್ಲವೇನು ?"

–ಎಂದು ಭಾವ ಎಂದಿದ್ದರು.

ಅಕ್ಕ ಇದ್ದರೆ ಭಾವ ನನ್ನುವರು ಅನ್ನುತ್ತಾರೆ. ಆದರೆ ಅಂದು ಭಾವನೇ ಅಕ್ಕನಿಗಿಂತ ಹೆಚ್ಚು ಮಾನವೀಯತೆ ಉಳ್ಳವನಾಗಿ ಕಂಡರು.

ಹಾಗೆ ನೋಡಿದರೆ ತನಗಿನ್ನೂ ಹದಿನೆಂಟು ಕೂಡ ತುಂಬಿಲ್ಲ. ತನ್ನ

ವಯಸ್ಸಿನ ಎಷ್ಟೋ ಹುಡುಗಿಯರು ಮದುವೆಯಿಲ್ಲದೆ ಇನ್ನೂ ಮನೆಯಲಿದ್ದಾರೆ....ತಾನು....ಆಗಲೇ....ವಿಧವೆ.

ಜಲಜೆಗೆ ದುಃಖ ಉಮ್ಮಳಿಸಿ ಬಂತು. ಬಿಸಿಲಿನ ತಾಪಕ್ಕೆ ಬಾಯಿ ಒಣಗಿತು. ಬಟ್ಟೆಯ ಬಡಿತ ನಿಲ್ಲಿಸಿ ನಲ್ಲಿ ತಿರುವಿದಳು. ಬೊಗಸೆಯಲ್ಲಿ ನೀರು ಹಿಡಿದು ಕುಡಿದಳು.

ಮತ್ತೀ ಅವೇ ನೆನಪುಗಳು....

ಅಕ್ಕನಿಗೇಕೆ ತನ್ನ ಮೇಲೆ ಇಷ್ಟು ಕೋಪ. ಮಾತು ಮಾತಿಗೂ ರೇಗುತ್ತಾಳೆ. ಭಾವನಿಗೆ ಊಟ ಬಡಿಸಲು ಹೋದರೆ ಎದುರು ಬಂದು ಕುಳಿತುಕೊಳ್ಳುತ್ತಾಳೆ. ಭಾವ ಪ್ರೀತಿಯಿಂದ ಮಾತಾಡಿಸಿದರೆ ಆ ದಿನವೆಲ್ಲಾ ಕೆಕ್ಕರಿಸುತ್ತಿರುತ್ತಾಳೆ....ಅವಳಿಗೇಕೆ ನನ್ನ ಮೇಲೆ ಸಂಶಯ.......ಇನ್ನು ಇಲ್ಲಿರುವುದು ತರವಲ್ಲ....ಹೇಗೂ ಎರಡು ತಿಂಗಳ ಬಾಣಂತನ ಮಾಡಿದ್ದೇನೆ ....ಈಗ ತಣ್ಣೀರು ಮುಟ್ಟಿದರೆ ಪ್ರಮಾದವೇನು ?....ಮಗುವಿಗೆ ಯಾರ ಕೈಲಾದರೂ ನೀರು ಎರೆಸಿಕೊಳ್ಳುತ್ತಾಳೆ.

ಜಲಜ ಒಗೆದ ಬಟ್ಟೆಗಳನ್ನು ನೀರಿನಲ್ಲಿ ಜಾಲಿಸತೊಡಗಿದಳು.

ಘಣ್....ಘಣ್....ಘಣ್....ಸೈಕಲ್ ಶಬ್ದ.

ಜಲಜೆ ಹಿಂತಿರುಗಿದಳು.

ಅವನೇ ಕಾಲೇಜು ಹುಡುಗ....ಕಾಲೇಜು ಪೂರೈಸಿ ರೂಮಿಗೆ ಬಂದಿದ್ದಾನೆ. ಆದರೆ ಬೆಲ್ಲೇಕೆ ಬಾರಿಸಬೇಕು. ತಾನು ನೋಡಲೆಂದು.... ನನ್ನನ್ನು ನೋಡಿದರೆ ಆ ನಗುವೇಕೆ ಅವನಿಗೆ....ಹಾಳಾದ್ದು........ತನ್ನ ಮನಸ್ಸು ಅಷ್ಟೆ....ಎಷ್ಟು ನೋಡಬೇಡವೆಂದುಕೊಂಡರೂ ಅವನ ಕಡೆ ನೋಡುವಂತಾಗುತ್ತೆ....ಅವನು ರೂಮಿನಲ್ಲಿ ಇಲ್ಲದಿದ್ದರೂ ಅವನ ರೂಮಿನ ಕಡೆ ನೋಡುವಂತಾಗುತ್ತೆ....ಹಾಳಾದ್ದು ಮನಸ್ಸು....ಲಂಗು-ಲಗಾಮು ಏನೂ ಇಲ್ಲ ಇದಕ್ಕೆ....ಥೂ....!

ಮತ್ತೆ ಜಾಲಿಸತೊಡಗಿದಳು ಬಟ್ಟೆಗಳನ್ನು.

ಹಾಗೇ ಎದುರುಮನೆ ಪದ್ದು ಸ್ಕೂಲ್ ತೀರಿಸಿಕೊಂಡು ಬಂದಳು.

'ಏನೆ, ಜಲಜಾ ! ಬಿಸಿಲಲ್ಲವೇನೆ ? ಸಾಯಂಕಾಲ ಒಗದರಾಗದೆ....

ದುಡಿ....ಕತ್ತೆಗೆ ಬಿಸಿಲೇನು-ಚಳಿಯೇನು ?'

ಪದ್ಮ ಮಾತನಾಡುತ್ತಲೇ ಒಳಗೆ ನಡೆದಿದ್ದಳು.

ಪದ್ಮ... ಅವಳೂ ತನ್ನಂತೆ ವಿಧವೆ....ಆದರೆ ಸ್ವತಂತ್ರ ಜೀವಿ....ಅವಳಿಗೆ ಅರಸನ ಅಂಕೆಯಿಲ್ಲ; ದೆಯ್ಯದ ಕಾಟವಿಲ್ಲ. ದುಡಿಯುತ್ತಾಳೆ....ತಾಯಿ-ಮಗಳು ಸುಖವಾಗಿದ್ದಾರೆ.

ಆದರೆ ತನ್ನ ಭಾಗ್ಯ....ಸುಟ್ಟ ಭಾಗ್ಯ.

ಜೊತೆಗೆ ಆಸೆಯೊಂದು ಅಂಕುರಿಸಿತು....ಪದ್ಮಳಂತೆ ತಾನೂ ಮೇಡಂ ಆಗಬೇಕೆಂದು. ಪದ್ಮಳಿಗೆ ಗುಟ್ಟಾಗಿ ಹೇಳಿದಾಗ....ತನಗೆ ಎಲ್. ಎಸ್. ಆಗಿದೆಯೆಂದು ಹೇಳಿದ್ದಳು. ಪದ್ಮಳೇ ಅರ್ಜಿ ಬರೆದು, ಅಕ್ಕನಿಗೆ ಸಿನಿಮಾಕ್ಕೆ ಹೋಗುತ್ತೇನೆಂದು ಸುಳ್ಳು ಹೇಳಿ, ಸ್ಕೂಲ್ ಇನ್ಸ್ಪೆಕ್ಟರ್ ಬಳಿ ಕರೆದು ಕೊಂಡು ಹೋಗಿ ಅರ್ಜಿ ಕೊಡಿಸಿದ್ದಳು....ಆಗಲೇ ಹತ್ತಿರ ಹತ್ತಿರ ತಿಂಗಳೆರಡಾಗಿತ್ತು. ಪದ್ಮಳನ್ನು ಆ ಬಗ್ಗೆ ಕೇಳಬೇಕೆನಿಸಿತು.

ಇದುವರೆಗೂ ತಾನು ಕೊಟ್ಟ ಅರ್ಜಿಯ ಬಗ್ಗೆ ಯಾರಿಗೂ ತಿಳಿದಿರಲಿಲ್ಲ.

ಥೂ....ಮೇಡಂ ಕೆಲಸ ...ಅವಮಾನವಲ್ಲವೆ?....ಪದ್ಮಳ ಬಗ್ಗೆ ಎಷ್ಟು ಜನ ಆಡಿಕೊಳ್ಳುವುದಿಲ್ಲ. ಅಕ್ಕನಿಗೆ ಅವಳ ನೆರಳು ಕಂಡರೆ ಆಗದು....

ಆದಿನ ಅರ್ಜಿ ಕೊಡಲು ಹೋಗಿದ್ದಾಗ....ಆ ಇನ್ಸ್ಪೆಕ್ಟರ್ ಹೇಗೆ ಮುರುಮುರು ನೋಡಿದ....ತನಗೆ ಕಾಲು ನಡುಕಹುಟ್ಟಿ ಮೈ ಬೆವರಲಿಲ್ಲವೆ ? ಪದ್ಮ ಇಲ್ಲದೆ ಹೋಗಿದ್ದರೆ....

ಏನಾದರೂ ಅದು ಸ್ವತಂತ್ರ ಜೀವನ....ನಮ್ಮ ಮಾನ ನಮ್ಮ ಕೈಲಿ ಇರುವವರೆಗೂ ಭಯವೇನು ?....ತುತ್ತು ಅನ್ನಕ್ಕಾಗಿ ಇನ್ನೊಬ್ಬರ ಆಶ್ರಯ ತಪ್ಪುತ್ತೆ. ದೇವರ ದಯೆಯಿಂದ ಕೆಲಸ ಸಿಕ್ಕಿದರೆ ಮನೆದೇವರಿಗೆ ತುಪ್ಪದ ದೀಪ ಹಚ್ಚಿಸಿ, ಕುಂಕುಮಾರ್ಚನೆ ಮಾಡಿಸುತ್ತೇನೆ....

ಜಾಲಿಸಿ ಹಿಂಡಿದ ಬಟ್ಟೆಗಳನ್ನು ದಾರದ ಮೇಲೆ ಬಿಡಿಸುತ್ತಿದ್ದಳು.

ಢಣ್....ಢಣ್....ಮತ್ತೆ ಸೈಕಲ್ ಶಬ್ದ.

'ಥೂ ! ಹಾಳು ಹುಡುಗನಿಗೆ ಬೇರೇನೂ ಕೆಲಸವಿಲ್ಲ....ಸುಮ್ಮನೆ

ಕಾಲೇಜಿಗೆ ಹೋಗಲಾಗುವುದಿಲ್ಲವೇನೋ....?'

ಜಲಜೆ ಹಿಂತಿರುಗಿದಳು.

ಪೋಸ್ಟ್‌ಮ್ಯಾನ್, 'ಪೋಸ್ಟ್' ಎಂದನು.

ಪಠಾರದಲ್ಲಿ ಯಾರ ಮನೆಯ ಕಾಗದವೋ ಎಂದು ಜಲಜೆ ತನ್ನ ಕೆಲಸದ ಕಡೆ ಗಮನ ಹರಿಸಿದಳು.

'ಜಲಜಮ್ಮಾ' ಎಂದಾಗ ಪೋಸ್ಟ್‌ಮ್ಯಾನ್, ಜಲಜಾ ಹೃದಯ ಬಡಿದುಕೊಳ್ಳಲಾರಂಭಿಸಿತು.

ಕಾಗದ ಕೈಗೆ ತೆಗೆದುಕೊಂಡಾಗ ಜಲಜೆಯ ಕೈ ನಡುಗಿದವು.

ಪದ್ಮಳೂ ಹೊರಬಂದಳು....ಜಲಜೆಯ ಸ್ಥಿತಿ ನೋಡಿ ತಾನೇ ಕವರನ್ನು ಒಡೆದಳು....ಓದಿದಳು....ಕಣ್ಣು ಅರಳಿಸಿದಳು.

"ಜಲಜಾ ! ಕೆಲಸ ಸಿಕ್ಕಿತುಕಣೇ....ನಮಸ್ಕಾರ ಮೇಡಂ...."

ಪದ್ಮ ಕೂಗಿ ಕೊಂಡಳು.

ಜಲಜಾಗೆ ಸುದ್ದಿ ಕೇಳಿ ಕಾಲು ಕುಸಿದುಬಂದವು. ಬವಳಿ ಬಂದವ ಳಂತೆ ಕುಳಿತುಬಿಟ್ಟಳು.

ಅನ್ನಪೂರ್ಣೆ ಕೂಗಿಕೊಂಡಳು ಒಳಗಿನಿಂದ

"ಜಲಜಾs....ಇನ್ನೂ ಪೂರೈಸಲಿಲ್ಲವೇನೇ ನಿನ್ನ ಬಟ್ಟೆ ಹಿಂಡಾಟ ....ಗಂಟೆ ಮೂರಾಯಿತಲ್ಲೇ....ಸ್ಟೌವ್ ಹೊತ್ತಿಸಿ ಕಾಫಿಗೆ ನೀರಿಡು...."

"ಬಂದೇ....ಅಕ್ಕಾs...."

ಒಳಗೆ ಓಡಿದಳು ಜಲಜಾ ದುಡಿಮೆಯ ನೊಗಕ್ಕೆ ತಲೆಕೊಡಲು.

# ಪಶ್ಚಾತ್ತಾಪ ಬೇಕಿಲ್ಲ....!

ರೋಹಿಣಿಯ ಮನಸ್ಸು ಬೆಳಗಿನಿಂದ ಅಸ್ವಸ್ಥತೆಯ ಅಪ್ಪುಗೆಯಲ್ಲಿತ್ತು. ಪತಿಯ ಆಗಮನದ ನಿರೀಕ್ಷೆ ನಿರಾಶೆಯನ್ನು ತಂದಿತ್ತು. ರೋಹಿಣಿ ಕಾತರಗೊಂಡಿದ್ದಳು-ಕ್ಷುಬ್ಧಳಾಗಿದ್ದಳು.

ಹೀಗೆಯೇ ಉತ್ಸಾಹ-ನಿರುತ್ಸಾಹ ಆಸೆ-ನಿರಾಶೆಗಳನ್ನು ಕಳೆದೆರಡು ವರುಷಗಳಿಂದಲೂ ಸತತವಾಗಿ ಅನುಭವಿಸುತ್ತಾ ಬಂದಿದ್ದಳು. ಆದರೆ ಇಷ್ಟು ದಿನಗಳ ದೀರ್ಘ ವಿರಹ ಅವಳೆಂದೂ ಅನುಭವಿಸಿದವಳಲ್ಲ. ಮೂವತ್ತು ದಿನಗಳ ವಿರಹವದು. ಸಾಮಾನ್ಯವೇನು ?

ಸಂಜೆ ನಾಲ್ಕರ ಬಸ್ಸು ಆಗಲೇ ಬಂದು ಹೋಗಿತ್ತು. ಇನ್ನು 'ಅವರು' ಬರಲಾರರೆಂದು ತಿಳಿದಳು. ಆದರೂ ನನ್ನ ನಿರೀಕ್ಷೆ ನಿಷ್ಫಲವಾಗದೆಂದು ಅಂತರಾತ್ಮ ವಿರುದ್ಧ ನುಡಿಯುತ್ತಿತ್ತು. ಮನದ ಈ ತುಮುಲ ಯುದ್ಧದಲ್ಲಿ ಬೇಸತ್ತು ತನ್ನ ಭಾಗ್ಯ 'ಸೀತಾ ಭಾಗ್ಯ'ವೆಂದು ನಿರ್ಧಾರಕ್ಕೆ ಬಂದು ನಿಟ್ಟುಸಿರೊಂದು ಬಿಟ್ಟಳು, ರೋಹಿಣಿ.

ರೋಹಿಣಿ ತಲಬಾಗಿಲ ಬಳಿ ನಿಂತು ರಸ್ತೆಯ ಕೊನೆಯಂಚಿನವರೆಗೂ ಕಣ್ಣು ಹಾಯಿಸಿದಳು. ಅಷ್ಟೇ ತೀವ್ರವಾಗಿ ಬಯಕೆಯ ಬಳ್ಳಿಯೊಂದು ಅವಳ ಮೈ ಸುತ್ತಿತ್ತು. ಏಕೋ ಮೈ ಜುಂ ಎಂದಿತು. ಎದೆ ನಡುಗಿತು-ತುಟಿಗಳು ಅದುರಿದವು. ಕಣ್ಣಂಚಿನಲ್ಲಿ ನೀರು ನಿಂತಿತು. ನೀರು ತುಂಬಿದ ಕಣ್ಣನ್ನೇ ರೋಹಿಣಿ ಬೀದಿಯುದ್ದಕ್ಕೂ ಚಾಚಿದಳು. ರಸ್ತೆಯ ತುಂಬಾ ಗಂಡಸರು ಓಡಾಡುವುದನ್ನು ನೀರುಗಣ್ಣಿನಲ್ಲೇ ನೋಡಿದಳು.

ಆದರೇನು ? ಅವರಾರು ತನ್ನವರಲ್ಲ ! ಎಂದು ರೋಹಿಣಿ ಕಂಪಿಸಿ ತತ್ತರಿಸಿದಳು. ಅವಳಿಗೆ ಇನ್ನು ಬಾಗಿಲ ಬಳಿ ನಿಲ್ಲಲಾಗಲಿಲ್ಲ. ರೂಮಿಗೆ ಓಡಿ ಹಾಸಿಗೆಯನ್ನು ಬಿಡಿಸಿಕೊಂಡಳು.

ಅವಳ ತಲೆ ಯೋಚನೆಗಳ ಅಂಗಡಿಯಾಯಿತು. ದುಃಖದ ಪ್ರವಾಹ ಏರಿಬಂದಿತು. ಯಾರೋ ಅವಳ ಮೈಯ ಮೂಳೆಗಳನ್ನು ಕತ್ತರಿಸಿ ಮೂಟೆ ಕಟ್ಟಿದಂತಾಗಿತ್ತು. ಮೈ ಎಣ್ಣೆ ಸುರಿದು ಬೆಂಕಿಯು ಹೊತ್ತಿಸಿದಂತೆ ಉರಿಯ ತೊಡಗಿತು. ದುಃಖ ತಡೆಯದಾದಳು; ಮುಗ್ಗುಲಾಗಿ ಹಾಸಿಗೆಗೆ ಬಸಿದಳು ಕಣ್ಣೀರನ್ನು.

ಹಾಗೆ ಒಮ್ಮೆ ಕತ್ತೆತ್ತಿದಳು. ಗೋಡೆಗೆ ನೇತುಬಿಟ್ಟಿದ್ದ ಪತಿಯ ಫೋಟೋ ನಗುತ್ತಿತ್ತು. ಎಂದಿನ ಉತ್ಸಾಹ ಬೀರುವ ನಗುಮುಖವದು. ಎತ್ತಿ ಮೆಟ್ಟಲುಗಳಂತೆ ಕೂರಿಸಿದ ನುಣುಪಾದ ಸುರುಳಿ ಕೂದಲುಗಳು. ನೋಡಿದವರ ಹೃದಯವನ್ನು ಸೆರೆ ಹಿಡಿಯುವ ಅದೇ ತೇಜಃಪುಂಜವಾದ ಕಣ್ಣುಗಳು. ಯಾವ ನೋಟಕ್ಕೆ ಮರುಳಾಗಿ ಸೆರೆಯಾಗಿದ್ದಳೋ ಇಂದು ಅದೇ ನೋಟ ಅವಳ ಕರುಳಿಗೆ ಕಚಗುಳಿ ಇಡುತ್ತಿತ್ತು. ಆ ಕಚುಗುಳಿಯಲ್ಲಿ ರೋಹಿಣಿ ಅಳಲಾರಳು ನಗಲಾರಳಾಗಿದ್ದಳು. ಆ ಅವ್ಯಕ್ತ ವೇದನೆಯಲ್ಲಿ ವಿಲಿವಿಲಿ ಒದ್ದಾಡುವುದನ್ನು ಯಾರಾದರೂ ನೋಡಬಹು ದಿತ್ತು.

ಪತಿಯ ಆ ಹಸನ್ಮುಖದ ಹೃದಯದಲ್ಲಿ ಅಡಗಿರುವ ವಜ್ರಕಾಠಿಣ್ಯ ವನ್ನು ಒಮ್ಮೆ ನೆನೆದಳು. ಪತಿಯಿಂದ ಕಾಗದಗಳನ್ನು ಪಡೆದು ತಿಂಗಳುಗಳೇ ಆಗಿದ್ದವು. ಎಂಥ ಕಲ್ಲೆದೆ ಅವರದು ಎಂದು ನೆನೆದಳು. ಅವಳ ಮುಖ ಗಂಭೀರವಾಯಿತು. ಹೃದಯ ಮಂದಿರಕ್ಕೆ ಕಿಚ್ಚು ಹಚ್ಚಿದಂತಾಯಿತು. ಹೊಟ್ಟೆ ಶೂಲಿ ಬಂದವಳಂತೆ ಹಾಸಿಗೆಯ ಮೇಲೆ ಉರುಳಿ ನರಳಿದಳು.

ರೋಹಿಣಿಯ ಬಾಳಿನಲ್ಲಿ ಕಳೆದೆರಡು ವರುಷಗಳಿಂದಲೂ ಬಿರುಗಾಳಿ ಎದ್ದಿತ್ತು. ಯಾವ ಬಾಳಿಗಾಗಿ ಹಾತೊರೆದು, ಸ್ವಯಂ ಆಹ್ವಾನಿಸಿ ಆಲಂಗಿ ಸಿದ್ದಳೋ ಆ ಬಾಳು ಅವಳಿಗಿಂದು ಶುಷ್ಕವಾಗಿತ್ತು. ಸ್ಮಶಾನ ಸಾದೃಶ ವಾಗಿತ್ತು. ಮದುವೆಗೆ ಪೂರ್ವ ಅವಳು ಕಟ್ಟಿದ್ದ ನೂರು ಭಾವನೆಗಳು–

ಸಹಸ್ರ ಕಲ್ಪನೆಗೆ ಸುಂದರ ಸೌಧ ನೆಲಕ್ಕುರುಳಿ ಬಟ್ಟ ಬಯಲಾಗಿ ಭಣಭಣ ಗುಟ್ಟುತ್ತಿತ್ತು.

ಆಗತಾನೆ ಮೆಟ್ರಿಕ್ ಪಾಸಾದ ರೋಹಿಣಿ ಕಾಲೇಜು ಕಲಿಯುವ ಆಸೆ ವ್ಯಕ್ತಪಡಿಸಿದ್ದಳು. ಕಾಲೇಜು ಕಲಿಕೆಗೆ ಸೊಪ್ಪುಹಾಕದೆ ತಂದೆ-ತಾಯಿಗಳು ವರಾನ್ವೇಷಣೆಯಲ್ಲಿದ್ದುದು ಕಂಡು ಜಿಗುಪ್ಸೆಪಟ್ಟಳು. ಬಂದ ನಾಲ್ಕಾರು ವರಗಳನ್ನು ಪದವೀಧರರಲ್ಲೆಂದು ಮೂಗುಮುರಿದಳು. ನಿರ್ಧನನಾದರೂ ವಿದ್ಯಾಶಾಲಿಯನ್ನು ವರಿಸುವ ದೃಢ ಆಶಯ ವ್ಯಕ್ತಪಡಿಸಿದ್ದಳು.

ಅಂತೆಯೇ ಪದವೀಧರ ವರಾನ್ವೇಷಣೆ ನಡೆದಿತ್ತು. ತಂದೆಯೊಬ್ಬರ ಸ್ನೇಹಿತರ ಮುಖಾಂತರ ವರನಾಗಿ ಬಂದ ವಸಂತನನ್ನು ನೋಡಿ ಮನ ಸೋತಳು ರೋಹಿಣಿ. ತನ್ನ ಮೆಚ್ಚಿಕೆಯ ವರ ಪದವೀಧರನೆಂದು ತಿಳಿದು ಹೃದಯವನ್ನು ಅರ್ಪಿಸಿದಳು. ವಸಂತನ ಮೊದಲ ನೋಟದ ನಗೆಗಣ್ಣಿಗೆ ಪಲ್ಲವಿತ ಪುಷ್ಪವಾದಳು. ಅವನ ಮೋಹಕ ರೂಪಿಗೆ ಬಂದಿಯಾಗಿ ಮುಂದಿನ ಅವ್ಯಕ್ತ ಆನಂದದ ತಿರುಗಣೆಯಲ್ಲಿ ಸುತ್ತಿದಳು. ತನ್ನ ಕಲ್ಪಿತ ವನದಲ್ಲಿ ಸ್ವೇಚ್ಛೆಯಾಗಿ ವಿಹರಿಸಿದಳು. ಅವಳ ಮನದ ವನಕ್ಕೆ ವಸಂತಾಗಮನವಾಯಿತು.

ರೋಹಿಣಿಯ ನಿರ್ಧಾರಕ್ಕೆ ಮನೆಯವರು ಅಸ್ತು ಎಂದರು. ವಸಂತನೊಂದಿಗೆ ರೋಹಿಣಿಯ ಮದುವೆ ನಡೆದುಹೋಯಿತು. ವಸಂತ ಬಡತನದಲ್ಲಿ ಬೆಳೆದಿದ್ದರೂ ಲೌಕಿಕ ತಿಳಿದು ವರದಕ್ಷಿಣೆ ನಿರಾಕರಿಸಿದ್ದ. ವಸಂತನ ಇದೊಂದು ಹಿರಿಯ ಗುಣಕ್ಕೆ ಎಲ್ಲರೂ ಮೆಚ್ಚಿದರು. ರೋಹಿಣಿಯಂತೂ ಪತಿಯ ಉದಾತ್ತ ಗುಣಗಳಿಗೆ ಉಬ್ಬಿ ಉನ್ಮಾದಿನಿಯಾದಳು.

ರೋಹಿಣಿಗೆ ಈ ಪ್ರೇಮೋನ್ಮಾದ ಬಹುದಿನಗಳು ಉಳಿಯಲಿಲ್ಲ. ವಸಂತನ ನಿರ್ಮಲ ಪ್ರೇಮ–ಮುಗ್ಧತೆಯು ಚೆಲುವಿಗಿಂತ ಅವನಲ್ಲಿದ್ದ ಹಣದ ಅಭಾವವನ್ನು ಅರಿತು ಸೊರಗಿದಳು. ತನ್ನ ಹೃನ್ಮಂದಿರದಲ್ಲಿ ಸೃಷ್ಟಿಯಾಗಿದ್ದ ಸುಪ್ತ ಆಕಾಂಕ್ಷೆಯ ಕಲ್ಪಿತ ಹಕ್ಕಿ ಗರಿ ಗೆದರಿದಾಗ, ಹಣದ ಅಭಾವದಿಂದ ಅವುಗಳ ಒಂದೊಂದು ರೆಕ್ಕೆಯೂ ಕಡಿದು ಬೀಳುವುದನ್ನು ನೋಡಿ ಕಂಗಾಲಾಗಿದ್ದಳು. ತನ್ನ ಆಮೋದ–ಪ್ರಮೋದಗಳಿಗೆ ಕಡಿವಾಣ

ಬಿದ್ದು ಪತಿಯಲ್ಲಿ ಸಾಕಷ್ಟು ಹಣವಿಲ್ಲ ಆತ ಕಡುಬಡವ. ಕೇವಲ ಸರ್ಕಾರಿ ಸಂಬಳವೇ ನಮ್ಮೆಲ್ಲರ ಮುಂದಿನ ಬಾಳಿನ ಆನಂದ-ಅಭ್ಯುದಯಕ್ಕೆ ಕಾರಣವೆಂದು ಅರಿತಾಗ ಎಲ್ಲಿಲ್ಲದ ದುಃಖ ಒತ್ತರಿಸಿ ಬರುತ್ತಿತ್ತು.

ತನ್ನ ಒಂದು ಸಣ್ಣ ಬಯಕೆಯನ್ನು ಈಡೇರಿಸಲಾಗದ ಪತಿಯ ಸಾಮರ್ಥ್ಯವನ್ನು ನೆನೆದು ಹಲುಬಿದಳು. ತನ್ನಲ್ಲಿರುವ ವಜ್ರದ ಬೆಂಡೋಲೆಗಳನ್ನು ಕೆಡಿಸಿ ಬದಲಿಗೆ ಮುತ್ತಿನೋಲೆಗಳನ್ನು ಮಾಡಿಸಿರೆಂದು ಮದುವೆಯಾದಂದಿನಿಂದ ಹೇಳುತ್ತ ಬಂದಿದ್ದಳು. ಈ ಬಾರಿ-ಮುಂದಿನ ಬಾರಿ ಮಾಡಿಸುವೆನೆನ್ನುವ ಪತಿಯ ಅಸಹಾಯತೆಯನ್ನು ಕಂಡು ಕನಲಿದಳು. ಆದರೂ ತಾನೇ ಸಾಂತ್ವನಗೊಳ್ಳುತ್ತಿದ್ದಳು. ತಾನು ಪದವೀಧರನ ಹೆಂಡತಿಯಲ್ಲವೆ ? ಮುಂದೆ ತನ್ನ ಗಂಡ ತಹಸೀಲ್ದಾರರೋ ಮಾಮಲೆದಾರನೋ ಆಗಬಾರದೇಕೆ ? ಎಂದು ಪುಲಕಿತಗೊಳ್ಳುತ್ತಿದ್ದಳು.

ಮೊನ್ನೆ ಮೊನ್ನೆ ಮದುವೆಯಾದ ಸುಜಯಳ ಗಂಡ ದೊಡ್ಡ ಅಧಿಕಾರಿಯಾಗಿಲ್ಲವೆ ? ಅವಳ ಮನೆಯಲ್ಲಿ ಆಳುಕಾಳುಗಳಿಲ್ಲವೆ ? ತೌರಿಗೆ ಬಂದಾಗ ಅದೆಷ್ಟು ಗೆಲುವಾಗಿದ್ದಳು ! ನಾನು ಹಾಗಾಗಲಾರನೆ ? ಎಂದು ದಗ್ಧಗೊಂಡ ಹೃದಯದ ಮೇಲೆ ಸಮಾಧಾನದ ನೀರು ಎರೆಯುತ್ತಿದ್ದಳು.

ಇನ್ನಿಷ್ಟು ಕಷ್ಟಗಳು ಬಂದಿದ್ದರೂ ಎದುರಿಸಲು ತಯಾರಿದ್ದಳು ರೋಹಿಣಿ. ಪತಿಯು ಸ್ವತಂತ್ರ ಜೀವನ ಹೂಡಿ ಉದ್ಯೋಗವಿರುವ ಊರಿಗೆ ತನ್ನನ್ನು ಕರೆದೊಯ್ದು ಸಂಸಾರ ನಡೆಸಿದ್ದರೆ ಈ ದುಃಖ ಅವಳ ಪಾಲಿಗೆ ಇರುತ್ತಿರಲಿಲ್ಲ. ತಂದೆಯ ಮನೆಯಲ್ಲೇ ಠಿಕಾಣಿ ಹೂಡಿರುವುದು ಅವಳಿಗೆ ಎಷ್ಟಕ್ಕೂ ಇಷ್ಟವಿಲ್ಲ. ಅದರಲ್ಲೂ ತನ್ನ ಇಬ್ಬರು ಅಣ್ಣಂದಿರ ಹೆಂಡತಿಯರಾದ ಸಾವಿತ್ರಿ-ಸುಕನ್ಯೆಯರ ಭರ್ತ್ಸನೆಯ ಮಾತುಗಳು ಒಂದೊಂದು ಜೀವ ಇರಿಯುವ ಈಟಿಯಾಗಿದ್ದವು. ಅವರ ಮಾರ್ಮಿಕ ಕುಲುಕುಲು ನಗು ಇವಳ ಕರುಳಲ್ಲಿ ಕತ್ತಿಯಾಡಿದಂತಾಗುತ್ತಿತ್ತು.

ತನ್ನ ಅತ್ತಿಗೆಯರನ್ನು ದೂಷಿಸುವುದು ಅಸಹ್ಯವೆನಿಸಿತು. ಅವರು ಶ್ರೀಮಂತ ಪುತ್ರಿಯರು. ಮೇಲಾಗಿ ಪತಿದೇವರುಗಳು ಕೈತುಂಬಾ ಗಳಿಸುವ ವ್ಯಾಪಾರಿಗಳು ಅವರಮಟ್ಟಿಗೆ ಅವರು ಸುಖಿಗಳು. ಆದರೆ ತಾನು ? ಕೊಟ್ಟ

ಹೆಣ್ಣು ಕುಲಕ್ಕೆ ಹೊರಗು! ವರುಷಗಳೆರಡಾದರೂ ಗಂಡನ ಮನೆ ಕಂಡಿಲ್ಲ. ತಾನೊಬ್ಬಳು ಸರಸ್ವತಿ ಒಲಿದ ಭಿಕ್ಷುಕನ ಮಡದಿ....

ರೋಹಿಣಿಗೆ ಸಲ್ಲದ ಯೋಚನೆಗಳು ಬೆನ್ನುಹತ್ತಿದವು.

ತಾನು ವಿದ್ಯಾವಂತನನ್ನು ಬಯಸಿದುದೇ ಮಹಾಪರಾಧವೆಂದು ಭಾವಿಸಿದಳು. ತನ್ನ ಅಕ್ಕ ಸುಜಾತ ಅವಳೆಷ್ಟು ಸುಖಿ ಈಗ! ಭಾವನಿಗೆ ಕನ್ನಡ ಮೂರನೆ ಇಯತ್ತೆಯೂ ಪಾಸಾಗಿಲ್ಲ. ಎಷ್ಟು ಗಳಿಸುತ್ತಿದ್ದಾನೆ! ಅಕ್ಕನ ಮೈಯೆಲ್ಲಾ ಭಂಗಾರ ಮಾಡಿದ್ದಾನೆ. ನನ್ನ ಹಾಗೆ ಅವಳೂ ವಿದ್ಯಾವಂತನನ್ನು ಬಯಸಿದ್ದರೆ ...ಭವತಿ....ಭಿಕ್ಷಾಂದೇಹಿಗೆ ಸಿದ್ಧಳಾಗುತ್ತಿದ್ದಳು.

ರೋಹಿಣಿ ಲಹರಿ ಲಹರಿಯಾಗಿ ಬರುವ ಯೋಚನೆಗಳನ್ನು ಹತ್ತಿಕ್ಕದಾದಳು.

ಈ ಯೋಚನೆಗಳ ಮಧ್ಯೆ ಭೂತದಂತೆ ಶಂಕೆಯೊಂದು ಅವಳ ಮಿದುಳನ್ನು ತೂರಿತು!....ಅವರೇನಾದರೂ ಬೇರೆ ಸಂಸಾರ ಹೂಡಿರುವರೆ? ....ಛೇ! ಎಂಥ ಅವಿಚಾರಗಳು ನನ್ನವು-ನಾನೆಂಥ ದುರ್ವ್ಯಸನೀ ಎಂದು ತನ್ನನ್ನು ತಾನೇ ಸಂಬಾಳಿಸಿಕೊಂಡಳು.

ನುಗ್ಗಿ ಬರುವ ಭಾವತರಂಗಗಳನ್ನು ಅವಳಿಂದ ತಡೆಯಲಾಗಲಿಲ್ಲ. ಮಲಿನಗೊಂಡ ಮನಸ್ಸನ್ನು ಬೇರೆ ಕಡೆಗೆ ಹರಿಸಲು ಕಪಾಟಿನಿಂದ ಪುಸ್ತಕವೊಂದನ್ನು ಎಳೆದುಕೊಂಡಳು-ಅದು ಬೇಂದ್ರೆಯವರ 'ನಾದಲೀಲೆ' ಯಾಗಿತ್ತು.

ಪುಟ ತಿರುವಿದಳು. ಪದ್ಯ ಒಂದರ ಮೇಲೆ ಕಣ್ಣು ಓಡಿದವು.

'ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು!-
ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು
ಹೊಟ್ಟೆಗಿತ್ತ ಜೀವಫಲವ
ತುಟಿಗೆ ಹಾಲು ಜೇನ'

ಎಂಥ ಸೊಗಸಾದ ಪದ್ಯ. ಜೀವನದಲ್ಲಿ ಹೀಗೂ ಇರಲು ಸಾಧ್ಯವೆ? ಇದೆಲ್ಲಾ ಕವಿಯ ಕನಸು ಎಂದಿತು ಮನಸ್ಸು.

ಏಕೋ ಅವಳಿಗೆ ಕೊನೆಯ ಸಾಲುಗಳನ್ನು ಮೆಲಕು ಹಾಕುವಂತಾಯ್ತು

'ಹೊಟ್ಟೆಗಿತ್ತ ಜೀವ ಫಲವ
ತುಟಿಗೆ ಹಾಲು ಜೇನ'

ಇನ್ನೊಮ್ಮೆ ಅದೇ ಸಾಲುಗಳನ್ನು ಓದುವಂತಾಯ್ತು. ಬಲಗೈಲಿ ತನ್ನ ಬಸಿರನ್ನೊಮ್ಮೆ ಮುಟ್ಟಿಕೊಂಡಳು. ಅವಳಿಗೆ ಒಮ್ಮೆಗೇ ಮೈನವಿರೆದ್ದಿತು ಆನಂದದ ಅಲೆಗಳು ಏರಿಬಂದವು. ಸ್ವಪ್ನಾವಸ್ಥೆಯಿಂದ ಜಾಗ್ರತೆಗೊಂಡಳು. ತಾನು ಹೊರಗೆನಿಂತು ತಿಂಗಳೆರಡಾದವೆಂದು ನಕ್ಕಳು.

ಏಕೋ ಮನಸ್ಸು ಪತಿಯನ್ನು ಬಾರಿಬಾರಿಗೂ ನೆನೆಯಿತು. ಸಂಜೆಯ ಕೊನೆಯ ಬಸ್ಸಿಗೆ ಅವರು ಬಂದೇ ಬರುವರು ಎಂದುಕೊಂಡಳು. ಮುಖಕ್ಕೆ ಕನ್ನಡಿ ಹಿಡಿದಳು. ನಾನೆಂಥ ಹುಚ್ಚಿ! ಈ ಸ್ಥಿತಿಯಲ್ಲಿ ನನ್ನ 'ಅವರು' ನೋಡಿದರೆ ಶ್ರವಣಬೆಳಗೊಳದ ವೈರಾಗ್ಯ ಮೂರ್ತಿಯಾಗರೆ? ಎಂದುಕೊಂಡಳು.

ಸರಸರನೆ ಮುಖಮಾರ್ಜನೆ ಮಾಡಿಕೊಂಡಳು. ಹೆರಳು ಹೆಣೆದು ಶೃಂಗರಿಸಿಕೊಂಡಳು.

ದೇವಸ್ಥಾನಕ್ಕೆ ಹೊರಟ್ಟಿದ್ದ ಅತ್ತಿಗೆಯರಿಗೆ ನೆಪಹೇಳಿ ತಪ್ಪಿಸಿಕೊಂಡು ಅಭಿಸಾರಿಕೆಯಂತೆ ಬಾಗಿಲ ಬಳಿ ನಿಂತಳು. ಹಾಗೆ ನೀಲಿಯಾಕಾಶವನ್ನೊಮ್ಮೆ ನೋಡಿದಳು. ಆಗತಾನೆ ಚಂದ್ರ ಮೇಲೇರುತ್ತಿದ್ದ ನಕ್ಕಳೊಮ್ಮೆ ಚಂದ್ರನನ್ನು ನೋಡಿ. ತಾನು ರೋಹಿಣಿಯಲ್ಲವೆ ಚಂದ್ರ ತನ್ನಲ್ಲಿಗೇ ಬರುತ್ತಿರುವಂತೆ ಕಂಡಿತು.

ದೂರದಲ್ಲಿ ಬಸ್ಸಿನ ಕೂಗು ಕೇಳಿಸಿತು. ಮೈಯೆಲ್ಲಾ ಕಣ್ಣು ಮಾಡಿಕೊಂಡು ಬೀದಿಯತ್ತ ನೋಡಿದಳು. ಬಸ್ಸು ಬಂದಿತು. ಮನೆಯ ಮುಂದೆಯೇ ನಿಂತಿತು. ಯಾರೋ ಬಸ್ಸಿಳಿದರು. ಇಳಿದವರು ಹತ್ತಿರ ಹತ್ತಿರ ಬರುತ್ತಿರುವಂತೆ ಕಂಡಿತು. ಅವರೇ ಅವರು ಎಂದುಕೊಂಡಳು

ರೋಹಿಣಿ ಒಳಗೋಡಿದಳು.

ರೋಹಿಣಿಗೇಕೋ ಪತಿಯನ್ನು ನೋಡಿ ಆನಂದವೆಲ್ಲಾ ಅಡಗಿ ಕೋಪ ಏರಿಬಿಂದಿತು. ಇವರೆಂಥ ನಿಷ್ಕರುಣಿಗಳು ಇಷ್ಟುದಿನ ನನ್ನ ನೆನಪಾಗಲಿಲ್ಲವೆ? ಕೊನೆಗೊಂದು ಕಾಗದ ಬೇಡವೆ? ಎಂದುಕೊಂಡಳು. ಚಂದ್ರವದನೆ ಒಮ್ಮೆಗೇ ಕೆಂಡವದನೆಯಾದಳು.

ತನ್ನ ಬರುವನ್ನೇ ನೋಡುತ್ತ ನಿಂತಿದ್ದ ಪತ್ನಿಯನ್ನು ದೂರದಿಂದಲೇ ನೋಡಿ ಉಲ್ಲಸಿತನಾದ ವಸಂತ. ನೂರು ಮೈಲಿಯ ಪ್ರಯಾಣ ಅವನಿಗೆ ಆಯಾಸ ತಂದಿತ್ತು. ಸಾಲದ್ದಕ್ಕೆ ದಾರಿಮಧ್ಯೆ ಬಸ್ಸು ಕೆಟ್ಟು ಬಳಲಿದ್ದ. ಅಂತೂ ಇಂದು ರೋಹಿಣಿಯ ಮುಖ ನೋಡುವೆನೋ, ಇಲ್ಲವೋ ಎಂದು ಭಾವಿಸಿದ್ದ. ರಾತ್ರಿಗಾದರೂ ಊರು ತಲುಪಿದ ತನ್ನ ಸುದೈವಕ್ಕೆ ವಂದಿಸಿ ಮನೆ ಒಳಗೆ ನಡೆದ. ತಾನು ಎಣಿಸಿದ್ದಂತೆ ರೋಹಿಣಿ ಎದುರುಗೊಳ್ಳಲಿಲ್ಲ–ಸ್ವಾಗತದ ನಗೆ ಸೂಸಲಿಲ್ಲ.

ವಸಂತನಿಗೆ ಮನೆಯಲ್ಲಿ ಯಾರೂ ಇದ್ದಂತೆ ಕಾಣಲಿಲ್ಲ. ತಂದಿದ್ದ ಕೈಚೀಲ ಹೂವು_ಹಣ್ಣಿನ ಬುಟ್ಟಿಯನ್ನು ನಡುಮನೆಯಲ್ಲಿಟ್ಟು ರೋಹಿಣಿಯ ರೂಮಿನತ್ತ ನಡೆದ. ರೋಹಿಣಿ ರೂಮಿನಲ್ಲಿ ಗರಬಡಿದವಳಂತೆ ನಿಂತಿದ್ದಳು. ಆ ನಿಶ್ಶಬ್ದತೆ ವಸಂತನಿಗೇಕೋ ಮೈಮೇಲೆರಗಿದ ದೆಯ್ಯದಂತೆ ಕಂಡಿತು. ನಿಧಾನವಾಗಿ ಉಡುಪು ಬದಲಿಸತೊಡಗಿದ.

"ಮಧ್ಯಾಹ್ನವೇ ಏಕೆ ಬರಲಿಲ್ಲ?" ರೋಹಿಣಿ ಮಾತನಾಡಿದಳು.

"ಬರಲಾಗಲಿಲ್ಲ!"

"ಮನೆ ಮಾಡಿದಿರಾ?"

"ಇಲ್ಲಾ!"

"ಏಕೆ?"

ಈ ಮಾತಿಗೆ ಉತ್ತರ ಕೊಡದಾದ ವಸಂತ. ರೋಹಿಣಿ ಏಕೆ ಇಷ್ಟು ಪೀಡಿಸುತ್ತಿದ್ದಾಳೋ ಎನ್ನಿಸಿತು.

"ಏಕಿಷ್ಟು ಆತುರ ರೋಹಿಣಿ?" ವಸಂತನೆಂದ.

"ಆತುರವೇ ನಿಮಗೆ ನಾಚಿಕೆಯಿಲ್ಲದಿದ್ದರೂ ನನಗಿಲ್ಲವೆ? ನಾನಿನ್ನು

ಇಲ್ಲಿ ಕ್ಷಣಕಾಲ ಇರಲಾರೆ!"

ವಸಂತನಿಂದ ಜವಾಬು ಕೊಡಲಾಗಲಿಲ್ಲ. ನೀರವನಾದ.

"ಕಾಗದವೇಕೆ ಬರೆಯಲಿಲ್ಲ?" ರೋಹಿಣಿ ಮತ್ತೆ ಪ್ರಶ್ನಿಸಿದಳು.

"ಬರೆಯಲಾಗಲಿಲ್ಲ!"

"ನಿಮಗೇನೂ ಆಗಲೊಲ್ಲದು! ಇಲ್ಲಿಗೆ ತಾನೆ ಏಕೆ ಬಂದಿರಿ?"

"ಬರಬಾರದಾಗಿತ್ತು. ಬಂದುದಾಯಿತಲ್ಲ!" ವಸಂತನ ಸ್ಪಷ್ಟ ಉತ್ತರದಿಂದ ರೋಹಿಣಿ ಮಾತನಾಡನಾಗಲಿಲ್ಲ. ದುಃಖ ತುಂಬಿಬಂದಿತು. ಆದರೂ ಸೋಲಲಿಲ್ಲ ಹೆಡೆ ತುಳಿದ ಹಾವಿನಂತಾದಳು.

"ಕಾಗದ ಬರೆಯುವುದಾದರೂ ಯಾರಿಗೆ? ಬರೆದ ಪತ್ರಕ್ಕೆ ಜವಾಬು ಬಂದರೆ ತಾನೇ ಬರೆಯುವುದು!"

ವಸಂತ ಮತ್ತೆ ಮಾತನಾಡಿದ.

"ನಾನು ಉತ್ತರ ಬರೆಯುವುದಿಲ್ಲವೆಂದು ಹೇಳಿಲ್ಲವೆ"

"ಆದುದರಿಂದಲೇ ಬರೆಯಲಿಲ್ಲ. ವ್ಯರ್ಥ ಹಣ ಖರ್ಚುಮಾಡಲು ನಾನೇನು ಕುಬೇರನಲ್ಲ."

"ಈಗ ಕೂಡಿಟ್ಟು ಕುಬೇರರಾಗಿಲ್ಲವಲ್ಲ!" ರೋಹಿಣಿ ಮೂದಲಿಸಿ ದಳು.

"ನಾನು ಕುಬೇರರಲ್ಲವೆಂದು ಮದುವೆಗೆ ಮುನ್ನವೇ ನಿನಗೆ ತಿಳಿದಿರ ಬೇಕಲ್ಲ! ಅಂತಿದ್ದು ಮದುವೆ ಏಕಾದೆ?"

"ತಿಳಿದಿತ್ತು. ಆದರೆ ನೀವಿಷ್ಟು ಕಪಡಿಚುಂಬಕರೆಂದು ತಿಳಿದಿರಲಿಲ್ಲ. ಆಗಿಹೋದುದಕ್ಕೆ ಈಗ ಪಶ್ಚಾತ್ತಾಪ ಪಡಬೇಕಾಗಿದೆ."

ಮಾತು ರೋಹಿಣಿಯ ತುಟಿ ಮೀರಿತ್ತು.

"ಪಶ್ಚಾತ್ತಾಪ ಬೇಡ!....ಈಗಲೂ ವಿಚ್ಛೇದನ ನಾಲ್ಕು ಅಕ್ಷರದಲ್ಲಿದೆ ನಮ್ಮ ಅಂತಿಮಬಾಳ್ವೆ."

ಮಾತು ವಸಂತನ ತುಟಿಯನ್ನು ಮೀರಿ ಬಂದಿತ್ತು. ಈರ್ವರ ಮಾತು ಗಳು ಈರ್ವರ ಹೃದಯವನ್ನು ಸೀಳಿ ಹೋಳು ಮಾಡಿದ್ದವು. ರೋಹಿಣಿ ಕಣ್ಣೀರು ಮಿಡಿದು ಹೊರನಡೆದಳು.

ವಸಂತನ ಹೃದಯದ ಮೇಲೆ ಸುತ್ತಿಗೆ ಬಡಿದಂತಾಗಿತ್ತು. ಆಡಬಾರದ ಮಾತು ಆಡಿಯಾಗಿತ್ತು. ಮನಸ್ಸು ಕಸಿವಿಸಿಗೊಂಡಿತ್ತು. ಅವನು ಬಟ್ಟೆ ಬದಲಿಸಿ ಹೊರಬಂದನು.

ಆಗಲೇ ರೋಹಿಣಿಯು ಅತ್ತಿಗೆಯರು ದೇವಸ್ಥಾನದಿಂದ ಮರಳಿ ಯಾಗಿತ್ತು. ವಸಂತನನ್ನು ಕಂಡು 'ಅಳಿಯ ದೇವರು' ಬಂದಾಗಿದೆ ಎಂದು ತನ್ನಲ್ಲೇ ಮಾತನಾಡಿಕೊಂಡು ಒಳ ನಡೆದರು. ಅವರ ನಗೆಮಾತು ವಸಂತನಿಗೆ ತನ್ನ ಮಾನದ ಮಾನಮಾಪಕವಾಗಿ ಕಂಡಿತು.

ತುಸು ಸಮಯದಲ್ಲೇ ಅಂಗಡಿಯಿಂದ ಭಾವಂದಿರು ಬಂದರು. ಪರಸ್ಪರ ಕ್ಷೇಮ ಸಮಾಚಾರ ನಡೆದವು. ಎಲ್ಲಕ್ಕೂ ವಸಂತ "ಹೂಂ" ಗುಟ್ಟದನು. ಭಾವಂದಿರ ಜೊತೆಯಲ್ಲೇ ಊಟವಾಯಿತು. ಎಲ್ಲವೂ ಎಂದಿನಂತೆ ನಡೆದುಹೋಯಿತು. ಆದರೆ ರೋಹಿಣಿ ಮಾತ್ರ ಬದಲಾಗಿದ್ದಳು. ಪೂರ್ಣ ಬದಲಾಗಿದ್ದಳು.

ವಸಂತನಿಗೆ ರಾತ್ರಿ ಬಹಳ ಹೊತ್ತು ನಿದ್ರೆ ಬರಲಿಲ್ಲ. ರೋಹಿಣಿ ಬಂದು ದೀಪವಾರಿಸಿ ಪಕ್ಕದಲ್ಲಿ ಉರುಳಿ ಹೊರಳಿದರೂ ಅದರ ಪರಿವೆ ಅವನಿಗಾಗಲಿಲ್ಲ. ರೋಹಿಣಿಯೂ "ಚ"ಕಾರವೆತ್ತಿ ನುಡಿಯಲಿಲ್ಲ. ಇಬ್ಬರೂ ಒಂದೊಂದು ದಿಕ್ಕಿನಲ್ಲಿ ಯೋಚಿಸುತ್ತಿದ್ದರು. ಅವರ ಯೋಚನೆಗಳು ಧ್ರುವ ದೂರ ಸಾಗಿದ್ದವು.

ತುಟಿ ಮೀರಿ ತಾನಾಡಿದ ಮಾತಿಗಾಗಿ ವಸಂತ ಮಮ್ಮಲ ಮರುಗಿದ, ರೋಹಿಣಿಯಲ್ಲಿ ಆಗಿರುವ ಬದಲಾವಣೆಗಳನ್ನು ತರ್ಕಿಸತೊಡಗಿದ.

"ತನ್ನ ಮನೆ ತಾನು ಸೇರಲು ಹಾತೊರೆಯುವುದು ರೋಹಿಣಿಯು ತಪ್ಪೆ ?" ಎನ್ನಿಸಿತು ವಸಂತನಿಗೆ.

"ಇನ್ನೆಷ್ಟು ದಿನ ತೌರಿನಲ್ಲಿ ಕಾಲ ತಳ್ಳಿಯಾಳು ?"

ಈ ಮಾತಿಗೆ ವಸಂತ ಉತ್ತರ ಕೊಡದಾದ.

ಅವನ ಬಾಳಿನಲ್ಲಿ ಇಂಥವೇ ಸಮಸ್ಯೆಗಳನ್ನು ಎದುರಿಸಿ ಮುಪ್ಪಾಗಿದ್ದ ಕಷ್ಟದ ಸುರಿಮಳೆಗಳಲ್ಲಿ ನೆನೆದು ಕಲ್ಲಾಗಿದ್ದ. ವಿದ್ಯಾಭ್ಯಾಸ ಮುಗಿಸುವುದೇ ದೊಡ್ಡ ಆತಂಕವಾಗಿತ್ತು. ಅಂತೂ ಒಮ್ಮೆ ಮುಗಿಸಿದ್ದ.

ಕೆಲಸಕ್ಕಾಗಿ ಹಲವಾರು ಇಲಾಖೆಗಳನ್ನು ಸುತ್ತಿದ. ಎಲ್ಲಿಯೂ ಖಾಯಂ ಹುದ್ದೆ ಸಿಕ್ಕಿರಲಿಲ್ಲ. ಸಿಕ್ಕಿದ ಹಂಗಾಮಿ ಹುದ್ದೆ ಬಿಡುವ ಚಿತ್ ಶಕ್ತಿ ಅವನಲ್ಲಿರಲಿಲ್ಲ. ತಿಂಗಳು ಪೂರ್ತ ದುಡಿದು ಸಿಗುವ ಒಂದು ದಿನದ ರಜೆಯಲ್ಲೋ ಶನಿವಾರ ಭಾನುವಾರಗಳಲ್ಲೋ ತನ್ನ ಪ್ರಿಯ ವಸ್ತು ರೋಹಿಣಿಯ ಕಡೆ ಓಡಿ ಬರಬೇಕಿತ್ತು. ಅದೂ, ತಿಂಗಳಲ್ಲಿ ಎರಡುಸಾರಿ ಬಂದರೆ ಹೆಚ್ಚು ಖರ್ಚು ಒಂದು ಸಾರಿ ಬಂದರೆ ಕಡಿಮೆ ಎನ್ನುವಂತಾಗಿತ್ತು. ಇದರಿಂದಾಗಿ ಪತಿ ಪತ್ನಿಯರ ಸ್ವಭಾವದಲ್ಲಿ ಮೇಳ ಕೂಡಿಬಂದಿರಲಿಲ್ಲ. ಈರ್ವರ ದಾರಿಯೂ ಇಜ್ಜೋಡಾಗಿತ್ತು.

ವಸ್ತುತಃ ರೋಹಿಣಿಯ ಬಗ್ಗೆ ವಸಂತನಿಗೆ ಅಪಾರ ಪ್ರೇಮ-ಮನೆಯ-ಮನದ ಲಕ್ಷ್ಮಿ ಯಾವಾಗಲೂ ನಗುತ್ತಿರಬೇಕೆಂಬ ಆಸೆ ಅವನದು ಆದರೇನು ಹಣದ ಅಭಾವ ಅನುಕೂಲಗಳು ಅವನ ನೈಜ ಪ್ರೇಮದ ಮೇಲೆ ತೆರೆ ಎಳೆದಿತ್ತು. ಆ ತೆರೆ ತೆರೆದು ನೋಡುವ ಧೀಮಂತಿಕೆ ರೋಹಿಣಿಯಲ್ಲಿರಲಿಲ್ಲ. ಅವಳ ದೃಷ್ಟಿಯಲ್ಲಿ ತನ್ನ ಪತಿ ಸಂಕುಚಿತ ಸ್ವಾರ್ಥಿ-ಜಿಪುಣ-ಹೇಡಿ ಸ್ವಭಾವದವನಾಗಿದ್ದ.

ವಸಂತ ಪರಸ್ಥಳದಲ್ಲಿ ತನ್ನ ಒಂಟಿ ಜೀವನದಲ್ಲಿ ಎರಡು ಹೊತ್ತು ಪೂರ್ಣ ಊಟ ಮಾಡಿದ ದಿನಗಳು ಬಹಳ ಕಡಿಮೆಯಿದ್ದುವು. ರೂಮು ಬಾಡಿಗೆ, ಊಟ, ತಿಂಡಿ, ಸ್ನಾನ ಎಲ್ಲಾ ಕಳೆದು ಉಳಿವ ಹಣದಲ್ಲಿ ಸ್ವಲ್ಪವನ್ನು ಊರಿಗೆ ಕಳುಹಿಸುತ್ತಿದ್ದ. ಅಂಗೈ ಅಗಲ ಹೊಲ ಹಿಡಿದು ಹಳ್ಳಿಯಲ್ಲಿ ಕುಳಿತ ತನ್ನ ತಾಯಿ-ತಮ್ಮನಿಗೆ ಅಷ್ಟು ಕಳಿಸದಿದ್ದರೆ, ಉಳಿದ ರೂಪಾಯಿಗಳನ್ನು ಊರಿಗೆ ಬಂದಾಗ ರೋಹಿಣಿಯ ಕೈಯಲ್ಲಿಡುತ್ತಿದ್ದ.

ಆ ಹಣಕ್ಕೆ ರೋಹಿಣಿಯಲ್ಲಿ ಕವಡೆ ಬೆಲೆ ಇಲ್ಲವೆ ಹೆಚ್ಚಿನದಾಗಿರ ಲಿಲ್ಲ. ಅವಳ ಆಗು-ಹೋಗುಗಳು, ಆಸೆ ಆಕಾಂಕ್ಷೆಗಳಿಗೆ ಆ ಹಣ ರಾವಣನ ಹೊಟ್ಟೆಗೆ ಅರ್ಧ ಸೇರಿನ ಮಜ್ಜಿಗೆ ಎನ್ನುವಂತಾಗಿತ್ತು. ಇದರಿಂದಾಗಿ ಅವಳ ಅತೃಪ್ತಿ ಬೆಳೆಯುತ್ತಿತ್ತೇ ವಿನಾ ಇಂಗಿರಲಿಲ್ಲ.

ರೋಹಿಣಿಯ ಮಾತಿನ ಕತ್ತಿಗೆ ವಸಂತ ಯಾವಾಗಲೂ ತತ್ತರಿ ಸುತ್ತಿದ್ದ. ಅವಳದು ಸಿಡುಕು-ದುಡುಕಿನ ಸ್ವಭಾವ. ಜೊತೆಗೆ ಹಣದ

ಕೊರತೆಯೊಂದು ಸೇರಿ ವಸಂತನ ಮಾನವ ಹೃದಯವನ್ನು ಅರಿಯಲು ಅವಳಿಗಾಗಿರಲಿಲ್ಲ. ಅವನಲ್ಲಿರುವ ಅನುಕಂಪ ದಯಾರ್ದ್ರ ಹೃದಯವನ್ನು ನೋಡಲು ಸದಾ ಕಪಿಮುಷ್ಟಿ ಹಿಡಿಯುವ ರೋಹಿಣಿಗಾಗಿರಲಿಲ್ಲ.

ವಾಸ್ತವವಾಗಿ ರೋಹಿಣಿಯ ಸ್ಥಿತಿ ಮನೆಯಲ್ಲಿ ಉತ್ತಮವಾಗಿರಲಿಲ್ಲ. ತಾಯಿ ತೀರಿದ ಮೇಲೆ ಅತ್ತಿಗೆಯರದೇ ಆಡಳಿತವಾಗಿತ್ತು. ವಯಸ್ಸಾದ ತಂದೆಗೆ ಲೌಕಿಕ ಬೇಕಿರಲಿಲ್ಲ. ಇನ್ನು ಅಣ್ಣಂದಿರ ಪ್ರೀತಿಯೇನೋ ಸಾಕಷ್ಟು ಇತ್ತು. ದುಡಿದು ಬಂದ ಅಣ್ಣಂದಿರಲ್ಲಿ ಅತ್ತಿಗೆಯರ ವಿರುದ್ಧ ದೂರು ಹೇಳುವ ಧೈರ್ಯ ರೋಹಿಣಿಗಿರಲಿಲ್ಲ. ಇದರಿಂದಾಗಿ ಅವಳೆಲ್ಲಾ ಕೋಪಕ್ಕೂ ವಸಂತ ಯಜ್ಞಪಶುವಾಗಿದ್ದ.

ಇತ್ತೀಚಿಗಂತೂ ವಸಂತ ಬಂದಾಗಲೆಲ್ಲಾ ರೋಹಿಣಿಯೊಂದಿಗೆ ಒಂದಲ್ಲ ಒಂದು ಮಾತಿಗೆ ವಿರಸ ಕಟ್ಟಿಕೊಂಡು ಹೋಗುವುದು ಅವನ ಜಾಯಮಾನವಾಗಿತ್ತು. ರೋಹಿಣಿಯ ಉದ್ಧಟತನ ಅವನ ತಾಳ್ಮೆ ಕೆಡಿಸಿ ತಾತ್ಸಾರ ಮೂಡಿಸಿತ್ತು. ಬಾಳ್ವೆಯಲ್ಲಿ ತಾನೊಬ್ಬ ದಿಕ್ಕೇಡಿಯೆಂದು ಭಾವಿಸಿದ. ತನ್ನ ಕರ್ಮವೇ ಪತ್ನಿಯ ರೂಪದಲ್ಲಿ ಕಾಡಿಸುತ್ತಿದೆಯೆಂದು ಪರಿತಪಿಸಿದ.

ಮನೆಯೊಂದನ್ನು ಮಾಡಿ ರೋಹಿಣಿಯನ್ನು ಕರೆತಂದು ಮಹಾರಾಣಿ ಮಾಡಬೇಕೆಂಬ ಆಸೆ ವಸಂತನಲ್ಲಿತ್ತು. ಖಾಯಂ ಹುದ್ದೆಯಿಲ್ಲದೆ ಮನೆ ಮಾಡುವುದೆಂತು? ಇನ್ನೆಷ್ಟು ದಿನ ಈ ನರಕ? ಅವನಿಗೇ ತಿಳಿಯದಾಗಿತ್ತು.

ಬೆಳಕು ಹರಿಯುವವರೆಗೂ ಇದೇ ಚಿಂತನೆಗಳಲ್ಲಿ ವಸಂತನ ಕಣ್ಣಿಗೆ ನಿದ್ರೆ ಹತ್ತಲಿಲ್ಲ. ರೋಹಿಣಿಯನ್ನೊಮ್ಮೆ ಮಾತನಾಡಿಸಬೇಕೆಂದು ಯತ್ನಿಸಿ ವಿಫಲನಾಗಿದ್ದ. ಅವಳಿನ್ನೂ ಕೋಪದ ಗುಂಗಿನಲ್ಲಿದ್ದಳು. ಮಾತಾಡಿಸಿ ಅವಳು ಕೆದರಿದ ಕೆಂಡವಾದುದನ್ನು ಕಂಡು ತೆಪ್ಪಗಾಗಿದ್ದ.

ಬೆಳಕು ಹರಿಯಿತು. ನಿತ್ಯಾಹ್ನಿಕಗಳನ್ನು ತೀರಿಸಿ ವಸಂತ ಬೆಳಗಿನ ಬಸ್ಸಿಗೆ ಪ್ರಯಾಣ ಬೆಳಸಿದ. ಯಾರು ಎಷ್ಟು ಹೇಳಿದರೂ ನಿಲ್ಲದಾದ. ರೋಹಿಣಿಯ ಕಣ್ಣೀರು ಅವನನ್ನು ನಿಲ್ಲಿಸಲಾಗಲಿಲ್ಲ. ಹೊರಟೇಬಿಟ್ಟ. ಬಸ್ಸು ಕಣ್ಮರೆಯಾಗುವವರೆಗೂ ನಿಂತು ನೋಡಿ ರೋಹಿಣಿ ಕಣ್ಣೀರು ಮಿಡಿದಳು.

ತಿಂಗಳಾದರೂ ವಸಂತನಿಂದ ಪತ್ರ ಬರಲಿಲ್ಲ. ರೋಹಿಣಿ ಮಿಡುಕಿದಳು ಅಧೀರಳಾದಳು. ತನ್ನ ಧೂರ್ತತಗೆ ಹೀಯಾಳಿಸಿಕೊಂಡಳು. ಪತಿಯು ಏನೆಲ್ಲಾ ಚಿಂತಿಸುತ್ತಿರುವರು ತನ್ನನ್ನು ಅವರು ತೊರೆದರೆ ಗತಿಯೇನು ಎಂದು ಸೊರಗಿ ಸೊಪ್ಪಾದಳು. ನೂರು ದೇವರಿಗೆ ಹರಕೆ ಹೊತ್ತಳು. ಈ ಬಾರಿ ಅವರು ಬಂದರೆ ತನ್ನ ವೈ ಸುಲಿದು ಅವರ ಕಾಲಿಗೆ ಚಡಾವು ಮಾಡಿ ಕೊಡುವೆನೆಂದುಕೊಂಡಳು.

ರೋಹಿಣಿಯ ಚಿಂತೆ ಮನೆಯವರಲ್ಲೂ ಅಧೀರತೆ ತಂದಿತು. ಕಡೆಗೊಮ್ಮೆ ರೋಹಿಣಿಯ ಅಣ್ಣ ವಸಂತನಿಗೆ ಪತ್ರ ಬರೆದು ತಂಗಿಯ ಸ್ಥಿತಿ ತಿಳಿಸಿದನು. ಅದಕ್ಕೂ ಉತ್ತರ ಬರಲಿಲ್ಲ. ಕೊನೆಗೆ ರೋಹಿಣಿಯ ಅಣ್ಣನೇ ವಸಂತನ ಊರಿಗೆ ಹೋಗಿ ಬರುವುದೆಂದು ತೀರ್ಮಾನಿಸಿದನು.

ಇದ್ದಕ್ಕಿದ್ದಂತೆ ಒಂದುದಿನ ವಸಂತನ ಪತ್ರ ಬಂದಿತು. ಅದೇ ಟಪಾಲಿನಲ್ಲಿ ರೋಹಿಣಿಗೂ ಪತ್ರ ಬಂದಿತ್ತು.

ತಾನು ಮನೆ ಮಾಡಿರುವುದಾಗಿಯೂ; ಮುಂದಿನ ವಾರ ಬಂದು ರೋಹಿಣಿಯನ್ನು ಕರೆದೊಯ್ಯುವುದಾಗಿ ಭಾವನಿಗೆ ಬರೆದಿದ್ದನು.

ರೋಹಿಣಿಗೆ ತನಗೆ ಬಂದ ಕಾಗದವನ್ನು ಒಡೆಯುವಾಗ ಕೈ ನಡುಗಿದವು. ಜೀವ ಹಿಡಿಯಲ್ಲಿ ಹಿಡಿದು ಓದತೊಡಗಿದಳು.

ರೋಹಿಣಿ,

"ನನ್ನ ಮದುವೆಯಾದುದಕ್ಕೆ ಪಶ್ಚಾತ್ತಾಪ ಬೇಕಿಲ್ಲ! ಮನೆ ಮಾಡಿದ್ದೇನೆ. ಇನ್ನು ಸಿದ್ಧಳಾಗು ಸ್ವತಂತ್ರ ಜೀವನಕ್ಕೆ ಇಲ್ಲಿಗೆ ಬರುವ ಮುನ್ನ ನಿನ್ನ ಸಿಡುಕು-ಉದ್ಧಟತನ ತೌರಿನಲ್ಲಿಯೇ ಬಿಟ್ಟು ಹೊಸ ಹೆಣ್ಣಾಗಿ-ಹೊಸ ಜನ್ಮ ತಾಳಿ ಬಾ"

—ಎಂದು ಬರೆದಿದ್ದನು.

ಪತ್ರ ಓದಿ ಎದೆಗವುಚಿಕೊಂಡಳು "ನನ್ನ ದೊರೆ! ನಿಮಗೆ ಇನ್ನಿಷ್ಟು ತೊಂದರೆ ಕೊಡಲಾರೆ ಕ್ಷಮಿಸಿ!" ಎಂದು ಮನದಲ್ಲಿ ವಂದಿಸಿ ಹೇಳಿದಳು.

ಗಂಡನೂರಿಗೆ ಜೊತೆಗೂಡಿ ಹೋಗುವ ದಿನವೂ ಬಂದಿತು. ಎಲ್ಲರೂ ಸಂಭ್ರಮದಲ್ಲಿ ಬೀಳ್ಕೊಟ್ಟರು. ಅಣ್ಣಂದಿರು ಕಣ್ಣೀರು ಕರೆದರು. ತಂದೆ

ಆಶೀರ್ವದಿಸಿದರು. ಅತ್ತಿಗೆಯರು ಬಂದು ಕಿವಿಯಲ್ಲಿ ಹೇಳಿದರು "ರೋಹಿಣಿ ! ಚೊಚ್ಚಲ ಸಂಭ್ರಮವಿದೆ. ಬಾಣಂತಿತನಕ್ಕೆ ಬರುವುದನ್ನು ಮರೆಯಬೇಡ. ದಿನಗಳು ಹತ್ತಿರವಾದಂತೆ ನಿಮ್ಮಣ್ಣನನ್ನು ಕಳುಹಿಸುವೆ" ನೆಂದರು. ಆ ಕ್ಷಣದಲ್ಲಿ ಇವರೆಲ್ಲ ಎಂಥ ಒಳ್ಳೆಯಜನ ಎನ್ನಿಸಿತು ರೋಹಿಣಿಗೆ. ಎಲ್ಲರ ಪಾದಗಳನ್ನೂ ಮುಟ್ಟಿ ಕಣ್ಣೀರು ಮಿಡಿದಳು. ಎಲ್ಲರ ಕಣ್ಣುಗಳೂ ಒಮ್ಮೆ ಹನಿಗೂಡಿದವು.

ಬಸ್ಸು ಹೊರಟಿತು. ಬಂಧನದಲ್ಲಿದ್ದ ಹಕ್ಕಿ ಬಿಡುಗಡೆಹೊಂದಿ ಜೊತೆ ಹಕ್ಕಿಯೊಡಗೂಡಿ ದಿಗಂತದತ್ತ ಹಾರುತ್ತಿರುವಂತೆ ಕಂಡಿತು, ರೋಹಿಣಿಗೆ ಬಸ್ಸಿನ ನಾಗಾಲೋಟ.

ವಸಂತ ಮಾತ್ರ ನಿರ್ವಿಕಾರನಾಗಿದ್ದ ಎಂದಿನ ಹಸನ್ಮುಖ ಅವನಲ್ಲಿ ಮರೆಯಾಗಿರಲಿಲ್ಲ.



# ಎಣ್ಣೆ ಮುಗಿಯಿತು ದೀಪದಲ್ಲಿ !

ತೊಯ್....ತೊಯ್....ತೊಯ್

ಗಂಗಜ್ಜಿ ನಿಮಿಷೆರಡು ನಿಮಿಷ ಉಸಿರು ಕಟ್ಟಿ ಕೆಮ್ಮಿದರು. ಗಂಟಲಲ್ಲಿ ಕಫ ಸುತ್ತಿ ಕಡೆಯು ತೊಡಗಿತು ಮೊಸರೊಳಗಿನ ಮಂತಿನಂತೆ.

ಧೋ....ಧೋ....ಧೋ....ಎಂದು ಹೊರಗೆ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಸುತ್ತಲೂ ಶಿಥಿಲಗೊಂಡ ಗಂಗಜ್ಜಿಯ ಪಾಳುಮನೆಯ ಮಧ್ಯದಲ್ಲಿ ನಾಲ್ಕು ಗೋಡೆಗಳು ಮಾತ್ರ ನಿಂತಿದ್ದುವು ಕೈಕಾಲು ಕಳೆದು ಕೊಂಡ ಹೆಳವನಂತೆ.

ಸಂಜೆ ಆರಂಭವಾದ ಮಳೆ ಒಂದೇಸಮನೆ ಸುರಿಯುತ್ತಿತ್ತು ಜರಡಿ ಯೊಳಗೆ ನೀರು ಸುರಿದ ಹಾಗೆ.

'ಸುಡುಗಾಡು ಮಳೆ' ಆಕಾಶ ತೂತು ಬಿದ್ದಿತೇನು ?

—ಗಂಗಜ್ಜಿ ಕೆಮ್ಮುತ್ತಲೇ ಹೇಳಿಕೊಂಡರು.

ಅಡ್ಡ ಗೋಡೆಯ ಮೇಲೆ ಹಚ್ಚಿಟ್ಟ ಹಣತೆಯ ಉರಿ ಮೊರೋ ಎನ್ನುವ ಗಾಳಿಗೆ ತೊನೆಯುತ್ತಿತ್ತು ಜೋಳದ ತೆನೆಯಂತೆ ಹಸುವಿನ ಬಾಲದ ಗುಚ್ಛದಂತೆ.

ಗಂಗಜ್ಜಿಯ ಏಕಮಾತ್ರ ಬಂಧುವಾದ ನಾಯಿ 'ಕರಿಯ' ಮುಂ ಗಾಲು ಚಾಚಿ ಅದರ ಮೇಲೆ ತನ್ನ ಮೂತಿ ಮಲಗಿಸಿಕೊಂಡು ಬಿಟ್ಟ ಕಂಗಳಿಂದ ಗಂಗಜ್ಜಿಯನ್ನೇ ನೋಡುತ್ತಿದ್ದ.

ಎಪ್ಪತ್ತು ವಯಸ್ಸಿನ ನಿತ್ರಾಣ ದೇಹದ ಗಂಗಜ್ಜಿಯ ನಿಸ್ತೇಜ

ಕಂಗಳಲ್ಲೂ ನೀರು ತುಂಬಿದವು ಕರಿಯನನ್ನು ಕಂಡಾಗ.

"ಹದಿನೈದು ದಿನಗಳಿಂದಲೂ ಹೀಗೆಯೆ ಸತ್ಯಾಗ್ರಹ ಹೂಡಿ ಕುಳಿತಿದ್ದಾನಲ್ಲ! ಬೀದಿ ಸುತ್ತಿ ಒಂದಿಷ್ಟು ಹೊಟ್ಟೆ ತುಂಬಿಸಿಕೊಳ್ಳಬಾರದೆ?" ಎಂದುಕೊಂಡರು. ಮಧ್ಯಾಹ್ನ ತನ್ನ ನೋಡಲು ಬಂದ ಈರವ್ವ ಕೊಟ್ಟಿದ್ದ ಕಿತ್ತಲೆ ಹಣ್ಣಿನಲ್ಲಿ ಉಳಿದಿದ್ದ ತೊಳೆಗಳನ್ನು ಎಸೆದಳು ಕರಿಯನ ಕಡೆಗೆ. ಮೂತಿ ಮೇಲೆತ್ತಿ ಕ್ಯಾಚ್ ಹಿಡಿದು ಚಪ್ಪರಿಸಿದನು ಕ್ರಿಕೆಟ್ ಆಟಗಾರನಂತೆ.

ಅಮಾವಾಸ್ಯೆಯ ಹತ್ತಿರದ ರಾತ್ರಿ. ಮೋಡ ಮುಚ್ಚಿದ ಆಕಾಶದಿಂದಾಗಿ 'ಗವ್' ಎನ್ನುತ್ತಿತ್ತು ಊರು-ಕೇರಿ.

ಎಂಥ ರುದ್ರಭೀಕರ ರಾತ್ರಿಯದು. ಎರಡು ದಿನಗಳಿಂದ ಗಂಜಿಯನ್ನೂ ಕೂಡ ಮಾಡಿಕೊಳ್ಳಲಾರದೆ ಪೂರಾ ಸೊರಗಿದ್ದರು ಗಂಗಜ್ಜಿ. ಜ್ವರ ಬೇರೆ ಏರುತ್ತಲೇ ಇದ್ದಿತು ಉರಿ ಹಾಕಿದ ಹಂಡೆಯೊಳಗಿನ ನೀರಿನಂತೆ.

ಹಚ್ಚಿಟ್ಟ ಹಣತೆಯ ಉರಿ ಹಿಂಗತೊಡಗಿತ್ತು. ಎಣ್ಣೆ ಮುಗಿದಿರಬೇಕೆಂದು ಅರಿವಾದರೂ ಮೇಲೆದ್ದು ಎಣ್ಣೆ ಬಿಟ್ಟು ಕಟ್ಟಿದ ಕಿಟ್ಟವನ್ನು ಉದುರಿಸುವ ಚೈತನ್ಯ ಅವರಲ್ಲಿರಲಿಲ್ಲ.

ಹಿಂಗತೊಡಗಿದ ಉರಿಯನ್ನೇ ದಿಟ್ಟಿಸಿದರು ಗಂಗಜ್ಜಿ. ಹಸಿದವ ಅನ್ನದ ಬುತ್ತಿ ನೋಡುವಂತೆ. ಈ ಎಪ್ಪತ್ತು ವರ್ಷಗಳ ಆಯುಷ್ಯವನ್ನೇ ಆ ಮನೆಯಲ್ಲಿ ಕಳೆದಿದ್ದರು. ಆ ಮನೆಯ ಪ್ರತಿ ಇಟ್ಟಿಗೆಯೂ ಅವರಿಗೆ ಪರಿಚಿತವಾಗಿತ್ತು. ಅವರ ಕಣ್ಣೀರಿನಲ್ಲಿ ಆ ಮನೆ ಪಾವನಗೊಂಡಿತ್ತು. ಅಲ್ಲೇ ಹುಟ್ಟಿ ಅಲ್ಲೇ ಸಾವನ್ನಪ್ಪುವ ಸಮಯ ಒದಗಿತು. ಅವರ ಹಿಂದೆಯೇ ಆ ಮನೆಯ ದೀಪವೂ ಆರತೊಡಗಿತ್ತು.

ಆ ಮನೆಯಲ್ಲಿ ದೀಪ ಹಚ್ಚುವ ಕೂಸೊಂದು ಪಡೆಯಬೇಕೆಂಬ ಆಸೆ ಎಂದೋ ಮುರಿದು ಬಿದ್ದಿತ್ತು. ಈ ಎಪ್ಪತ್ತು ವರ್ಷಗಳ ಅವರ ಜೀವಿತದಲ್ಲಿ ಕೊನರಿದ ಆಸೆಗಳು ಒಂದಲ್ಲ-ಎರಡಲ್ಲ ನೂರಾರು ಆಸೆಗಳು ಚಿಗರುವ ಮುನ್ನವೇ ಕೊಳೆತು ಕಮರಿಹೋಗಿದ್ದುವು. ಒಂದು ಕಮರುವಾಗ ಮತ್ತೊಂದು ಚಿಗುರೊಡೆಯುತ್ತಿತ್ತು. ಅದು ಕಮರುವಾಗ ಮಗದೊಂದು

ಚಿಗುರುತ್ತಿತ್ತು. ಹೀಗೆಯೇ ಆಶಾಜೀವನದ ಸೋಪಾನಗಳನ್ನು ಹತ್ತಿ ಹತ್ತಿ ಮುಗ್ಗರಿಸಿ ಪಾತಾಳ ಕಂಡು ಸೊರಗಿದ್ದರು ಗಂಗಜ್ಜಿ. ಅವರ ಯಾವೊಂದು ಆಸೆಯೂ ನೆರವೇರಿರಲಿಲ್ಲ. ಜೀವಿತದಲ್ಲಿ ವಿಧಿ ಅವರ ಬಾಳಿನುದ್ದಕ್ಕೂ ಕುಸ್ತಿಯಾಡಿತ್ತು.

ಮಳೆಯು ಹನಿಯಿಂದಾಗಿ ಸೋರಿ ನೆಲವೆಲ್ಲಾ ತೇವವಾಗಿತ್ತು. ಹಾಸಿದ್ದ ಹರುಕಲು ಹಾಸಿಗೆ ತಣ್ಣಗಾಗಿತ್ತು. ಹಿಡಿದ ಜಡಿ ಮಳೆಯಿಂದಾಗಿ ಗವ್ ಎನ್ನುವ ಆ ರಾತ್ರಿ ಗಂಗಜ್ಜಿಯ ಎದೆ ನಡುಗಿಸಿತು.

"ಎಂಥ ಕರಾಳ ರಾತ್ರಿ" ಎಂದುಕೊಂಡರು.

ಇಂತಹದೇ ರುದ್ರರಾತ್ರಿಯಲ್ಲಿ ಗಂಗಜ್ಜಿಯ ಜನನ ಅದೇ ಮನೆಯಲ್ಲಿ ಆಗಿತ್ತೆಂದು ತನ್ನಜ್ಜ ಹೇಳುತ್ತಿದ್ದುದು ಜ್ಞಾಪಕ ಬಂದಿತು. ಅಲ್ಲಿಂದ ಅವರು ಹೆಣ್ತನ ಕಂಡುದು ಇಂಥವೇ ರಾತ್ರಿಯಲ್ಲಿ. ಮದುವೆಯಾಗಿ ಪತಿಯ ಸಮಾಗಮವನ್ನು ಕಂಡಿದ್ದು ಇಂತಹದೇ ಗುಡುಗು ಮಿಂಚುಳ್ಳ ರಾತ್ರಿಯಲ್ಲಿ. ಕೈ ಬಳೆಗಳನ್ನು ಚಚ್ಚಿಸಿಕೊಂಡು ಕರೀಮಣಿ ಆರಿಸಿಕೊಂಡುದು ಇಂತಹದೇ ಭೀಷಣ ರಾತ್ರಿಯಲ್ಲಿ. ಇಂದೂ ಅಂತಹದೇ ಕರಾಳ ರಾತ್ರಿ! ಗಂಗಜ್ಜಿಯ ಎದೆ ಝಲ್ಲೆಂದಿತು ಭೂತವನ್ನು ಕಂಡ ಹೇಡಿಯಂತೆ.

ಗಂಗಜ್ಜಿ ಈ ಲೋಕ ಕಂಡ ಸ್ಥಿತಿಯನ್ನು ತನ್ನಜ್ಜನ ಬಾಯಿಂದ ಅನೇಕಬಾರಿ ಕೇಳಿದ್ದರು. ಈ ಎಪ್ಪತ್ತು ವರ್ಷಗಳ ಹಿಂದೆ ಒಂದು ಸರಿರಾತ್ರಿಯಲ್ಲಿ ಮುಗಿಲು ಹರಿದು ಬಿದ್ದಿದೆಯೋ ಎನ್ನುವಂತೆ ಸುರಿವ ಜಡಿ ಮಳೆಯಲ್ಲಿ ಗಂಗಜ್ಜಿಯ ಜನನ ಅದೇ ಮನೆಯಲ್ಲಿ ಆಗಿತ್ತು. ಹೆರಿಗೆ ಕಷ್ಟವಾಗಿ ಆ ಸರಿರಾತ್ರಿಯಲ್ಲಿ ಸೂಲಗಿತ್ತಿಯನ್ನು ಹುಡುಕಿ ತರುವುದು ಸಾಧ್ಯವಾಗದೆ ಕಷ್ಟದಲ್ಲೇ ಗಂಗಜ್ಜಿ ಈ ಲೋಕ ಕಂಡರಂತೆ. ಗಂಗಜ್ಜಿ ಹುಟ್ಟಿದ ನಾಲ್ಕಾರು ದಿನಗಳಲ್ಲೇ ಹೆರಿಗೆಯ ನೋವಿನಿಂದ ಬಳಲಿದ ಗಂಗಜ್ಜಿಯ ತಾಯಿ ಕಣ್ಣುಮುಚ್ಚಿದ್ದರು.

ಮಗುವಿನ ಸೇವೆ-ಶುಶ್ರೂಶೆ ಮಾಡಲು ಹೆಂಗಸರಿಲ್ಲದೆ, ದೂರದ ಸಂಬಂಧಿ ಮುದುಕಿಯೊಬ್ಬಳನ್ನು ಕಟ್ಟಿಕೊಂಡು ರುದ್ರಶಾಸ್ತ್ರಿಗಳೇ ಕೂಸಿನ

ಆರೈಕೆ ಹೊತ್ತು ನಿಂತರು. ಗಂಗಜ್ಜಿಯ ತಾತ ರುದ್ರಶಾಸ್ತ್ರಿಗಳು ಶುದ್ಧ ವೈದಿಕ ಮನೆತನದವರು. ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿದ ಗಂಗಜ್ಜಿಯನ್ನು ಸಲುಹುವುದು ಅತಿ ಕಷ್ಟವೇ ಆಯಿತು. ಹೇಗೋ ತಾತ ಬಹು ಮೆಚ್ಚಿಕೆಯಿಂದಲೇ ಸಲುಹಿ ಬೆಳೆಸಿದರು ಮೊಮ್ಮಗಳನ್ನು.

ಮನೆವಾಳುತನಕ್ಕೆ ನಿಂತಿದ್ದ ಅಳಿಯಮಯ್ಯ ಗಂಗಜ್ಜಿಯ ತಂದೆ, ತಮ್ಮ ಹೆಂಡತಿ ತೀರಿಕೊಂಡ ಮೇಲೆ ದೇವಸ್ಥಾನಗಳ ಮೂಲೆ ಹಿಡಿದು ಭಂಗಿ ಹೊಡೆಯಲು ಆರಂಭಿಸಿದರು. ಮೊದಲಿನಿಂದಲೂ ಮಂಕಾಗಿದ್ದ ಆತನ ಬುದ್ಧಿ ಭಂಗಿ ಸೊಪ್ಪಿಗೆ ಮಾರುಹೋಗಿ ಕೊನೆಗೊಮ್ಮೆ ಗಂಗಜ್ಜಿಯು ಐದನೇ ವರ್ಷದಲ್ಲಿ ಊರು ಬಿಟ್ಟು ದೇಶಾಂತರ ಅಲೆಯತೊಡಗಿದರು.

ಇನ್ನು ಗಂಗಜ್ಜಿಯ ಸರ್ವಭಾರದ ಹೊರೆಯು ತಾತನ ತಲೆಯ ಮೇಲೆ ನಿಂತಿತು. ಬಂದ ಕಷ್ಟ-ಕೋಟಲೆಗೆ ಹೆದರದೆ, ವೈದಿಕ ಬಿಡದೆ, ರುದ್ರಶಾಸ್ತ್ರಿಗಳು ಮೊಮ್ಮಗಳನ್ನು ಜೋಪಾನಮಾಡಿದರು.

ಗಂಗಜ್ಜಿ ತಾರುಣ್ಯ ಕಾಣುವವರೆಗೂ ಸುಖವಾಗಿಯೇ ಬೆಳೆದರು ಎನ್ನಬೇಕು. ಜ್ಞಾನಿಗಳಾದ ಗಂಗಜ್ಜಿಯ ತಾತ ರುದ್ರಶಾಸ್ತ್ರಿಗಳಿಗೆ ವೈದಿಕ ಚೆನ್ನಾಗಿ ನಡೆದಿತ್ತು. ಮೊಮ್ಮಗಳಿಗೆಂದು ಸ್ವಲ್ಪ ಭೂಮಿ-ಕಾಣಿಯನ್ನು ಮಾಡಿದರು. ಬಂದ ದಕ್ಷಿಣೆ ಕಾಸನ್ನು ದೇವರ ಗೂಡಿನಲ್ಲಿಟ್ಟು ಮೊಹರ್ ಮಾಡಿದ ತಾಮ್ರದ ಚೊಂಬಿಗೆ ತುಂಬಿದರು. ಗಂಗಜ್ಜಿಯ ಮದುವೆಯಲ್ಲಿ ಮೊಹರ್ ಮಾಡಿದ ಮೂರು ತಾಮ್ರದ ಚೊಂಬುಗಳನ್ನು ಬಿಡಿಸಿ ಒಡವೆ ಮಾಡಿಸಿದ್ದರು, ಪ್ರೀತಿಯ ತಾತ.

ಗಂಗಜ್ಜಿಯ ಮದುವೆಯಲ್ಲಿ ಒಂದು ಹಗರಣವೇ ನಡೆಯಿತು. ತಾತ ಕೂಡಿಸಿದ ಆಸ್ತಿಗೆ ಆಸೆ ಬಿದ್ದು ಅನೇಕರು ಗಂಗಜ್ಜಿಯನ್ನು ಬಯಸಿದರು. ಹತ್ತಾರುಮನೆಯ ಪುರೋಹಿತಕೆ ನಡೆಸಿದ ರುದ್ರಶಾಸ್ತ್ರಿಗಳು ಲೋಕವನ್ನರಿತು, ತನ್ನ ದೂರದಸಂಬಂಧಿ, ಕಡುಬಡವನಾದರೂ ಚಲುವ ಹುಡುಗನನ್ನು ಹುಡುಕಿ ಮದುವೆ ಮಾಡಿದರು. ಗಂಡು-ಹೆಣ್ಣಿನ ಸ್ವಾಮ್ಯ ನೋಡಿ ಹಿರಿ ಹಿರಿ ಹಿಗ್ಗಿದರು.

ಗಂಗಜ್ಜಿಯ ಗಂಡ ಶ್ರೀಕಂಠಶಾಸ್ತ್ರಿಗಳು ಬಡತನದಲ್ಲಿ ಬೆಳೆದರೂ

ಬೆಪ್ಪರಾಗಿರಲಿಲ್ಲ. ಚಿಕ್ಕಂದಿನಲ್ಲೇ ತಂದೆ ತೀರಿಕೊಂಡಿದ್ದರೂ ಅವರಿವರ ಆಶ್ರಯಮಾಡಿ ಸಂಸ್ಕೃತ ಕಲಿತಿದ್ದರು. ಮದುವೆ ಮುಂಜಿಗೆ ಬೇಕಾದ ಮಂತ್ರಗಳನ್ನು ತಪ್ಪೋ ನಪ್ಪೋ ಹೇಳುತ್ತಿದ್ದರು.

ಹುಡುಗನನ್ನು ತನ್ನು ಜೊತೆ ಹಾಕಿಕೊಂಡು ಅಪ್ಪಟ 'ಅಯ್ಯ' ನನ್ನು ಮಾಡಬೇಕೆಂದು ಗಂಗಜ್ಜಿಯ ತಾತನ ಆಸೆಯಾಗಿತ್ತು. ಶ್ರೀಕಂಠ ಶಾಸ್ತ್ರಿಗಳು ಮೊದಲಿನಿಂದಲೂ ಚೆನ್ನಾಗಿ ತಿಂದು ಕಸರತ್ತು ಮಾಡಿಕೊಂಡು, ಸ್ನೇಹಿತರ ಜತೆಯಲ್ಲಿ ತಿರುಗಿದವರಿಗೆ ಮದುವೆಯಾದ ಮೇಲೆ ಅಯ್ಯತನ ಸ್ವಲ್ಪವೂ ಹಿಡಿಸಲಿಲ್ಲ. ತಾತ ಆಸ್ತಿ ಕೊಡಿಸಿರುವುದೇ ಸಾಕು. ಹೆಂಡತಿ ಮೈಮೇಲೆ ಬಂಗಾರವಿಲ್ಲವೇನು ? ನಾನೇಕೆ ಮಂತ್ರ ಹೇಳಿಕೊಂಡು ಭಕ್ತರು ಹಾಕುವ ಊಟ, ಕೊಡುವ-ಕಾಲಾಣೆ ದಕ್ಷಿಣೆಗೆ ಕೈಯೊಡ್ಡಿ ಕಾಲ ತಳ್ಳಬೇಕು ? ಈ ಅಯ್ಯತನವೇ ಬೇಡವೆಂದು ನಿರ್ಧರಿಸಿ ಹೆಂಡತಿಯ ಮನೆಯಲ್ಲಿ ಕಂಠಪೂರ್ತಿ ತಿಂದು, ಸ್ನೇಹಿತರ ಹಿಂದೆ ತಿರುಗುವುದನ್ನು ಕಲಿತರು.

ಮೊಮ್ಮಗಳ ಗಂಡ ತಾವು ಎಣಿಸಿದಂತೆ ಹಿಡಿತಕ್ಕೆ ಬಾರದಿರುವುದನ್ನು ಕಂಡು ರುದ್ರಶಾಸ್ತ್ರಿಗಳು ಮನ್ಮಲ ಮರುಗಿ ಸೊರಗಿದರು. ಕೊನೆಗೆ ದಿಕ್ಕುಕಾಣದೆ, ನಾಳೆ ಹುಡುಗ ಮೊಮ್ಮಗಳನ್ನು ಸಾಕುತ್ತಾನೋ, ಇಲ್ಲವೋ? ಎಂದು ಭಾವಿಸಿ ಇರುವ ಆಸ್ತಿಯನ್ನೆಲ್ಲಾ ಮೊಮ್ಮಗಳ ಹೆಸರಿಗೆ ಬರೆದು, ಪತ್ರ ರಿಜಿಸ್ಟ್ರಿ ಮಾಡಿಸಲು ಹೊರಟರು.

ತನ್ನ ಹೆಂಡತಿ ಹೆಸರಿನಲ್ಲಿ ಮುದುಕ ಆಸ್ತಿ ಬರೆದದ್ದು **ನೋಡಿದ** ಶ್ರೀಕಂಠಶಾಸ್ತ್ರಿಗಳ ಸ್ವಾಭಿಮಾನ ಕೆರಳಿತು.

"ಘಾಟಿ ಮುದುಕ! ಸಾಯುವವರೆಗೂ ಹೆಂಡತಿಯ ಕೈಯ ಕೂಳು ಕಾಯಲೆಂದು ಹೊಂಚುಹಾಕಿದ್ದಾನೆ" ಎಂದು ಭಾವಿಸಿ ಗಂಗಜ್ಜಿಯ ಎದುರಿನಲ್ಲಿ ರಾದ್ಧಾಂತ ಆರಂಭಿಸಿದರು. ಏನೂ ಅರಿಯದ ಗಂಗಜ್ಜಿ ಗಂಡ ಮತ್ತು ತಾತ ಈರ್ವರನ್ನೂ ಬಿಡದೆ ಬಿಸಿಲಿಗಿಟ್ಟ ಹೂವಿನಂತೆ ಬಾಡತೊಡಗಿದರು.

ಗಂಗಜ್ಜಿಯ ಅಸಹಾಯಕತೆ ಕಂಡು ಮನೆಯಲ್ಲಿ ದಿನನಿತ್ಯ ರಂಪು ಎಬ್ಬಿಸಿ, ಗಂಗಜ್ಜಿಯನ್ನು ಇಕ್ಕಳಕ್ಕೆ ಸಿಕ್ಕಿಸಿ ಹೋಗುತ್ತಿದ್ದರು ಶ್ರೀಕಂಠ

ಶಾಸ್ತ್ರಿಗಳು. ಒಮ್ಮೆ ಶಾಸ್ತ್ರಿಗಳ ಕೋಪ ನೆತ್ತಿಗೇರಿ ಗಂಗಜ್ಜಿಯ ಮೈ ಮೂಳೆ ಮುರಿಯ ತೊಡಗಿದರು. ಅಂದು ರುದ್ರಶಾಸ್ತ್ರಿಗಳು ಮನೆಯಲ್ಲಿ ಇಲ್ಲದಿದ್ದರೆ ಗಂಗಜ್ಜಿ ಕೊನೆ ಉಸಿರು ಎಳೆಯಬೇಕಿತ್ತು.

ಅಂದಿನಿಂದಲೇ ರುದ್ರಶಾಸ್ತ್ರಿಗಳಿಗೆ ಅಸ್ವಸ್ಥತೆ ಮೂಡಿ ಹಾಸಿಗೆ ಹಿಡಿದರು. ಆರು ತಿಂಗಳು ಸೊರಗಿ ಸೊರಗಿ ಕಣ್ಣು ಮುಚ್ಚಿದರು. ತಾತನನ್ನು ಕಳೆದುಕೊಂಡ ಗಂಗಜ್ಜಿ ತಾಯಿಯನ್ನು ಕಳೆದುಕೊಂಡ ಕರುವಿನಂತಾದರು.

ಕೂತು ತಿನ್ನುವವನಿಗೆ ಕುಡಿಕೆ ಹಣವಾದರೂ ಸಾಲದು ಎನ್ನುವಂತೆ, ತಿಂದು ತಿರುಗುವ ಶಾಸ್ತ್ರಿಗಳಿಗೆ ಏನಿದ್ದರೂ ಸಾಲದಾಯಿತು. ಅತ್ತ ಸ್ನೇಹದ ಸಾಲು ಬೆಳೆಯಿತು–ಹಣದ ಕೊರತೆ ಬತ್ತದಾಯಿತು.

ಹಣ ಎಲ್ಲಿದ್ದೀತು ! ಗಂಗಜ್ಜಿಯ ತಾತ ಕೂಡಿಸಿಟ್ಟ ಅಷ್ಟಿಷ್ಟು ಕಾಸೆಲ್ಲ ಮುಗಿಯಿತು. ಇನ್ನು ಹಣ ! ಗಂಗಜ್ಜಿಯ ಮೈಮೇಲೆ ಬಾಸುಂಡೆ ಎದ್ದುವು. ಅವರ ಒಡವೆಗಳು ಮಾರ್ವಾಡಿ ಅಂಗಡಿಯಲ್ಲಿ ಗಿರವಿಗೆ ನಿಂತವು. ಎಲ್ಲಾ ಪೂರೈಸಿ ಕಿವಿಯಲ್ಲಿದ್ದ ವಾಲೆಗೆ ಕೈ ಹಾಕಿದಾಗ, ಹಟ ಹಿಡಿದು ಕುಳಿತ ಗಂಗಜ್ಜಿಯನ್ನು ನೋಡಿ, ಪ್ರಾಣವನ್ನೇ ತೆಗೆದುಬಿಡುತ್ತೇನೆಂದು ಕೊಡಲಿಯನ್ನು ಹಿಡಿದು ನಿಂತರು ಪರಶುರಾಮನಂತೆ ಶ್ರೀಕಂಠಶಾಸ್ತ್ರಿಗಳು. ಸಿಟ್ಟಿನ ಭರದಲ್ಲಿ ಕೊಡಲಿ ಕೈ ಜಾರಿ ಗಂಗಜ್ಜಿಯ ಕಾಲಬೆರಳಿನ ಮೇಲೆ ಬಿದ್ದು ಕೊನೆ ಬೆರಳೆರಡು ಅರ್ಧ ಸೀಳಿದವು. ಆಗ ಶ್ರೀಕಂಠಶಾಸ್ತ್ರಿಗಳು ತುಸು ಹೆದರಿದರೂ, ವಾಲೆ ಬಿಡದೆ ಒಯ್ದರು. ನಾಲ್ಕಾರು ತಿಂಗಳು ಔಷಧಿ ಲೇಪಿಸಿದ ಮೇಲೆ ಬೆರಳಿನ ಗಾಯ ಮಾಗಿದರೂ ಕಲೆ ಹೋಗಲಿಲ್ಲ.

ಅಲ್ಲಿಂದಾಚೆಗೆ ಶಾಸ್ತ್ರಿಗಳಿಗೆ ಸುಸೂತ್ರವಾಯಿತು. ಭೂಮಿ-ಕಾಣಿ ಏನು ಮಾರಲು ಹೊರಟರೂ ಗಂಗಜ್ಜಿ ತುಟಿಕ್ ಪಿಟಿಕ್ ಎನ್ನದೆ ರುಜು ಹಾಕಿ ಕಳುಹಿಸುತ್ತಿದ್ದರು.

ಶ್ರೀಕಂಠಶಾಸ್ತ್ರಿಗಳ ಜೀವನ ಹೀಗೆಯೇ ಐದಾರು ವರ್ಷ ಸಾಗಿತು. ನಿತ್ಯ ಶಾಸ್ತ್ರಿಗಳು ಕರೆತರುವ ಸ್ನೇಹಿತರ ತಂಡಕ್ಕೆ ಬೇಸಿಟ್ಟು ಬೇಸತ್ತರು ಗಂಗಜ್ಜಿ. ಎಂದಾದರೂ ಗಂಗಜ್ಜಿ ಶಾಸ್ತ್ರಿಗಳ ಮಾತಿಗೆ ವಿರುದ್ಧ ನಡೆದರೆ

ಸಾಕ್ಷಾತ್ ನರಕವನ್ನೇ ಸೃಷ್ಟಿಸಿ ಬಿಡುತ್ತಿದ್ದರು. ಎಷ್ಟೋ ರಾತ್ರಿ ಶಾಸ್ತ್ರಿಗಳು ಹೆಂಡತಿಯನ್ನು ಹಿತ್ತಲಲ್ಲಿ ಕುಳ್ಳಿರಿಸಿ ಚಳಿಯಲ್ಲಿ ಗಡಗಡ ನಡುಗಿಸುತ್ತಿದ್ದರು? ತಾವು ಬೆಚ್ಚಗೆ ಮನೆಯೊಳಗಿದ್ದು. ತಾತ ಬರೆದ ಆಸ್ತಿಯೆಲ್ಲಾ ಗಂಗಜ್ಜಿಯ ಭಾಗಕ್ಕೆ ಎಂದೋ ಇಲ್ಲವಾಗಿತ್ತು.

ತಾತನ ನೆನಪಿಗಾಗಿ ಆ ಮನೆಯೊಂದು ಮಾತ್ರ ಉಳಿದಿತ್ತು. ಅದನ್ನೂ ಮಾರಲು ಹೊರಟ ಶಾಸ್ತ್ರಿಗಳು ಗಂಗಜ್ಜಿ ರುಜು ಮಾಡದೆ ಮೊಂಡು ಬಿದ್ದುದು ನೋಡಿ ತೆಪ್ಪಗಾಗಿದ್ದರು.

ಗಂಗಜ್ಜಿಯು ದ್ರೌಪದೀಧೈರ್ಯದ ಶಾಸ್ತ್ರಿಗಳು ನೀಡುವ ಕಷ್ಟಗಳನ್ನು ಸಹಿಸಲು ಸಾಧ್ಯವಾಯಿತು. ಸುಖ ಕನಸಾಯಿತು. ಸುಖವೆಂಬುದೇ ಈ ಲೋಕದಲ್ಲಿಲ್ಲ ಎಂಬ ಸಿದ್ಧಾಂತಕ್ಕೂ ಬಂದರು. ಸುಖ ಎಲ್ಲಾದರೂ ಹಾಳಾಗಲಿ ಎಂದರೆ ಮದುವೆಯಾಗಿ ಆರೇಳು ವರುಷವಾದರೂ ಅವರ ದಾಂಪತ್ಯ ಜೀವನವೃಕ್ಷ ಚಿಗುರೊಡೆದಿರಲಿಲ್ಲ.

'ಭಗವಂತ ನನ್ನ ಬಾಳಲತೆಯಲ್ಲಿ ಹೂವೊಂದು ಅರಳಿಸು. ಅದನ್ನು ನೋಡಿಕೊಂಡು ಕಾಲ ತಳ್ಳುವೆ. ತಾತ ಪವಿತ್ರ ಜೀವನ ನಡೆಸಿದ ಈ ಮನೆಗೆ ದೀಪ ಹಚ್ಚುವ ಕೂಸೊಂದು ಕೊಡು' ಎಂದು ಪ್ರಾರ್ಥಿಸಿದರು ಗಂಗಜ್ಜಿ. ಹಲುಬಿದರು, ಹರಕೆ ಹೊತ್ತರು,....ನವಗ್ರಹ ಸುತ್ತಿದರು, ಎಳ್ಳು ಬತ್ತಿ ಹಚ್ಚಿದರು, ನಲವತ್ತು ವಾರ ಬಿಡದೆ ತಣ್ಣೀರಲ್ಲಿ ಮುಳುಗಿ ಅಶ್ವತ್ಥಕಟ್ಟೆ ಸುತ್ತಿದರು, ಗೋಸಾಯಿಗಳು ಕೊಟ್ಟ ವಿಭೂತಿ ತಿಂದರು, ಲಿಂಗಾಚಾರಿಯಿಂದ 'ತಾಯಿತ' ಕಟ್ಟಿಸಿಕೊಂಡರು.

ಏನಾದರೂ ಅವರ ಬಸಿರು ತುಂಬಲಿಲ್ಲ. ಆ ಮುಖದಲ್ಲಿ ಕಳೆ ಯೇರಲಿಲ್ಲ. ಆ ದೇಹದಲ್ಲಿ ಕುಸುಮವೊಂದು ಕೊನರಲಿಲ್ಲ.

ತುಂಬಿದ ಹೊನಲಿನಂತೆ ಹರಿದ ಶಾಸ್ತ್ರಿಗಳ ಜೀವನ ಕಡೆಗೊಮ್ಮೆ ವೇಗದಲ್ಲಿ ಕಡಿಮೆಯಾಯಿತು. ತಾರುಣ್ಯದಲ್ಲಿ ತಾವು ನಡೆಸಿದ ಅವಿವೇಕ ಗಳಿಗೆ ಪಶ್ಚಾತ್ತಾಪಪಟ್ಟರು. ಗಂಗಜ್ಜಿಯ ಬಾಳನ್ನೆಲ್ಲಾ ಗೋಳು ಮಾಡಿದ್ದಕ್ಕೆ ದುಃಖಪಟ್ಟರು. ಇನ್ನು ಉಡಾಳನಂತೆ ತಿರುಗುವುದು ಸರಿ ಯಲ್ಲವೆಂದು ಭಾವಿಸಿ ಏನಾದರೂ ಕೆಲಸ ಹಿಡಿಯಬೇಕೆಂದು ಭಾವಿಸಿದರು.

ಕೆಲಸ ಹಿಡಿಯುವುದಾದರೂ ಏನನ್ನು ? ಮತ್ತೆ ಕುಲಕಸುಬಾದ ವೈದಿಕತನ ಹಿಡಿಯುವುದೇ ? ಅದೆಂದಿಗೂ ಅವರಿಂದಾಗದ ಮಾತಾಗಿತ್ತು. ಚಿಂತಿಸಿ ಚಿಂತಿಸಿ ಹೊತ್ತು ಕಳೆಯಲಾರದೆ ಸಾಹಿತ್ಯಾಭ್ಯಾಸಕ್ಕೆ ತೊಡಗಿದರು. ಶರಣರ-ಭಕ್ತರ ಜೀವನ ಚರಿತ್ರೆಗಳನ್ನು ಓದಿ ಹರಿಕಥೆ ಮಾಡುವುದೆಂದು ತೀರ್ಮಾನಿಸಿದರು. ಕಂಠವೂ ಮಧುರವಾಗಿತ್ತು. ದಾಸರೊಬ್ಬರ ಹಿಂದೆ ಬಿದ್ದು ಹರಿಕಥೆ ಮಾಡುವ ವಿಧಾನವನ್ನು ಕಲಿತುಬಂದು, ಊರಲ್ಲಿ ಒಂದು ದಿನ ಭರ್ಜರಿ ಹರಿಕಥೆ ನಡೆಸಿ ಭೇಷ್ ಎನ್ನಿಸಿಕೊಂಡರು.

ಕಾಯಕ ಕಾಣದೆ ಪರಿತಪಿಸುತ್ತಿದ್ದ ಶಾಸ್ತ್ರಿಗಳಿಗೆ ಹರಿಕಥೆ ಮಾಡುವುದೇ ಕಾಯಕವಾಯಿತು. ಅದರಿಂದ ಅಲ್ಪ-ಸ್ವಲ್ಪ ಉತ್ಪತ್ತಿಯೂ ಸಿಕ್ಕಿತ್ತು.

ಅನಂತರ ಶ್ರೀಕಂಠಶಾಸ್ತ್ರಿಗಳ ಜೀವನ ಏರುಪೇರುಗಳಿಲ್ಲದೆ ಒಂದೆರಡು ವರ್ಷಗಳು ಸಾಗಿದ್ದವು. ದ್ವಿಮುಖವಾಗಿದ್ದ ಅವರ ದಾಂಪತ್ಯಜೀವನ ಏಕಮುಖವಾಯಿತು. ವಿರಸಗೊಂಡಿದ್ದ ಮನಗಳು ಸರಸದ ಸರಸ್ಸಿನಲ್ಲಿ ಈಜಾಡಿದವು.

ಈರ್ವರಲ್ಲೂ ಈ ಸಂತೋಷ ಕೆಲ ದಿನಗಳು ಮಾತ್ರ ಉಳಿದವು. ಈರ್ವರೂ ತಮ್ಮ ಜೀವನ ತುಂಬಿಲ್ಲ ಏನೋ ಕೊರತೆ ಇದೆಯೆಂದು ತಿಳಿದರು. ಸಹಿಸಲಾರದ ಅನಿಷ್ಟ ಸುಖವೊಂದು ಛಾಯೆಯಂತೆ ಹಿಂಬಾಲಿಸುತ್ತಿದೆಯೆಂದು ಅವರುಗಳು ಭಾವಿಸತೊಡಗಿದರು.

ರಸ್ತೆಯಲ್ಲಿ ಮಕ್ಕಳನ್ನು ಕಂಡಾಗ ಶಾಸ್ತ್ರಿಗಳ ಮನ ಕುಗ್ಗುತ್ತಿತ್ತು. ನಮಗೂ ಇಂತಹದೊಂದು ಮಗುವಿದ್ದರೆ ? ಆ ಪ್ರಶ್ನೆಗೆ ಉತ್ತರ ಅವರನ್ನು ಮೀರಿ ನಿಂತಿತ್ತು. ಹರಿಕಥೆಯಲ್ಲಿ ಬಂಜೆ ಅಥವಾ ಬಾಲಲೀಲೆಗಳನ್ನು ವರ್ಣಿಸುವಾಗ ಶ್ರೋತೃಗಳಿಗಿನ್ನ ಶಾಸ್ತ್ರಿಗಳೇ ಹೆಚ್ಚು ಕಣ್ಣೀರು ಕರೆಯುತ್ತಿದ್ದರು.

ಮನೆಯಲ್ಲಿ ಮುದ್ದಣ್ಣನ ರಾಮಾಶ್ವಮೇಧವನ್ನು ಓದುವಾಗಲಂತೂ ಕಣ್ಣೀರು ಕಣ್ಣಂಚಿನಲ್ಲಿ ಕಾದಿರುತ್ತಿತ್ತು.

"....ಎನಿತ್ತೈಸಿರಿಯಿರ್ದೊಡಂ ಮಕ್ಕಳಿಲ್ಲದವನ ಬಾಳ್ವೆಯೊಂದು

ಬಾಳ್ವೆಯೆ ! ನೀಡುಮರನಂತಿದೊರ್ಡದೊಂದಿರುವೆ, ನೀರೊಳಿರ್ದುಂ ಮೀಂಗಳ್ ಕಾಡೊಳಿರ್ದುಂ ಮಿಗಂಗಳ್ ಬಾನೊಳಿರ್ದುಂ ಖಗಂಗಳ್ ಮರಿಗಳ ನಾರಯ್ಯುತುಂ ಸೋಗಂ ಬಾಳ್ವವೆನೆ, ನಾಡೊಳ್ ಪುಟ್ಟಿಯುಂ ಮಾನವ ನೆನೆಸಿಯುಂ ಮಕ್ಕಳ ಪೆರದವಂ ಪಾಪಿಯಲ್ತೆ !...." ಎಂದು ಹೇಳುವ ಕವಿವಾಕ್ಯವನ್ನು....

"ಎಳೆವರೆಯದೊಳ್ ನಲ್ಸೊಸಂ ಪೆತ್ತು ಬಾಲಕೇಳಿಯಂ ಕಣ್ದಣಿಯೇ ಕಂಡು ಸಂಸಾರದ ಸಾರವೆಂದನುತ ಸಂತಸಂ ಪಡುವ ಪೆಣ್ಗಳೆ ಧನ್ಯರಲ್ತೆ...." ಎಂದು ಹೇಳುವ ಸೀತಾವಾಕ್ಯವನ್ನು ಓದಿ ಕಣ್ಣೀರ ಕಡಲು ಉಕ್ಕಿಸು ತ್ತಿದ್ದರು. ಎಷ್ಟೋವೇಳೆ ಇದೇ ವಾಕ್ಯಗಳನ್ನು ಗಂಗಜ್ಜಿಗೆ ಹೇಳಿ ನಾವು ಪಾಪಿಗಳು ಎಂದು ದುಃಖಿಸುತ್ತಿದ್ದರು.

ಶಿವ ಕಣ್ಣುಬಿಟ್ಟರೆ ಎಲ್ಲವೂ ಸಾಧ್ಯವೆಂದು ಈರ್ವರೂ ಸಮಾಧಾನ ಹೊಂದುತ್ತಿದ್ದರು. ಆದರೇನು ಎಲ್ಲರದೂ ಉಪಶಮನದ ಹಾದಿಯೇ ವಿನಾ ಅವರಲ್ಲಿ ದುಃಖ ಕುಗ್ಗುವಂತಿರಲಿಲ್ಲ.

ಕೊನೆಗೊಮ್ಮೆ ಯೋಚಿಸಿ ಯೋಚಿಸಿ ದಂಪತಿಗಳು ನಾಗರದೋಷ ವಿರಬೇಕೆಂದು ಭಾವಿಸಿ ನೂರಾರು ರೂಪಾಯಿ ಖರ್ಚುಮಾಡಿ ನಾಗ ಪ್ರತಿಷ್ಠೆಯನ್ನೂ ಮಾಡಿಸಿದರು. ಎಲ್ಲವೂ ನಿರರ್ಥಕವಾಯಿತೇ ವಿನಾ ಫಲ ಕಾಣಲಿಲ್ಲ. ದುಃಖ ಹಿಂಗಲಿಲ್ಲ.

ಇದ್ದಕ್ಕಿದ್ದಂತೆ ಶಾಸ್ತ್ರಿಗಳು ಏನೋ ಯೋಚಿಸಿ ತಮ್ಮ ತಂಗಿಯ ಕೊನೆ ಮಗುವನ್ನು ಕರೆತಂದರು. ಆ ಮಗುವನ್ನು ಈರ್ವರೂ ಅಕ್ಕರೆ ಯಿಂದ ಸಾಕಿದರು. ಭಣ ಭಣ ಎನ್ನುತ್ತಿದ್ದ ಮನೆಯಲ್ಲಿ ನಗು ನರ್ತಿಸ ತೊಡಗಿತು. ಗಂಗಜ್ಜಿ ಆ ಮಗುವನ್ನು ನೋಡಿ ನಿರ್ಭಾಗ್ಯನಿಗೆ ನಿಧಿ ದೊರಕಿದಂತೆ ಹಿಗ್ಗಿದರು. ಆ ಮಗುವನ್ನು ನೆಲದ ಮೇಲೆ ಬಿಟ್ಟರೆ ಸವೆ ದಾನೆಂದು ಜೋಪಾನಮಾಡಿದರು. ಕಣ್ಣೊಳಗೇ ಇಟ್ಟುಕೊಂಡು ಕಾಪಾಡ ತೊಡಗಿದರು.

"ಶಿವನೇ, ಮಕ್ಕಳನ್ನು ಬಯಸಿದೆ. ನಿನಗೆ ದಯೆ ಬಾರಲಿಲ್ಲ. ಹೋಗಲಿ ನನ್ನ ಪತಿಗೆ ಹೆಚ್ಚು ಆಯುಷ್ಯ ನೀಡಿ ಅವರೆದುರಿನಲ್ಲಿ ನನಗೆ ಮುತ್ತೈದೆ ಸಾವು ಕೊಡೆಂದು ಪ್ರಾರ್ಥಿಸತೊಡಗಿದರು. ಪರಮಾತ್ಮನಲ್ಲಿ

ಗಂಗಜ್ಜಿ, ಮಕ್ಕಳ ಆಸೆ ಪೂರಾ ತೊರೆದು.

"ಗಂಗಾ! ನಿನಗೇನು ಆಸೆ ಇದೆಯೋ ಈ ಲೋಕದಲ್ಲಿ" ಶಾಸ್ತ್ರಿಗಳೆನ್ನೊಮ್ಮೆ ಹೆಂಡತಿಯನ್ನು ಪ್ರಶ್ನಿಸಿದರು.

ಶಾಸ್ತ್ರಿಗಳ ಪ್ರಶ್ನೆಗೆ ಗಂಗಜ್ಜಿ ಒಂದು ಗಳಿಗೆ ಸುಮ್ಮನಿದ್ದರು.

"ಒಡವೆ ಬೇಕೇನೆ ?"

"ಒಡವೆ ಕಾಣದ ಮುಕ್ಕನಲ್ಲಾ ನಾನು. ನನಗೆ ಬೇಕಿರುವ ಒಡವೆ ದೇವರು ಕರುಣಿಸಬೇಕು."

"ಏನೇ ಅದು ನಿನ್ನ ಅಮೂಲ್ಯ ಒಡವೆ ?"

"ಏನೂ ಇಲ್ಲಾ ! ಅದು ಹೆಂಗಸರ ಮಾತು ನಿಮಗೇಕೆ ಬಿಡ್ರೀ"

"ಅದು ಏನು ಹೇಳಬಾರದೆ ?" ಶಾಸ್ತ್ರಿಗಳು ಸ್ವಲ್ಪ ಕುಪಿತರಾಗಿ ನುಡಿದರು.

"ನಾನು ಬಯಸುವ ಒಡವೆ ಮುತ್ತೈದೆ ಸಾವು ಹಾಯ್ ಎಂದು ನಿಮ್ಮ ತೊಡೆಯ ಮೇಲೆ ತಲೆ ಹಾಕಿ ಸಾಯಬೇಕು" ಎಂದರು ಗಂಗಜ್ಜಿ.

ಹೆಂಡತಿಯ ಮಾತು ಕೇಳಿ ಶಾಸ್ತ್ರಿಗಳ ಮನಸ್ಸು ಪ್ರಕ್ಷುಬ್ಧವಾಯಿತು. ಎಂಥ ಮುಗ್ಧೆ ಇವಳು, ನಾಡನ್ನು ನಾಶಮಾಡುವ ಬಾಂಬು ಬಂದರೂ ಇವಳಿನ್ನೂ ಅರುಂಧತಿ ಯುಗದಲ್ಲಿದ್ದಾಳೆಂದು.

"ಆಯಿತು ! ನಿನ್ನ ದೇವರು ಕರುಣಿಸುತ್ತಾನೆ ಬಿಡು, ಅದಕ್ಕೇಕೆ ಚಿಂತೆ" ಎಂದು ಮಾತು ಹಾರಿಸಿದರು.

ಒಂದು ದಿನ ಬೆಳಗ್ಗೆ ತಿಂಡಿ ತಿಂದುಹೋದ ಶಾಸ್ತ್ರಿಗಳು ಮಧ್ಯಾಹ್ನವಾದರೂ ಊಟಕ್ಕೆ ಬರಲಿಲ್ಲ. ಗಂಗಜ್ಜಿ ಗಾಬರಿಯಾಗಿ ಬಾಗಿಲಲ್ಲಿ ನಿಂತರು, ಶಾಸ್ತ್ರಿಗಳನ್ನು ಎದುರು ನೋಡುತ್ತಾ. ಜಟಕಾವೊಂದು ಮನೆ ಮುಂದೆ ಬಂದು ನಿಂತಿತು. ನಾಲ್ಕು ಜನ ಶಾಸ್ತ್ರಿಗಳನ್ನು ಎತ್ತಿಕೊಂಡು ಬಂದು ಒಳಗೆ ಮಲಗಿಸಿ ಖಿನ್ನರಾಗಿ ಹೇಳಿದರು. "ಊರಿನ ಚೌಕದಲ್ಲಿ ನಡೆದು ಬರುತ್ತಿದ್ದವರು ಅಲ್ಲಿಯೇ ಪ್ರಾಣ ಬಿಟ್ಟರು. ಪರೀಕ್ಷೆಗೆ ಬಂದ ಡಾಕ್ಟರ್ ಹೃದಯ ಕ್ರಿಯೆ ನಿಂತು ಪ್ರಾಣ ಹೋಗಿದೆ ಎಂದು ಹೇಳಿದರು ತಾಯಿ" ಎಂದರು ಅವರುಗಳು.

ಆ ಗಳಿಗೆಯಲ್ಲಿ ಗಂಗಜ್ಜಿಯ ಪ್ರಪಂಚ ತಲೆಕೆಳಗಾಯಿತು. ರೊಪ್ಪನೆ ಕೆಳಗೆ ಬಿದ್ದರು. ಮತ್ತೆ ಅವರಿಗೆ ಎಚ್ಚರವಾದಾಗ ಮನೆ ಮುಂದೆ ಹೊಗೆ ಯಾಡುತ್ತಿತ್ತು. ಸುತ್ತ ನೆರೆ-ಹೊರೆಯವರು ತುಂಬಿದ್ದರು. ಹೊರಗೆ ಬಿದಿರಿನ ವಿಮಾನ ತಯಾರಾಗಿ ಅಲಂಕರಿಸಿಕೊಂಡು ನಿಂತಿತ್ತು. ಶ್ಮಶಾನಕ್ಕೆ ತೆರಳಿದಾಗ ಕತ್ತಲಾಗಿತ್ತು.

ಅಮಾವಾಸ್ಯೆಯ ಹತ್ತಿರದ ಕತ್ತಲು. ಸಂಜೆ ಆಕಾಶದಲ್ಲಿ ಒಂದು ತುಣುಕು ಮೋಡವೂ ಇರಲಿಲ್ಲ. ರಾತ್ರಿ ಊರು ಕೊಚ್ಚುವಂಥ ಮಳೆ ಬಾರಿಸಿತು. ಅಂಥಾ ಗಂಭೀರ ರಾತ್ರಿಯಲ್ಲಿ ಶಾಸ್ತ್ರಿಗಳ ಅಂತ್ಯಸಂಸ್ಕಾರ ವಾಯಿತು.

ಅಲ್ಲಿಂದ ಗಂಗಜ್ಜಿಯ ಜೀವನವೇ ಬದಲಾಯಿಸಿತು. ಸಾಕಿಕೊಂಡಿದ್ದ ನಾದಿನಿಯ ಮಗುವನ್ನು ಶಾಸ್ತ್ರಿಗಳು ಸತ್ತ ನಂತರ ಹೇಳದೆ ಕೇಳದೆ ಅವರು ಕರೆದೊಯ್ದರು.

ಜೀವಿಸಿದಷ್ಟು ದಿನ ಶಾಸ್ತ್ರಿಗಳು ಸುಖವಾಗಿ ಮೆರೆದು ಕೊನೆಗೆ ಗಂಗಜ್ಜಿಯ ಕೊರಳಲ್ಲಿ ನೇಣು ಇಟ್ಟು ಹೋಗಿದ್ದರು. ಗಂಗಜ್ಜಿ ಬಯಸಿದ್ದೆಲ್ಲಾ ಕನಸಾಗಿ ಉಳಿಯಿತು. ಶಾಸ್ತ್ರಿಗಳು ತೀರಿದ ಒಂದು ವರ್ಷ ಗಂಗಜ್ಜಿಯ ಮಾನಸಿಕ ಹೋರಾಟ ಪ್ರಬಲವಾಯಿತು. ತಮ್ಮ ನೇಮ-ಆಚಾರ, ಮಡಿ, ದೇವರಪೂಜೆ ಎಲ್ಲಾ ತೊರೆದು ನಿಂತರು.

ದೇವರನ್ನು ನಂಬಿ ತಾನು ಕೆಟ್ಟೆ ಎಂದು ದೇವರ ಮನೆಗೆ ಹೋಗುವುದನ್ನೇ ಬಿಟ್ಟರು.

ಅವರಿಗೆ ಎಲ್ಲೂ ಶಾಂತಿ ದೊರಕಲಿಲ್ಲ. ಕಾಲ ಸಾಗಿಸುವುದೇ ಕಷ್ಟ ವಾಯಿತು. ತನ್ನ ಪರಿಚಿತರ ಎಲ್ಲ ಮನೆಗಳನ್ನೂ ಅಲೆದುದಾಯಿತು. ಎಲ್ಲಿಗೆ ಹೋಗುವುದು ? ಎನ್ನುವ ಸಮಸ್ಯೆ ಬಲವಾಯಿತು. ಕಾಲ ಕಳೆಯಲು ಎಲೆ ಹಚ್ಚತೊಡಗಿದರು. ಅದೇ ಜೀವನಕ್ಕೂ ಆಧಾರ ವಾಯಿತು.

ಅವರ ಎಲ್ಲ ಆಸೆಗಳಿಗಿನ್ನ ಪತಿಯ ತೊಡೆಯ ಮೇಲೆ ತಲೆ ಹಾಕಿ ಹಾಯ್ ಅಂತ ಮುತ್ತೈದೆ ಸಾವು ಅಪ್ಪಬೇಕೆಂಬ ಇಚ್ಛೆ ಉತ್ಕಟವಾಗಿತ್ತು. ಅದು ಕೈಗೂಡದ ನೋವು ನಿರಂತರವಾಗಿ ಉಳಿಯಿತು.

ಇದ್ದಕ್ಕಿದ್ದಂತೆ ಒಂದು ದಿನ ಮೂಲೆಗೆ ಬಿದ್ದ ದೇವರಸಾಮಾನು ಗಳನ್ನು ತೊಳೆದು ಬಂದು ತಾಸೆರಡುತಾಸು ದೇವರಪೂಜೆ ಮಾಡಿದರು.

"ನಮ್ಮ ಕರ್ಮಕ್ಕೆ ನಾವು ಹೊಣೆಯೇ ವಿನಾ ದೇವರನ್ನು ನಿಂದಿಸಿ ಫಲವೇನು ? ಮುಂದಿನ ಜನ್ಮದಲ್ಲಾದರೂ ಈ ಕಷ್ಟಗಳನ್ನು ನೀಡದಿದ್ದರೆ ಸಾಕೆಂದು" ಭಾವಿಸಿ ಗಂಗಜ್ಜಿ ದೇವರನ್ನು ಪುತ್ತೆ ನಂಬಿವರು. ದೇವರ ಪೂಜೆಯಲ್ಲಿ ಅವರಿಗೆ ಒಂದು ತರಹ ಅಲೌಕಿಕ ಶಾಂತಿ ದೊರಕಿದಂತೆ ಭಾಸವಾಗತೊಡಗಿತು.

ಹೀಗೆಯೇ ವಿಧವೆಯ ಜೀವನವನ್ನು ಮೂವತ್ತು ವರ್ಷಗಳು ತಳ್ಳಿದರು. ಅವರ ಸಮಕಾಲೀನರು ಈಗ ಒಬ್ಬಿಬ್ಬರು ಇದ್ದರೆ ಹೆಚ್ಚು.

ಅಂಥಾ ಹಣ್ಣು ಹಣ್ಣು ಮುದುಕಿಯಾದರೂ ಯಾರಿಗೂ ತ್ರಾಸ ಕೊಟ್ಟವರಲ್ಲ. ತಾವೇ ಮಡಿಯಿಂದ ಅಡಿಗೆ ಮಾಡಿಕೊಂಡು ತಿನ್ನಬೇಕು. ಅದೂ ಒಪ್ಪತ್ತಿನ ಊಟ. ಕೈಲಾದಷ್ಟು ಎಲೆ ಹಚ್ಚಿ ನಾಳಿನ ಜೀವನಕ್ಕೆ ಮಾರ್ಗ ಮಾಡಿಕೊಳ್ಳಬೇಕು.

ಕಳೆದ ಹದಿನೈದು ದಿನಗಳಿಂದಲೂ ಚಳಿ ಜ್ವರ ಬಡಿದು ಮೂಲೆ ಹಿಡಿದಿದ್ದರು ಗಂಗಜ್ಜಿ. ಇಂಥ ಸಮಯದಲ್ಲೂ ತಾವೇ ಗಂಜಿ ಕಾಸಿ ಕುಡಿದವರು ಅವರು. ಈ ಲೋಕದಲ್ಲಿ ತಾವು ನಂಬಿದ್ದ ಪ್ರಾಣಿ ಎಂದರೆ ನಾಯಿ "ಕರಿಯ" ಮಾತ್ರ.

ಅದೂ ಒಂದು ದಿನ ತಾಯಿಯಿಲ್ಲದ ತಬ್ಬಲಿಯಾಗಿ ಗಂಗಜ್ಜಿಯ ಪಾಳುಮನೆಯ ಸುತ್ತ ಓಡಾಡುವಾಗ, ಕನಿಕರಬಂದು ಗಂಗಜ್ಜಿ ಅನ್ನ ಹಾಕಿದ್ದರು. ಅದನ್ನೇ ನೆಚ್ಚಿದ ನಾಯಿ ಗಂಗಜ್ಜಿಯನ್ನು ಬಿಟ್ಟು ಅಲುಗಲಿಲ್ಲ. ಗಂಗಜ್ಜಿಯೂ ಅದನ್ನು ಓಡಿಸಲಿಲ್ಲ. ಆಪತ್ಕಾಲದ ಬಂಧುವಂತೆ ಕಂಡರು.

ಇತ್ತೀಚೆಗಂತೂ ನಾಯಿ ಕರಿಯ ಗಂಗಜ್ಜಿಗೆ ಮಗ-ಬಂಧು-ಆತ್ಮೀಯ ಎಲ್ಲವೂ ಆಗಿದ್ದನು.

ರಾತ್ರಿ ಹೆಚ್ಚಾದಂತೆ ಮಳೆಯೂ ಜೋರಾಯಿತು. ಮಿಂಚು ಮುಗಿಲನ್ನು ಥಳಥಳಿಸ ತೊಡಗಿತು. ಗಂಗಜ್ಜಿಯ ಕೆಮ್ಮು ಜಾಸ್ತಿಯಾಗಿ ಉಬ್ಬಸ ಬರತೊಡಗಿತು.

ಅವರ ಬಾಳಿನ ನೆನಪಿನ ಬುತ್ತಿಯನ್ನೆಲ್ಲ ಬಿಚ್ಚಿ ಒಮ್ಮೆ ನೋಡಿದರು. ಅದೆಷ್ಟು ಅದು ಸುಂದರ ಸುಮಧುರ ಎನ್ನಿಸಿತು ಅವರಿಗೆ. ಅದುಹೇಗೆ ಆ ದಿನಗಳನ್ನು ಕಳೆದೆ ಎಂದುಕೊಂಡರು.

ಶಾಸ್ತ್ರಿಗಳ ನೆನಪಾಯಿತು. "ಈಗ ಅವರು ಮಗ್ಗುಲಲ್ಲಿದ್ದರೆ "ಹಾಯ್" ಎಂದು ಅಸುನೀಗಬಹುದಿತ್ತು. ತಾನು ನಿರ್ಭಾಗ್ಯಳು ತನ್ನ ಆಸೆಗಳು 'ತಿರುಕನ ಕನಸಿನಂತೆ' ಎಂದು ಮರುಗಿದರು.

ಶ್ರೀಕಂಠಶಾಸ್ತ್ರಿಗಳ ಮುಖಪರಿಚಯ ಅವರ ಕಣ್ಣಿನ ಮುಂದೆ ನಿಂತಿತು. ಕಣ್ಣು ಅರಳಿಸಿ ನೋಡಿದರು. ನೆರಳೊಂದು ಹತ್ತಿರ ಸುಳಿ ದಂತೆ ಭಾಸವಾಯಿತು ಅವರಿಗೆ.

"ಯಾರದು ?" ಶಕ್ತಿ ಉಡುಗಿ ಶಬ್ದ ಹೊರಡದಿದ್ದರೂ ನಾಲಗೆ ಚಲಿಸಿತು. ಆ ನೆರಳಿನ ಆಕೃತಿ ಇನ್ನೂ ಸಮೀಪಕ್ಕೆ ಬಂದಿತು. ಆಕೃತಿ ಹತ್ತಿರ ಬಂದಂತೆಲ್ಲಾ ಗಂಗಜ್ಜಿಯಲ್ಲಿ ಚೈತನ್ಯ ಮೂಡತೊಡಗಿತು.

"ಅವರೇ....ಅವರೇ !.... ನನ್ನ ದೊರೆ !" ಎಂದು ನಿಶ್ಶಬ್ದವಾಗಿ ಅಂದುಕೊಂಡರು.

ಆಕೃತಿ ಹತ್ತಿರವಾಗಿ ಗಂಗಜ್ಜಿಯ ಮಗ್ಗುಲಲ್ಲಿ ಕುಳಿತಿತು. ಅಂಥಾ ಅವಸ್ಥೆಯಲ್ಲೂ ಗಂಗಜ್ಜಿಯ ಮೈನವಿರೆದ್ದಿತು. ಆಕೃತಿ ತನ್ನೆರಡು ಕೈಗಳನ್ನು ಮುಂದೆನೀಡಿ ಗಂಗಜ್ಜಿಯ ತಲೆಯನ್ನು ಎತ್ತಿ ತನ್ನ ತೊಡೆಯ ಮೇಲೆ ಹಾಕಿಕೊಂಡಿತು. ಮೃದುವಾಗಿ ಗಂಗಜ್ಜಿಯ ಕೂದಲುಗಳನ್ನು ಒಮ್ಮೆ ನೇವರಿಸಿತು. ಗಂಗಜ್ಜಿಯ ಕಣ್ಣುಗಳನ್ನೇ ಆಕೃತಿ ದಿಟ್ಟಿಸಿತು. ಗಂಗಜ್ಜಿಯೂ ಕಣ್ಣಿಗೆ ಕಣ್ಣು ಕೂಡಿಸಿ ನೋಡಿದರು.

"ನನ್ನ ಭಾಗದ ದೇವರು ಬಂದರು" ಎಂದು ಕಣ್ಣೀರು ಕರೆದರು.

ಪಕ್ಕದಲ್ಲಿದ್ದ ದೀಪದ ಉರಿ ಮಂದವಾಗಿತ್ತು. ಎಣ್ಣೆ ಮುಗಿದು ಬರೀ ಬತ್ತಿ ಉರಿಯುತ್ತಿತ್ತು. ನಾಯಿ ಕರಿಯ ಗಂಗಜ್ಜಿಯನ್ನೇ ನೋಡು ತ್ತಿದ್ದ.

ಗಂಗಜ್ಜಿ ತನ್ನ ಪಾಳುಮನೆಯನ್ನೊಮ್ಮೆ ಸುತ್ತಲೂ ನೋಡಿದರು. ಕೊನೆಯ ಬಾರಿ ಕರಿಯನನ್ನು ನೋಡಿ ಕಣ್ಣು ತುಂಬಿಕೊಂಡರು.

ಹಾಗೆಯೇ ಕತ್ತೆತ್ತಿ ಆಕೃತಿಯನ್ನೊಮ್ಮೆ ನೋಡಿದರು. **ತತ್‌ಕ್ಷಣವೇ** ಗಂಗಜ್ಜಿಯ ಕಣ್ಣು ಮುಚ್ಚಿದವು. ತಲೆ ಪಕ್ಕಕ್ಕೆ ಬಾಗಿತು.

ದೀಪದ ಉರಿ ಒಮ್ಮೆ ದೊಡ್ಡದಾಗಿ ತಣ್ಣಗಾಯಿತು. ನಾಯಿ ಕರಿಯು ಕೆಟ್ಟ ಕನಸು ಕಂಡವನಂತೆ ಅಳತೊಡಗಿದನು. ಆ ರಾತ್ರಿಯೆಲ್ಲ ಅಳುತ್ತಲೇ ಇದ್ದ.

ಬೆಳಕು ಹರಿಯಿತು. ಬೀದಿಯವರೆಲ್ಲಾ ಒಟ್ಟುಗೂಡಿದರು. ಗಂಗಜ್ಜಿಯನ್ನು ಸ್ಮಶಾನಕ್ಕೆ ಒಯ್ದರು.

"ಅಂಥ ದೆವ್ವದಂಥಾ ಮನೆಯಲ್ಲಿ ಒಬ್ಬಳೇ ಕಾಲ ಹಾಕಿದಳಲ್ಲ ಗಟ್ಟಿಗಿತ್ತಿ"

"ಬಹಳ ಕಷ್ಟಜೀವಿ! ಹಣ್ಣುಹಣ್ಣು ಮುದುಕಿಯಾದರೂ ಮತ್ತೊಬ್ಬರ ಹಂಗಿನ ಕೂಳು ತಿನ್ನಲಿಲ್ಲ. ಇರುವಷ್ಟು ದಿನ ಕಾಯಕಮಾಡಿ ಕೊನೆಗೊಂಡಳು"

"ಆಕೆಯ ತಾಳ್ಮೆ ನಮಗೆ ಬಾರದು" ಎಂದು ಶ್ಮಶಾನದಲ್ಲಿ ನೆರೆದಿದ್ದ ಗಂಡಸರ ಹೆಂಗಸರ ಮಾತು ನಡೆದಿತ್ತು.

ಗಂಗಜ್ಜಿಯನ್ನು ಮಣ್ಣುಗೂಡಿಸಿದರು.

ಮೂರು ದಿನವಾದರೂ ಗಂಗಜ್ಜಿ ಮಲಗಿದ್ದ ಸ್ಥಳ ಬಿಟ್ಟು ಏಳಲಿಲ್ಲ ಕರಿಯ. ಅನ್ನ ಮುಟ್ಟಲಿಲ್ಲ. ಇಡೀ ರಾತ್ರಿ ಬೀದಿಯಲ್ಲಿ ಒಬ್ಬರಿಗೂ ನಿದ್ರೆ ಕೊಡಲಿಲ್ಲ. ಒಂದೇಸಮನೆ ಅಳುತ್ತಿದ್ದನು.

ನಾಲ್ಕನೇ ದಿನ ಕರಿಯ ಗಂಗಜ್ಜಿ ಮಲಗಿದ್ದ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದನು. ಅಲ್ಲೇ ಗುಂಡಿ ತೆಗೆದು ಅವನನ್ನೂ ಹೂತರು.

ಇಂದಿಗೂ ಗಂಗಜ್ಜಿಯ ಪಾಳುಮನೆ ಹಾಗೇ ಉಳಿದಿದೆ. ಸಂಜೆಯ ವೇಳೆ ಮಕ್ಕಳು ಆಡುವ ಜಾಗವೂ ಅದೇ ರಾತ್ರಿ, ವೇಳೆ ದಿಕ್ಕಿಲ್ಲದವರಿಗೆ ಮನೆಯೂ ಅದೇ ಆಗಿದೆ.

# ಕಿರ್ಲೋಸ್ಕರ್ ಬ್ರದರ್ಸ್ ಲಿ. ಇವರ

## ನೀರಾವರಿ ಪಂಪುಗಳು ಮತ್ತು ಮೋಟಾರುಗಳು

●

ತುಮಕೂರು ಜಿಲ್ಲೆಯಾದ್ಯಂತ ಸೌಕರ್ಯವಿರುವ
ಸ್ಥಳಗಳಿಗೆಲ್ಲಾ ನಾವೇ ಬಾಡಿಗೆ ವಹಿಸಿಕೊಂಡು ಕಿರ್ಲೋಸ್ಕರ್
ಬ್ರದರ್ಸ್ ತಯಾರಿಕೆಯಾದ ನೀರಾವರಿ ಪಂಪು ಮತ್ತು ಮೋಟಾರು
ಗಳನ್ನು ಕಂಪನಿ ಬೆಲೆಗೇ ಕೊಡುತ್ತೇವೆ.

---

ಅಧಿಕೃತ ಮಾರಾಟಗಾರರು :

# ಬಿ. ಗಂಗಣ್ಣ

ಕಿರ್ಲೋಸ್ಕರ್ ಏಜೆಂಟರು
ಚಿಕ್ಕನಾಯಕನಹಳ್ಳಿ

# ಬಿ. ದೊಡ್ಡಯ್ಯ

ಕಿರ್ಲೋಸ್ಕರ್ ಏಜೆಂಟರು
ಶಿರಾ

ಟೆಲಿಗ್ರಾಂ : ಫ್ಲೋ

ಕುಣಿಗಲ್ ತಾಲ್ಲೂಕು

# ಅಗ್ರಿಕಲ್ಚರಲ್ ಪ್ರಾಡ್ಯೂಸ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ, ಲಿಮಿಟೆಡ್

ಕುಣಿಗಲ್, ತುಮಕೂರು ಜಿಲ್ಲಾ

ಪ್ರಖ್ಯಾತವಾದ "ಕುಣಿಗಲ್ ಪ್ಲೋಸ್" ತಯಾರಕರು

ಜಪಾನ್ ಮಾದರಿ ಬತ್ತದ ಸಾಗುವಳಿಗೆ ಬೇಕಾದ
ಸಕಲ ವಿಧವಾದ ವ್ಯವಸಾಯ ಸಲಕರಣೆ,
ಗಾಣದ ಕೊಪ್ಪರಿಗೆ ಮುಂತಾದ
ಕಬ್ಬಿಣದ ಸಲಕರಣೆ ತಯಾರಿಸುತ್ತೇವೆ.
ಸೀಮೆಗೊಬ್ಬರ, ಸೀಮೆಂಟ್, ಜಿಂಕ್‌ಷೀಟ್
ಮತ್ತು ಬಿಲ್ಡಿಂಗ್ ಮೆಟೀರಿಯಲ್ಸ್ ದೊರೆಯುತ್ತೆ
ಎತ್ತಿನ ಗಾಡಿ ತಯಾರಿಸುತ್ತೇವೆ

ಎಲೆಕ್ಟ್ರಿಕ್ ವೆಲ್ಡಿಂಗ್, ಟರ್ನಿಂಗ್, ಕ್ಯಾಸ್ಟಿಂಗ್
ಸ್ಪ್ರೇಪೈಂಟಿಂಗ್ ಕೆಲಸಗಳಲ್ಲಿ ಖ್ಯಾತಿಗಳಿಸಿದೆ.

ಎಚ್. ಹುಚ್ಚಮಾಸ್ತಿಗೌಡ, ಬಿ.ಎ., ಎಂ.ಎಲ್.ಎ.
ಅಧ್ಯಕ್ಷರು

# ಸಹಕಾರ ಗೃಹಕೈಗಾರಿಕೆಗಳು, ಲಿ.,

## (ಮಾದರಿ ಗ್ರಾಮಕೈಗಾರಿಕಾ ಕೇಂದ್ರ)

ಎಲೆಕ್ಟ್ರಿಕ್ ಕಾಲೋನಿ ರಸ್ತೆ, ತುಮಕೂರು

ಅಭಿವೃದ್ಧಿ ಯೋಜನೆಯಲ್ಲಿ ಸಹಕಾರದ ಪಾತ್ರ

**ಗ್ರಾಮ ಕೈಗಾರಿಕೆಯ ವಿವಿಧ ಶಾಖೆಗಳು**

ಹೂವಿನ ಕುಂಡ, ಟಂಬ್ಲರ್, ಆಷ್‌ಟ್ರೆ, ಫ್ಲವರ್‌ವೆಸಲ್, ಕಪ್-ಸಾಸರ್,
ಷೇವಿಂಗ್ ಕಪ್, ಪ್ಲಿ ಕುರ್ಷ್, ಜಾಡಿ

**ಗಾಂಧಿ, ಬುದ್ಧ, ನಟರಾಜ ಮತ್ತು ದೇವರ ವಿಗ್ರಹಗಳು ಬೊಂಬೆಗಳು**

**ಸುಧಾರಿಸಿದ ಕಬ್ಬಿಣದ ಗಾಣ, ಮರದ ಏತ,**
**ಭತ್ತ ಒಡೆಯುವ ಕಲ್ಲು**
ತಯಾರಿಸುತ್ತೇವೆ.

**ಬೇವು ಮತ್ತು ಹಿಪ್ಪೆ ಮುಂತಾದ ಕಹಿ ಎಣ್ಣೆಯಿಂದ ತಯಾರಿಸಿದ**

# ಜನತ ಸಾಬೂನು

**ಈಗಾಗಲೇ ಜನಪ್ರಿಯವಾಗಿದೆ.**

**ಕೊಟ್ಟಣದ ಅಕ್ಕಿ, ಗಾಣದ ಎಣ್ಣೆ ಸದಾ ಸಿದ್ಧವಿದೆ.**

ತುಮಕೂರು ಜಿಲ್ಲೆಯ ಅಧಿಕೃತ ಮಾರಾಟಗಾರರು :

## ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್‌ರವರ
## ನೀರಾವರಿ ಪಂಪು ಮತ್ತು ಮೋಟಾರುಗಳು

| | |
|---|---|
| **ಕೆ. ವಿ. ಪುಟ್ಟಗಂಗಯ್ಯ** | **ಎಂ. ವೆಂಕಟೇಶಯ್ಯ** |
| ಅಧ್ಯಕ್ಷರು | ಕಾರ್ಯದರ್ಶಿಗಳು |

## ಡಿಸ್ಟ್ರಿಕ್ಟ್ ಕೋ-ಆಪರೇಟಿವ್

# ಸೆಂಟ್ರಲ್ ಬ್ಯಾಂಕ್ ಲಿ.,

**ಜಿಲ್ಲೆಯ ಸಹಕಾರ ಸಂಘಗಳಿಗೆ ಹಣವನ್ನೊದಗಿಸುವ**
**ಕೇಂದ್ರ ಬ್ಯಾಂಕ್**

**ಬಾರ್‌ಲೈನ್ ರಸ್ತೆ : : ತುಮಕೂರು**

**ರಾಷ್ಟ್ರ ಪ್ರಗತಿ ಪಥದಲ್ಲಿ........**

- ರೈತನ ಏಳಿಗೆಯೇ ರಾಷ್ಟ್ರದ ಏಳಿಗೆ.
- ಹೆಚ್ಚು ಬೆಳೆ ಬೆಳೆಯುವುದೇ ರಾಷ್ಟ್ರ ಸಂಪತ್ತನ್ನು ಹೆಚ್ಚಿಸುವ ಮಾರ್ಗ.
- ರೈತರಿಗೆ ಹೆಚ್ಚು ಬೆಳೆ ಬೆಳೆಯಲು ಸಹಕಾರ ಸಂಘಗಳ ಮೂಲಕ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ತಕಾವಿ ಸಾಲ ಮತ್ತು ಜೇಸಿಗೆ ವ್ಯವಸಾಯಕ್ಕೆ ಬೇಕಾಗುವ ಸಾಲ ಕೊಡಲಾಗುವುದು.

| | |
|---|---|
| ಅಧಿಕೃತ ಬಂಡವಾಳ | ರೂ. 2500000 |
| ಪಾವತಿಯಾದ ಷೇರು ಬಂಡವಾಳ | ರೂ. 1001000 |
| ಡಿಪಾಜಿಟ್ಟುಗಳು | ರೂ. 995000 |
| ಪಡೆದಿರುವ ಸಾಲಗಳು | ರೂ. 5197966 |
| ಕೊಟ್ಟಿರುವ ಸಾಲಗಳು | ರೂ. 7208425 |
| 58–59ನೇ ಸಾಲಿನ ಲಾಭ | ರೂ. 49273 |

ರೈತರು ತಮಗೆ ಸಮೀಪದಲ್ಲಿರುವ ಸಹಕಾರೀ ಸಂಘಗಳಿಗೆ
ಸದಸ್ಯರಾಗಿ ಸಾಲ ಪಡೆಯಬಹುದು.

**★ ಎಲ್ಲಾ ಬಗೆಯ ಡಿಪಾಜಿಟ್ ಸ್ವೀಕರಿಸಲಾಗುವುದು ★**

**ಎಂ. ಎನ್. ಸೂರ್ಯನಾರಾಯಣಪ್ಪ,** ಬಿ.ಎಸ್‌ಸಿ.,
ಸೆಕ್ರೆಟರಿ

**ಬಿ. ಎನ್. ರಾಮೇಗೌಡ**
ಪ್ರೆಸಿಡೆಂಟ್

# ಜಸಿಂತ ಪ್ಲಂಬಿಂಗ್ ಅಂಡ್ ಸ್ಯಾನಿಟರಿ ಸ್ಟೋರ್ಸ್

**ಫೋನ್ ನಂ. 155 : : ಗುಂಚಿಚೌಕ : : ತುಮಕೂರು**

ಲೈಸೆನ್ಸ್ಡ್ ಪ್ಲಂಬರ್ಸ್ ಅಂಡ್ ಸ್ಯಾನಿಟರಿ ಕಂಟ್ರಾಕ್ಟರ್ಸ್

ಸ್ಟಾಕಿಸ್ಟ್ಸ : ಎವರೆಸ್ಟ್ ಅಸ್‌ಬೆಸ್ಟೋಸ್ ಸಿಮೆಂಟ್ ಪ್ರಾಡಕ್ಟ್ಸ

ಪ್ರೊಪ್ರೈಟರ್ ; ಟಿ. ಜಿ. ಪುಟ್ಟರಾಜು

- ಅಸ್‌ಬೆಸ್ಟೋಸ್ ಸಿಮೆಂಟ್ ರೈನ್‌ವಾಟರ್ ಪೈಪುಗಳು
- ನಲ್ಲಿಪೈಪುಗಳು
- ಸಾಯಿಲ್ ಪೈಪುಗಳು
- ಪೈಪ್ ಫಿಟಿಂಗ್ಸ್ ಮತ್ತು ಬಾತ್‌ರೂಂ ಫಿಟಿಂಗ್ಸ್ ಸಾಮಾನುಗಳು
- ಸ್ಯಾನಿಟರಿ ಕೆಲಸಕ್ಕೆ ಬೇಕಾಗುವ ಎಲ್ಲಾ ವಿಧವಾದ ಪೋರ್ಸಿಲೈನ್ ಮತ್ತು ಸ್ಟೋನ್‌ವೇರ್ ಸಾಮಾನುಗಳು ದೊರೆಯುತ್ತವೆ

**ಅಸ್‌ಬೆಸ್ಟೋಸ್ ಸಿಮೆಂಟ್ ರೂಫಿಂಗ್ ಮತ್ತು ಪ್ಲೈನ್‌ಶೀಟ್ಸ್, ನಲ್ಲಿಕೆಲಸ ಮತ್ತು ಫ್ಲಷ್ ಕಕ್ಕಸುಗಳ ಕೆಲಸಗಳಿಗೆ ವಿಚಾರಿಸಿರಿ.**

---

# ಅಲಂಕಾರ್ ಜ್ಯೂಯಲರ್ಸ್

**ಪ್ರೊ. : ಎಂ. ಎಸ್. ವೀರಭದ್ರಶೆಟ್ಟಿ**

## ಮಂಡಿಪೇಟೆ, ತುಮಕೂರು

**ಯಾವಾಗಲೂ ಎಂ. ಎಸ್. ವಿ. ಟ್ರೇಡ್‌ಮಾರ್ಕಿನ ಒಡವೆಗಳನ್ನೇ ಉಪಯೋಗಿಸಿರಿ.**

ಆಕರ್ಷಣೀಯವಾದ ಎಲ್ಲಾ ತರಹೆಯ ಒಡವೆ ದೊರೆಯುತ್ತವೆ.

ಆರ್ಡರಿನ ಮೇಲೆ ಗ್ಯಾರಂಟಿಯಾದ ಚಿನ್ನ, ಬೆಳ್ಳಿ ಒಡವೆಗಳನ್ನು ಸಕಾಲಕ್ಕೆ ತಯಾರಿಸಿಕೊಡುತ್ತೇವೆ.

ಜಾತಿ ವಜ್ರಗಳಿಗೆ ಸಮನಾದ ರಂಗೂನ್ ವಜ್ರಗಳು ನಮ್ಮಲ್ಲಿ ಸಿಗುತ್ತವೆ.

**● ತುಮಕೂರಿನ ಜನತೆಯ ನಂಬಿಕೆಗೆ ಪಾತ್ರವಾಗಿರುವ ಅಂಗಡಿ ●**

Firm Approved by the Govt. of India (BAN-SIMECH-134-59)
Firm Approved by the Govt. of Mysore (S.P.C. No. 2359)

ಒಕ್ಕಲುತನಕ್ಕೆ ಬೇಕಾದ ಎಲ್ಲಾ ಉಪಕರಣಗಳು, ಮನೆ ಕಟ್ಟಡದ
ಮತ್ತು ಮನೆ ಕೆಲಸದ ಸಾಮಾನುಗಳು, ಸ್ಟೀಲ್ ಫರ್ನೀಚರ್ ಸಹ
ಉತ್ತಮ ದರ್ಜೆಯಲ್ಲಿ ತಯಾರಿಸುತ್ತೇವೆ.

## ಕ್ಯಾಸ್ಟಿಂಗ್. ಟರ್ನಿಂಗ್, ವೆಲ್ಡಿಂಗ್, ಡ್ರಿಲಿಂಗ್
## ಕಟಿಂಗ್, ಗ್ರೈಂಡಿಂಗ್, ಮಾಡುತ್ತೇವೆ.

**ಕೆ.ಎಂ.ಪ್ಲೋ, ಯುರೇಕ ಪ್ಲೋ, ಕಲ್ಟಿವೇಟರ್, ಗುರ್‌ಜಾರ್ ಪ್ಲೋ,
ಬಕ್‌ಸ್ಕ್ರೇಪರ್, ಬಂಡ್‌ಫಾರ್ಮರ್, ಟ್ರಾಂಸ್ಪ್ಲರ್, ಪ್ಯಾಡಿ ವೀಡರ್,
ಪ್ಯಾಡಿ ಫುಡ್ಲರ್, ಜಾಗರಿ ಪ್ಯಾನ್, ಸೀಡ್ ಡ್ರಿಲ್,
ವೀಲ್‌ಬ್ಯಾರೊ, ಸೀಡ್ ಡ್ರೆಸಿಂಗ್ ಡ್ರಂ**
ಮೊದಲಾದವುಗಳನ್ನು ತಯಾರಿಸಿಕೊಡುತ್ತೇವೆ.

ಕೇಂದ್ರ ಮತ್ತು ರಾಜ್ಯದ ವ್ಯವಸಾಯ ಮಂತ್ರಿಗಳಿಂದ ಮೆಚ್ಚಿಗೆ ಪಡೆದಿರುವ
ಮತ್ತು ಮೈಸೂರು ರಾಜ್ಯದಲ್ಲೆಲ್ಲಾ ಖ್ಯಾತಿ ಪಡೆದಿರುವ ನಮ್ಮ ಇಂಡಸ್ಟ್ರೀಸಿನ
ವ್ಯವಸಾಯದ ಉಪಕರಣಗಳನ್ನೇ ಉಪಯೋಗಿಸಿ.

# ಶಿವ ಇಂಡಸ್ಟ್ರೀಸ್

## ತುಮಕೂರು

**ಪ್ರೊ : ಸಿ. ಪಿ. ಸದಾಶಿವಯ್ಯ**

**ಫೋನ್ ನಂ.: ಆಫೀಸ್ 135, ರೆಸಿಡೆನ್ಸ್ 148**

## SHIVA INDUSTRIES, TUMKUR

# ಚಂದ್ರ ಮೆಡಿಕಲ್ ಹಾಲ್

ಔಷಧಿ ವ್ಯಾಪಾರಿಗಳು

ಮಂಡಿಪೇಟೆ : : ತುಮಕೂರು

ಹೊಸದಾಗಿ ತೆರೆದಿದ್ದರೂ ಬಹುಬೇಗ ಬಹುಜನರ
ವಿಶ್ವಾಸವನ್ನು ಗಳಿಸಿರುವ ನೋಲ್ಕಂಡ
ಮೆಡಿಕಲ್‌ಹಾಲ್‌ನಲ್ಲಿ

ಎಲ್ಲ ವಿಧವಾದ ಔಷಧಿಗಳು ಸುಲಭ
ಬೆಲೆಗೆ ದೊರೆಯುತ್ತವೆ.

ಬಹು ಸುಲಭ ಬೆಲೆ ! ಉತ್ತಮವಾದ ಔಷಧಿಗಳು !

* ಇಂಜಕ್ಷನ್ ಟ್ಯೂಬುಗಳು
* ಪೇಟೆಂಟ್ ಔಷಧಿಗಳು
* ಔಷಧಿ ಮಾತ್ರೆಗಳು
* ಟಾನಿಕ್‌ಗಳು

ಅವು-ಇವು ಎನ್ನದೆ ಯಾವ ಔಷಧಿಗಳಿಗಾದರೂ ತತ್‌ಕ್ಷಣ

ಚಂದ್ರ ಮೆಡಿಕಲ್ ಹಾಲ್‌ನವರ

ಸೇವೆ ತೆಗೆದುಕೊಳ್ಳಿ.

ಅನಿವಾರ್ಯದ ಆವಶ್ಯಕತೆಗಳು ಒದಗಿದಾಗ ನಮ್ಮ ಮೆಡಿಕಲ್ ಹಾಲ್
ಜ್ಞಾಪಿಸಿಕೊಳ್ಳಿರಿ.

ಫೋನ್ ನಂ. 125

ಜಿ. ಆರ್. ಸಿದ್ದಬಸವಯ್ಯ ಸನ್

# ಲಂಚ್ ಹೋಂ

ಮಂಡಿಪೇಟೆ, ತುಮಕೂರು

ನಮ್ಮಲ್ಲಿದ್ದರೂ
ನಿಮ್ಮ ಮನೆಯಲ್ಲಿರುವಂತೆ
ಭಾಸವಾಗುವ ತುಮಕೂರು ನಗರದ
ಶುಚಿ-ರುಚಿ-ಮನಸ್ಸಿಗೊಪ್ಪುವ
ತಿಂಡಿ-ಊಟ-ವಸತಿ ಸೌಕರ್ಯವಿರುವ
ಏಕೈಕ ಸರ್ವ ಜನಾದರಣೀಯ ಹೋಟೆಲ್

ಚೊಕ್ಕವಾದ ಭೋಜನ
ಶುಚಿಯಾಗಿ ಬಡಿಸುವಿಕೆ
ರುಚಿಯಾದ ತಿನಿಸುಗಳು
ನಿರ್ಮಲವಾದ ಮಾತು
ಇವಿದ್ದರೆ ಸ್ವರ್ಗಕ್ಕೆ ಕಿಚ್ಚಿಡಬಹುದು

ಇವಿಷ್ಟನ್ನೂ ಪೂರೈಸಬಲ್ಲುದು !

## ಲಂಚ್ ಹೋಂ ಹೋಟೇಲ್ !

ಪರೀಕ್ಷೆಗಾಗಿ ಒಮ್ಮೆ ಸಂದರ್ಶಿಸಿರಿ

ಪ್ರೊ. : ಜಿ. ಎಸ್. ದೊಡ್ಡವೀರಯ್ಯ

## ಫೋನ್ ನಂ. 63

ರೆಫ್ರಿಜಿಯೇಟರಿನ ಶುದ್ಧವಾದ ತಂಪಾದ
ಪಾನೀಯಗಳನ್ನು ಸವಿಯಿರಿ.



ತುಮಕೂರಿನ ಶ್ರೀ ಟಿ. ಹೆಚ್. ಹೊನ್ನಗಂಗಪ್ಪನವರು ಸಾಹಿತ್ಯಕ್ಷೇತ್ರಕ್ಕೆ ಅಭ್ಯರ್ಥಿಯಾಗಿ ತಮ್ಮ ಬರಹಗಳ ಸಂಗ್ರಹವನ್ನು ಪ್ರಕಟಿಸುವುದರ ಮೂಲಕ ಅಭ್ಯರ್ಥನಾ ಪತ್ರವನ್ನು ಸಲ್ಲಿಸುತ್ತಿದ್ದಾರೆ.........

ಪರಸ್ಪರ ಸಂವಾದಿಯಾದ ಎರಡು ಕಥೆ ಅಥವಾ ಘಟನೆಗಳ ಮೂಲಕ ಕಥೆಯನ್ನು ಹೇಳುವುದು, ಕೊನೆಯತನಕ ಓದುಗರ ಕುತೂಹಲವನ್ನು ತಡೆಹಿಡಿಯುವುದು ಇಲ್ಲಿಯ ಕಥಾ ತಂತ್ರದ ವಿಶಿಷ್ಟ ಲಕ್ಷಣ. ಕಥೆಗಾರರ ಶೈಲಿಯಲ್ಲಿ ನುರಿತ ಕೈವಾಡ ಎದ್ದು ಕಾಣುತ್ತದೆ..........

ಈ ಕಥಾ ಸಂಕಲನ ಕತೆಗಾರರ ಭವಿಷ್ಯದ ಆಶಾಕಿರಣವಾಗಿದೆ. ಅಭ್ಯಾಸ ಸಾಧನೆಗಳಿಂದ ಅವರು ಉತ್ತಮ ಸಾಹಿತಿಯಾಗಬಲ್ಲ ಶಕ್ತಿ, ಸಾಮರ್ಥ್ಯ ಅವರಲ್ಲಿವೆಯೆಂದು ಧಾರಾಳವಾಗಿ ಹೇಳಬಹುದು..........

— ಕೆಳೆನುಡಿಯಿಂದ